# ಅಭಿನಯ ವಿಶಾರದೆ

## ಮಳವಳ್ಳಿ ಸುಂದರಮ್ಮನವರ ಆತ್ಮಕಥೆ




ನಿರೂಪಣೆ

ಹ.ವೆಂ. ಸೀತಾರಾಮಯ್ಯ

ಪರಿಷ್ಕರಣೆ

ಗುಡಿಹಳ್ಳಿ ನಾಗರಾಜ



ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಅಭಿನಯ ವಿಶಾರದೆ

## ಮಳವಳ್ಳಿ ಸುಂದರಮ್ಮನವರ ಆತ್ಮಕಥೆ

ನಿರೂಪಣೆ :

ಹ. ವೆಂ. ಸೀತಾರಾಮಯ್ಯ

ಪರಿಷ್ಕರಣೆ :

ಗುಡಿಹಳ್ಳಿ ನಾಗರಾಜ

ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜಯಚಾಮರಾಜೇಂದ್ರ ರಸ್ತೆ,

ಬೆಂಗಳೂರು - ೫೬೦ ೦೦೨

**Abhinaya Visharade**
An Autobiography of **Smt. Malavalli Sundaramma**
First Impression : May, 1975
Narration : Ha.Vem. Seetharamaiah.

Revised Second Impression : September 2005
Edited by Gudihalli Nagaraja

Published by
H. Shankarappa
Registrar, Karnataka Nataka Academy
Kannada Bhavana, J.C. Road, Bangalore - 560 002.

| | |
|---|---|
| Pages | : 70 + 14 + 8 |
| Cover Design | : Bhairesh |
| © | : Author |
| Copies | : 1000 |
| Price | : Rs. 50/- |

Printed by
Geervani Mudrana, # 425/H, 5th Cross, Hosahalli,
Vijayanagar, Bangalore - 560 040. Mobile : 98451 84267

| | | |
|---|---|---|
| ಅಭಿನಯ ವಿಶಾರದೆ | : | ಮಳವಳಿ ಸುಂದರಮ್ಮನವರ ಆತ್ಮಕಥೆ |
| ನಿರೂಪಣೆ | : | ಹ.ವೆಂ. ಸೀತಾರಾಮಯ್ಯ |
| ಪರಿಷ್ಕರಣೆ | : | ಗುಡಿಹಳ್ಳಿ ನಾಗರಾಜ |
| ಮುಖಪುಟ ವಿನ್ಯಾಸ | : | ಭೈರೇಶ್ |
| ಪ್ರಕಾಶಕರು | : | ಎಚ್. ಶಂಕರಪ್ಪ<br>ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ<br>ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨ |
| ಪರಿಷ್ಕೃತ ಮುದ್ರಣ | : | ಸೆಪ್ಟೆಂಬರ್, ೨೦೦೫ |
| ಪುಟ | : | 70 + 14 + 8 |
| ಬೆಲೆ | : | ರೂ. ೫೦/- |
| ಮುದ್ರಣ | : | ಗೀರ್ವಾಣಿ ಮುದ್ರಣ<br>ಸಂ. ೪೨೫ / ಹೊ, ೫ನೇ ತಿರುವು, ಹೊಸಹಳ್ಳಿ,<br>ವಿಜಯನಗರ, ಬೆಂಗಳೂರು - ೪೦. |

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಅನೇಕ ವೈವಿಧ್ಯಮಯ ಕೃತಿಗಳನ್ನು ಈಗಾಗಲೇ ಪ್ರಕಟಿಸಿದೆ. ರಂಗಭೂಮಿಯ ಬಗ್ಗೆ ಬೆಳಕು ಚೆಲ್ಲುವ ಮತ್ತು ಅನೇಕ ವಿಚಾರಗಳನ್ನು ದಾಖಲಿಸುವ ದೃಷ್ಟಿಯಿಂದ ಈ ಕೃತಿಗಳು ಅತ್ಯಂತ ಮೌಲ್ಯಯುತವಾದವುಗಳು. ಕೆಲವು ವಿರಳ ನಾಟಕಗಳನ್ನು ಪ್ರಕಟಿಸಿರುವುದು ಮಾತ್ರವಲ್ಲದೆ ರಂಗಸಂಗೀತ, ಪ್ರಸಾಧನ ಮತ್ತು ವಿಮರ್ಶಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನು ಈ ಕೃತಿಗಳು ಒಳಗೊಂಡಿವೆ. ವ್ಯಕ್ತಿ ವಿಚಾರಗಳನ್ನೊಳಗೊಂಡ 35ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಲಾಗಿದೆ. 400ಕ್ಕೂ ಹೆಚ್ಚು ಕಲಾವಿದರ ಮಾಹಿತಿಗಳನ್ನೊಳಗೊಂಡ ರಂಗಕಲಾವಿದರು ಮತ್ತು ರಂಗಸಂಘಟಕರು ಕೃತಿಗಳು ಸೇರಿದಂತೆ 50ಕ್ಕೂ ಹೆಚ್ಚು ಕೃತಿಗಳನ್ನು ಅಕಾಡೆಮಿ ಪ್ರಕಟಿಸಿದೆ. ಈ ಸಾಲಿನ ಅಕಾಡೆಮಿ ವಿಶೇಷವಾಗಿ ವೃತ್ತಿರಂಗಭೂಮಿ ಮತ್ತು ಗ್ರಾಮೀಣ ರಂಗಭೂಮಿಗೆ ಹೆಚ್ಚು ಒತ್ತು ನೀಡಿ ಅನೇಕ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

ಕನ್ನಡ ವೃತ್ತಿರಂಗಭೂಮಿಗೆ ಮೆರಗನ್ನು ತಂದುಕೊಟ್ಟ ಅತ್ಯಂತ ಪ್ರತಿಭಾನ್ವಿತ ಕಲಾವಿದರಲ್ಲಿ ಶ್ರೀಮತಿ ಮಳವಳ್ಳಿ ಸುಂದರಮ್ಮ ಬಹುಮುಖ್ಯರು. ತಮ್ಮ ಗಾಯನ, ಅಭಿನಯ ಮತ್ತು ಸೌಂದರ್ಯದಿಂದ ಸಹಸ್ರಾರು ಸಂಖ್ಯೆ ಅಭಿಮಾನಿಗಳನ್ನು ಹೊಂದಿದ್ದ ಅಭಿನೇತ್ರಿ ಅವರು.

ಪುರುಷರೇ ಸ್ತ್ರೀ ಪಾತ್ರ ವಹಿಸುತ್ತಿದ್ದ ಕಾಲದಲ್ಲಿ ಅವರಿಗೆ ಸರಿಸಮಾನಾಗಿ ಪಾತ್ರ ವಹಿಸುವುದು ಬಹು ಕಷ್ಟವಾಗಿದ್ದ ಮತ್ತು ಸ್ತ್ರೀಯರು ರಂಗಭೂಮಿಗೆ ಬರಲು ಹಿಂದೆ ಮುಂದೆ ನೋಡುತ್ತಿದ್ದ ಸಂದರ್ಭದಲ್ಲಿ ಮಳವಳ್ಳಿ ಸುಂದರಮ್ಮನ ಪ್ರವೇಶ ಮತ್ತು ಅವರ ಪ್ರತಿಭೆ ರಂಗಭೂಮಿಗೆ ದೊಡ್ಡ ಕೊಡುಗೆಯಾಗಿತ್ತು. ನಟಿಯಾಗಿ ಮಾತ್ರವಲ್ಲದೆ ಕಂಪನಿಯ ಮಾಲೀಕರಾಗಿ ನೂರಾರು ಕಲಾವಿದರಿಗೆ ದಾರಿದೀಪವಾಗಿದ್ದರು. ಕೈಲಾಸಂ ಅವರಂತಹ ನಾಟಕಕಾರರು ಮಾತ್ರವಲ್ಲ, ಮೈಸೂರು ಮಹಾರಾಜರೂ ಸಹ ಮಳವಳ್ಳಿ ಸುಂದರಮ್ಮನವರ ಅಭಿನಯಕ್ಕೆ ಮಾರುಹೋದವರು.

ಇದೀಗ ಸುಂದರಮ್ಮನವರ ಶತಮಾನೋತ್ಸವ ವರ್ಷ. ನಾಟಕ ಅಕಾಡೆಮಿ ಅವರ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಸುಂದರಮ್ಮನವರ ಅಭಿನಯ ಮತ್ತು ಜೀವನ ಶೈಲಿ ಇಂದಿನ ಯುವ ಕಲಾವಿದರಿಗೆ ಆದರ್ಶಪ್ರಾಯವಾದದ್ದು. ಸುಂದರಮ್ಮನವರ ಜೀವನ ಮತ್ತು ಸಾಧನೆಗಳನ್ನು ಒಳಗೊಂಡಿರುವ ಪತ್ರಕರ್ತ, ಲೇಖಕ ದಿ॥ ಹ.ವೆಂ. ಸೀತಾರಾಮಯ್ಯನವರ ಅಭಿನಯ ಶಾರದೆ ಈಗ ಎಲ್ಲೂ ಲಭ್ಯವಿಲ್ಲ. ಹಾಗಾಗಿ ಪತ್ರಕರ್ತ ಮಿತ್ರ, ಗುಡಿಹಳ್ಳಿ ನಾಗರಾಜ ಅವರಿಂದ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಲಾಗುತ್ತಿದೆ.

ಮಳವಳ್ಳಿ ಸುಂದರಮ್ಮನವರ ಬಗ್ಗೆ ಮಾಹಿತಿ ಸಂಗ್ರಹಿಸುವಲ್ಲಿ ನೆರವಾದ ಭಾರತ ಯಾತ್ರಾಕೇಂದ್ರದ ನಾಗರಾಜಮೂರ್ತಿ ಅವರಿಗೂ, ಅಗತ್ಯ ಮಾಹಿತಿ ಮತ್ತು ಭಾವಚಿತ್ರಗಳನ್ನು ನೀಡಿದ ಶ್ರೀಮತಿ ಸರೋಜಮ್ಮ ಮತ್ತು ಕುಟುಂಬದವರಿಗೆ ಧನ್ಯವಾದಗಳು.

22-09-2005

- ಶ್ರೀನಿವಾಸ ಜಿ. ಕಪ್ಪಣ್ಣ

# ಕೃತಿ ಪ್ರವೇಶಕ್ಕೆ ಮುನ್ನ

ಮಳವಳ್ಳಿ ಸುಂದರಮ್ಮ ಎಂಬ ಅಪ್ರತಿಮ ಕಲಾವಿದೆ ಜನಿಸಿ ಇದೇ ಸೆಪ್ಟೆಂಬರ್ 12ಕ್ಕೆ ನೂರು ವರ್ಷ ತುಂಬುತ್ತದೆ ಎಂದು ವಾಚಕರೊಬ್ಬರು ನೆನಪಿಸಿ ಪ್ರಜಾವಾಣಿಗೆ ಪತ್ರ ಬರೆದಿದ್ದರು. ಈ ಸಂದರ್ಭಕ್ಕೆ ಅವರ ಕುರಿತು ಲೇಖನ ಸಿದ್ಧಪಡಿಸಿಕೊಡುವಂತೆ ಸಂಪಾದಕ ಆರ್.ಪಿ. ಜಗದೀಶ್ ಹಾಗೂ ಸಾಪ್ತಾಹಿಕ ಪುರವಣಿ ಸಂಪಾದಕ ಪ್ರೇಮಕುಮಾರ್ ಹರಿಯಬ್ಬೆ ಅವರು ನನಗೆ ಹೇಳಿದರು.

ರಂಗಭೂಮಿಯ ಕುರಿತು ಕನ್ನಡದಲ್ಲಿ ಪ್ರಕಟವಾಗಿರುವ ಕೆಲವೇ ಗ್ರಂಥಗಳಲ್ಲಿ ಅಲ್ಲಲ್ಲಿ ಪ್ರಸ್ತಾಪವಾಗಿರುವ ಹಾಗೂ ಹಿರಿಯ ಲೇಖಕ ಬಿ. ಎಸ್. ಕೇಶವರಾವ್ ಅವರು ಸುಂದರಮ್ಮನವರ ಕುರಿತು ಬರೆದಿರುವ ಲೇಖನವೊಂದನ್ನು ಓದಿ ಈ ಮಹಾನ್ ಚೇತನದ ಕಿರು ಪರಿಚಯ ಪಡೆದಿದ್ದ ನನಗೆ ಅಷ್ಟು ಮಾಹಿತಿ ಸಾಲದೆನಿಸಿತು. ಹಿರಿಯ ಕಲಾವಿದರನ್ನು ಹುಡುಕಿಕೊಂಡು ಹೊರಟೆ. ಸ್ತ್ರೀ ನಾಟಕ ಮಂಡಳಿಯ ಆರ್. ನಾಗರತ್ನಮ್ಮ, ಆರ್. ಮಂಜುಳ, ಆರ್. ಪರಮಶಿವನ್, ಎಂ. ಎಸ್. ಉಮೇಶ ಮುಂತಾದ ಕಲಾವಿದರನ್ನು ಸಂಪರ್ಕಿಸಿದೆ.

ಸುಂದರಮ್ಮನವರು ಉತ್ತುಂಗದಲ್ಲಿದ್ದ ಕಾಲದಲ್ಲಿ (1930-40) ಅದೇ ತಾನೇ ರಂಗಪ್ರವೇಶಿಸಿದ್ದ ಈ ಹಿರಿಯ ಕಲಾವಿದರು ಸುಂದರಮ್ಮನವರನ್ನು ಕುರಿತು ಬಣ್ಣಿಸಿದ್ದನ್ನು ಕೇಳಿ ನಾನು ತುಂಬಾ ಪ್ರಭಾವಿತನಾದೆ. ಹಾಡುಗಾರಿಕೆ ಹಾಗೂ ಅಭಿನಯ ಎರಡರಲ್ಲೂ ಅವರು ಮೇರು ಪರ್ವತವೇ ಆಗಿದ್ದರು ಎಂಬುದು ಇವರ ಮಾತುಗಳಿಂದ ಖಚಿತವಾಯಿತು.

ಸುಂದರಮ್ಮ ಕೊನೆಯ ಕಾಲದಲ್ಲಿ ಬೆಂಗಳೂರಿನಲ್ಲೇ ವಾಸಿಸಿದವರು. ಹಾಗಾದರೆ ಅವರ ಮಕ್ಕಳು - ಬಂಧುಬಳಗ ಎಲ್ಲಿ ? ಈ ಪ್ರಶ್ನೆಗೆ ಮಾತ್ರ ಉತ್ತರ ಸಿಕ್ಕಲಿಲ್ಲ. ಸುಂದರಮ್ಮ ಅವರಿಗೆ ವಿರೂಪಾಕ್ಷಯ್ಯ ಎಂಬ ಒಬ್ಬನೇ ಮಗನಿದ್ದ. 1980 ರಲ್ಲಿ ಶಬರಿಮಲೈಗೆ ಹೋದವರು ವಾಪಸ್ ಬರಲೇ ಇಲ್ಲ. ಅವರ ಮಕ್ಕಳು, ಬಂಧುಗಳು ಎಲ್ಲಿದ್ದಾರೆ ಎಂಬುದು ತಿಳಿಯದು ಎಂದು ಸಂಗೀತತಜ್ಞ ಪರಮಶಿವನ್ ಹೇಳಿದರು. ಸುಂದರಮ್ಮನವರ ಪರಿವಾರದ ಬಗ್ಗೆ ವಿವರ ಪಡೆಯುವುದನ್ನು ಕೈಬಿಟ್ಟು ಪ್ರಜಾವಾಣಿಗೆ ಲೇಖನ ಬರೆದೆ.

ಇದೇ ಸಂದರ್ಭದಲ್ಲಿ ಕ್ರಿಯಾಶೀಲ ರಂಗಸಂಘಟಕ ಶ್ರೀ ಕೆ.ವಿ. ನಾಗರಾಜಮೂರ್ತಿ ಅವರು ಸುಂದರಮ್ಮನವರ ಜನ್ಮ ಶತಮಾನೋತ್ಸವ ನೆನಪಿಗೆ ಭಾರತ ಯಾತ್ರಾ ಕೇಂದ್ರದ ಮೂಲಕ ಸಮಾರಂಭವೊಂದನ್ನು ನಡೆಸುವ ಸಿದ್ಧತೆಯಲ್ಲಿ ತೊಡಗಿದ್ದರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಸುಂದರಮ್ಮನವರ ಕುರಿತು ಕಾರ್ಯಕ್ರಮ ಯೋಜಿಸುತ್ತಿದ್ದರು. ಫಲವಾಗಿ ಭಾರತ ಯಾತ್ರಾಕೇಂದ್ರ, ಕರ್ನಾಟಕ ನಾಟಕ ಅಕಾಡೆಮಿ ನೆರವಿನೊಂದಿಗೆ ಸೆಪ್ಟೆಂಬರ್ 12 ರಂದು ಸುಂದರಮ್ಮನವರ ಸ್ಮರಣೆ ಹಾಗೂ ಅವರೊಂದಿಗೆ ಅಭಿನಯಿಸಿದ ಹಿರಿಯ ಕಲಾವಿದರಿಗೆ ಸನ್ಮಾನ ಏರ್ಪಡಿಸಿರುವುದಾಗಿ ಪ್ರಕಟಿಸಿದರು.

ಪತ್ರಿಕೆಗಳಲ್ಲಿ ಈ ಸುದ್ದಿ ಹಾಗೂ ನನ್ನ ಲೇಖನ ಓದಿದ ಸುಂದರಮ್ಮನವರ ಕುಟುಂಬದವರು ಅಕಾಡೆಮಿಯ ಕಚೇರಿಗೆ ಧಾವಿಸಿ ಬಂದರು. ಸುಂದರಮ್ಮನವರ ಪುತ್ರ ವಿರೂಪಾಕ್ಷಯ್ಯನವರಿಗೆ ಶಿವಪ್ರಕಾಶ್, ಸೋಮಶೇಖರ್, ಶಶಿಧರ್, ಹಿಮೇಶ್ ಎಂಬ ಪುತ್ರರು, ಭ್ರಮರಾಂಭ, ಉಮಾದೇವಿ, ಸಂಧ್ಯಾ ಎಂಬ ಪುತ್ರಿಯರು ಇದ್ದು ಸಮಾರಂಭಕ್ಕೆ ಹಲವರು ಬಂದಿದ್ದರು.

ನಮ್ಮ ಅಜ್ಜ ಇಷ್ಟು ದೊಡ್ಡ ವ್ಯಕ್ತಿಯೇ ? ಎಂದು ಅವರಲ್ಲಿ ಕೆಲವರಿಗೆ ಅಚ್ಚರಿಯಾಯಿತು! ವೃತ್ತಿ ರಂಗಭೂಮಿ ಕೊಡುಗೆಯನ್ನು ಉಪೇಕ್ಷಿಸಿದ್ದರ ಫಲವಾಗಿ ಅದರ ಮಹತ್ವ ಎಲ್ಲೆಡೆಯೂ ಪಸರಿಸದೆ ಹೋದ ಫಲ ಇದು. ಕೋಲಶಾಂತಪ್ಪ ವೃತ್ತಿ ರಂಗಭೂಮಿಯ ಮಹತ್ವದ ಸಾಮಾಜಿಕ ನಾಟಕಕಾರರು. ದಾವಣಗೆರೆ ಅವರ ಹುಟ್ಟೂರು. ದಾವಣಗೆರೆಯಲ್ಲಿ 1994ರಲ್ಲಿ ನಡೆದ ವೃತ್ತಿ ರಂಗಕಲಾವಿದರ ಸಮ್ಮೇಳನದಲ್ಲಿ ವೇದಿಕೆಯೊಂದಕ್ಕೆ ಕೋಲಶಾಂತಪ್ಪ ಅವರ ಹೆಸರಿಡುವ ಸಿದ್ಧತೆ ನಡೆದಿದ್ದಾಗ ಸ್ವತಃ ಅವರ ಮೊಮ್ಮಕ್ಕಳೇ ಬಂದು ನಮ್ಮ ಅಜ್ಜ ಇಷ್ಟು ದೊಡ್ಡ ವ್ಯಕ್ತಿಯಾಗಿದ್ದರೇ ಎಂದು ಸಂಘಟಕರನ್ನು ಪ್ರಶ್ನಿಸಿದ್ದು ನನಗೆ ನೆನಪಿಗೆ ಬಂತು.

ಸೆಪ್ಟೆಂಬರ್ 12ರ ಸಮಾರಂಭದ ಹೊತ್ತಿಗೆ ಆದ ಮತ್ತೊಂದು ಪ್ರಯೋಜನವೆಂದರೆ ಹ.ವೆಂ. ಸೀತಾರಾಮಯ್ಯ ನಿರೂಪಿಸಿರುವ ಮಳವಳ್ಳಿ ಸುಂದರಮ್ಮನವರ ಆತ್ಮಕತೆ 'ಅಭಿನಯ ವಿಶಾರದೆ' ಎಂಬ ಅಪರೂಪದ ಪುಸ್ತಕದ ಪ್ರತಿಯೊಂದು ಲಭ್ಯವಾದದ್ದು. ಕನ್ನಡದ ಜನಪ್ರಿಯ ವಾರಪತ್ರಿಕೆ ಸುಧಾದಲ್ಲಿ 1971ರಲ್ಲಿ 9 ವಾರ ಕಾಲ ಧಾರಾವಾಹಿಯಾಗಿ ಪ್ರಕಟವಾಗಿ, ನಂತರ 1975ರಲ್ಲಿ ಪ್ರಕಟವಾದ ಈ ಪುಸ್ತಕದ ಪ್ರತಿಗಳು ಇಂದು ಲಭ್ಯವಿಲ್ಲ.

ಅಭಿನೇತ್ರಿ ಸುಂದರಮ್ಮನವರ ಶಿಖರಪ್ರಾಯ ಪ್ರತಿಭೆಯನ್ನು ಪತ್ರಕರ್ತ ಹ.ವೆಂ. ಸೀತಾರಾಮಯ್ಯ ಇಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಸುಂದರಮ್ಮನವರ ರಂಗಅನುಭವಗಳು ಅರ್ಧ ಶತಮಾನದ ಕನ್ನಡ ರಂಗಭೂಮಿಯ ಶ್ರೀಮಂತಿಕೆಯನ್ನು ಪರಿಚಯ ಮಾಡಿಕೊಡುತ್ತವೆ.

ಇಂತಹದೊಂದು ಮಹತ್ವದ ಆತ್ಮಕಥನ ಮರುಮುದ್ರಣಗೊಂಡು ರಂಗಾಸಕ್ತರಿಗೆಲ್ಲ ದೊರೆಯಲಿ ಎಂಬ ಆಶಯದೊಂದಿಗೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಇದನ್ನು ಪರಿಷ್ಕರಿಸಿಕೊಡಬೇಕೆಂದು ನನಗೆ ಕೇಳಿಕೊಂಡರು. ಹ.ವೆಂ. ಸೀತಾರಾಮಯ್ಯ ರಚಿಸಿದ ಈ ಮುದ್ದಾದ ಕೃತಿಗೆ ಮತ್ತಷ್ಟು ಮೆರಗು ತರುವುದಷ್ಟೇ ನನ್ನ ಕೆಲಸವಾಗಿತ್ತು. ಆತ್ಮಕತೆಗೆ ಸಂಬಂಧಪಡದ ಸಂಗತಿಗಳನ್ನಷ್ಟೇ ಕೈಬಿಡಬೇಕಾಯಿತು. ಮೊದಲ ಮುದ್ರಣಕ್ಕೆ ಮುನ್ನುಡಿ ಬರೆದಿರುವ ಹಿರಿಯ ಪತ್ರಕರ್ತ ಇ. ಆರ್. ಸೇತೂರಾಂ, ರಂಗತಜ್ಞ ಡಾ. ಹೆಚ್.ಕೆ. ರಂಗನಾಥ್ ಹಾಗೂ ಪುಸ್ತಕದ ಲೇಖಕ ಹ.ವೆಂ. ಸೀತಾರಾಮಯ್ಯನವರ ಮಾತುಗಳನ್ನು ಉಳಿಸಿಕೊಳ್ಳಲಾಗಿದೆ.

ಸೂಕ್ತ ಸಲಹೆಗಳನ್ನು ನೀಡಿ ಪುಸ್ತಕವನ್ನು ಒಪ್ಪ ಓರಣಗೊಳಿಸಲು ನೆರವಾದ ಹಿರಿಯ ವಿದ್ವಾಂಸ ಮನು ಪಾಟೀಲ, ರಂಗತಜ್ಞ ಡಾ॥ ರಾಮಕೃಷ್ಣ ಮರಾಠೆ, ಲೇಖಕ ಎಸ್. ಆರ್. ರೇಣುಕಾರಾಧ್ಯ, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಶ್ರೀನಿವಾಸ ಜಿ. ಕಪ್ಪಣ್ಣ, ರಿಜಿಸ್ಟ್ರಾರ್ ಎಚ್. ಶಂಕರಪ್ಪ, ಇಂತಹ ಯಾವುದೇ ಕೆಲಸಗಳಲ್ಲಿ ತಕ್ಷಣ ಹೆಗಲುಕೊಟ್ಟು ನಿಲ್ಲುವ ರಂಗಸಂಘಟಕ ಕೆ.ವಿ. ನಾಗರಾಜಮೂರ್ತಿ, ಅತ್ಯಂತ ಕಡಿಮೆ ಅವಧಿಯಲ್ಲಿ ಪುಸ್ತಕ ಸಿದ್ಧಪಡಿಸಿಕೊಟ್ಟ ಗೀರ್ವಾಣಿ ಮುದ್ರಣದ ಎಸ್. ಪಿನಾಕಪಾಣಿ ಅವರಿಗೆ ನನ್ನ ನೆನಕೆಗಳು ಸಲ್ಲಬೇಕು.

ಬೆಂಗಳೂರು
22-09-2005

- ಗುಡಿಹಳ್ಳಿ ನಾಗರಾಜ
ಮುಖ್ಯ ಉಪಸಂಪಾದಕ
ಪ್ರಜಾವಾಣಿ

# ಸ್ವರೂಪ ದರ್ಶನ

ಕನ್ನಡ ನಾಡಿನಲ್ಲಿ 1880ರ ಸುಮಾರಿಗೆ ಕೆಲವಾರು ವೃತ್ತಿ ನಾಟಕ (ಕಂಪನಿ) ಸಂಸ್ಥೆಗಳು ಆರಂಭವಾದವು. ಕೆಲವೇನೋ ಹುಟ್ಟಿದ ಕೆಲವೇ ಕಾಲದಲ್ಲಿ ಬಾಲಗ್ರಹ ಬಡಿದು ಅಂತರ್ಧಾನವಾದರೂ ಉಳಿದ ಕೆಲವು ಪ್ರವರ್ಧಮಾನಕ್ಕೆ ಬಂದವು. ಆದರೂ ಸುಮಾರು 1920ರವರೆಗೆ ಸ್ತ್ರೀಯರ ಪ್ರವೇಶ ಪ್ರೇಕ್ಷಕರ ವಿಭಾಗಕ್ಕೆ ಮಾತ್ರ ಸೀಮಿತವಾಗಿತ್ತು. ರಂಗಮಂಟಪ ಗಂಡಸರ ಕಸರತ್ತಿನ ಅಖಾಡವಾಗಿಯೇ ಉಳಿಯಿತು. ದೈತ್ಯರು, ರಾಜರು, ಋಷಿಗಳು, ಪೌರರಾಗಿ ಪುರುಷರು ಪಾತ್ರವಹಿಸುವುದೇ ಅಲ್ಲದೆ ರಾಣಿ, ಪ್ರೇಯಸಿ, ಸಖಿ, ವೇಶ್ಯೆ, ನಾಟ್ಯಗಾತಿಯರಾಗಿ ಸಹ ಗಂಡಸರೇ ಸೀರೆಯುಟ್ಟು ಬಣ್ಣ ಹಚ್ಚಿ ಪಾತ್ರ ಧರಿಸುತ್ತಿದ್ದರು. ಖ್ಯಾತ ಎ.ವಿ. ವರದಾಚಾರ್ಯರ ನಾಟಕಗಳಲ್ಲೂ, ಶ್ರೀಗಳಾದ ಬೋಧರಾಯರು, ನಾಗೇಂದ್ರರಾಯರಿಗೇ ಸ್ತ್ರೀ ಪಾತ್ರಗಳು ಮೀಸಲು. ಈಚೆಗೆ ಚಲನಚಿತ್ರಗಳಲ್ಲಿ ಗಿರಿಜಾ ಮೀಸೆ ತೀಡಿ, ಕೋರೆದಾಡಿಗಳನ್ನು ಸವರುತ್ತಾ ಖಳರ ಪಾತ್ರಧಾರಿಗಳಾಗಿ ನಮ್ಮ ಕಣ್ಣು ಕಟ್ಟಿರುವ ಶ್ರೀ ಸುಬ್ಬಯ್ಯನಾಯಿಡು, ಶ್ರೀ ನಾಗೇಂದ್ರರಾಯರು ಹದಿನೆಂಟು ಮೊಳದ ಸೀರೆಗಳನ್ನು ಉಟ್ಟು ಒಂಕು ವಯ್ಯಾರ, ಬೆಡಗು ಬಿನ್ನಾಣಗಳನ್ನು ಸೂಸುವ ಅಂದಗಾತಿಯರ ಪಾತ್ರಗಳನ್ನು ನಿರ್ವಹಿಸುತ್ತಾ ಜನಕ್ಕೆ ಅಚ್ಚು ಮೆಚ್ಚಾಗಿದ್ದರು ಎಂಬ ಸಂಗತಿ ಹಲವರಿಗೆ ಗೊತ್ತಿಲ್ಲ. ತುಮಕೂರಿನ ಶ್ರೀ ಸೀತಪ್ಪ ಎಂಬ ಹೆಸರಾಂತ ಕಲಾವಿದರ ಕಂಪನಿ ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಹೇಳ ಹೆಸರಿಲ್ಲದಾಯಿತಾದರೂ ಆತ ಸ್ತ್ರೀ ಪಾತ್ರಗಳಲ್ಲಿ ಪ್ರದರ್ಶಿಸುತ್ತಿದ್ದ ಸಹಜಾಭಿನಯ, ಕಲಾಕೌಶಲ್ಯವನ್ನು ಅಂದಿನ ಕಾಲದ ಹಿರಿಯರು ಇಂದಿಗೂ ಮುಕ್ತಕಂಠದಿಂದ ಹೊಗಳುವುದನ್ನು ನಾವು ಕೇಳಿದ್ದೇವೆ.

ಎಂತೂ ರಂಗಮಂಚದ ಮೇಲೆ ಸ್ತ್ರೀ ಪಾತ್ರಧಾರಿಗಳಿಲ್ಲದ ಈ ಕೊರಗನ್ನು ಕಳೆಯಲು ಜನ್ಮವೆತ್ತರೇನೋ ಎಂಬಂತೆ ಆಗ ರಂಗಮಂಚವನ್ನೇರಿದ ಕಲಾವಿದೆಯರಲ್ಲಿ ಮೊದಲನೇ ಪೀಳಿಗೆಯ ಕಲಾವಿದೆ ಶ್ರೀಮತಿ ಮಳವಳ್ಳಿ ಸುಂದರಮ್ಮನವರು.

ತಂದೆ ಮಳವಳ್ಳಿ ಸುಬ್ಬಣ್ಣನವರು ಅದ್ವಿತೀಯ ಸಂಗೀತ ವಿದ್ವಾಂಸರಾದರೂ ತಮ್ಮ ಜೀವಿತವನ್ನು ನಾಟಕರಂಗದ ಏಳಿಗೆಗಾಗಿ ಧಾರೆ ಎರೆದ ಮಹಾವ್ಯಕ್ತಿ. ಎಳೆತನದಲ್ಲೆ ತಂದೆಯ ಬಳಿ ನಿಷ್ಠುರ ಶಿಕ್ಷಣ ಪಡೆದ ಶ್ರೀಮತಿಯವರು ಅಸಾಧಾರಣ ಸಂಗೀತ ಪ್ರೌಢಿಮೆ ಪಡೆದು ರಾಗವಿಸ್ತಾರ ಸ್ವರವಿನ್ಯಾಸ, ನೆರವಲು, ಗಮಕಗಳ ಪಲುಕು, ಹಾಗೂ ಪಲ್ಲವಿ ಗಾಯನದಲ್ಲಿ ಅದ್ವಿತೀಯ ಸಾಮರ್ಥ್ಯಗಳಿಸಿ, ಅರಮನೆಯಲ್ಲಿ ಪ್ರಭುಗಳ ಮುಂದೆ ಮತ್ತಿತರೆಡೆಗಳಲ್ಲಿ ಪಕ್ಕಾ ಸಂಗೀತ ಕಚೇರಿಗಳನ್ನು ಮಾಡಿ ಭೇಷ್ ಎನಿಸಿಕೊಂಡರು. ಸಾಲದ್ದಕ್ಕೆ ಹೆಸರಿಗೆ ತಕ್ಕಂತಹ ಮಾಟವಾದ ಮೈ, ಅಂದವಾದ ಮುಖ ಹಾಗೂ ಕೋಮಲವಾದ ಕಂಠಶ್ರೀ, ಅಂದಿನ ಕಾಲದ ಸಂಗೀತ ಪ್ರಧಾನವಾದ ಶಾಕುಂತಲ, ರತ್ನಾವಳಿ, ಮನ್ಮಥ ವಿಜಯ, ಸುಭದ್ರಾ, ಪ್ರಹ್ಲಾದ ಚರಿತ್ರೆ, ಬಕಾವಲಿಗಳೇ ಅಲ್ಲದೇ ಚಾಮುಂಡೇಶ್ವರಿ ಕಂಪನಿಯ ವತಿಯಿಂದ ಪ್ರಯೋಗಿಸಿದ ರಾಜಸೂಯಯಾಗ, ದಾನಶೂರಕರ್ಣ, ನಾಟಕಗಳಲ್ಲಿನ ಸೊಗಸಾದ ಕಂದ, ವೃತ್ತ, ಸೀಸಪದ್ಯ, ಪದ, ಜಾವಳಿ, ಶ್ಲೋಕ, ಡೈಲಾಗ್ ಮತ್ತು ಕೋರಸ್‌ಗಳನ್ನು ಅತಿ ಜಾಣ್ಮೆಯಿಂದ ವಿಧವಿಧ ಸಂಗತಿಗಳನ್ನಿಟ್ಟು ಲೀಲಾಜಾಲವಾಗಿ ಈಕೆ ಹಾಡಿದಾಗ ಓನ್ಸ್ ಮೋರ್‌ಗಳ

ಸುರಿಮಳೆಯಾಗುತ್ತಿತ್ತು. ಇತ್ತ ಸಂಗೀತವಿದುಷಿಯಾಗಿ ಅತ್ತ ಅಭಿನಯ ವಿಶಾರದೆಯಾಗಿ ಈಕೆ ಕನ್ನಡ ನಾಟಕ ರಂಗದಲ್ಲಿ ಸಾಧಿಸಿದ ಕೀರ್ತಿ ಅನನ್ಯವಾದುದು.

ಆಚಾರ್ಯರ ನಿಧನದ ನಂತರ ತಮ್ಮ ಅದ್ವಿತೀಯ ಕಂಠಶ್ರೀ ಮತ್ತು ನಟನಾ ಚಾತುರ್ಯದಿಂದ ಆ ಸ್ಥಾನವನ್ನು ಶ್ರೀ ನಾಗೇಶರಾಯರು ಸಹಜವಾಗಿ ಆಕ್ರಮಿಸಿದರು. ಅದೇ ಸಮಯಕ್ಕೆ ಅವರ ಸಂಗೀತ ಮತ್ತು ಅಭಿನಯ ಕೌಶಲ್ಯ ಸರಿಗಟ್ಟಿ ಅವರೊಡನೆ ನಟಿಸುವ ನಾಯಕಿಯ ಸ್ಥಾನಕ್ಕೆ ಶ್ರೀಮತಿಯವರು ನಿರಾಯಾಸವಾಗಿ ಏರಿದರು. ಇವರಿಬ್ಬರ ಜೋಡಿ ಕನ್ನಡ ನಾಟಕ ರಂಗದ ಅತ್ಯಂತ ಜನಪ್ರಿಯ ಜೋಡಿಯಾಗಿ ನಾಟಕ ರಂಗದ ಸ್ವರ್ಣಯುಗ ತಲೆದೋರಿತು. ಇವರಿಬ್ಬರ ಜೋಡಿ ಹಾಡುಗಾರಿಕೆಯು ಇಂದಿಗೂ ಕನ್ನಡ ಕಲಾಭಿಮಾನಿಗಳ ಸ್ಮರಣೆಯಲ್ಲಿರುವ ಅತ್ಯಂತ ರಮ್ಯವಾದ ನೆನಪು.

ಈಚೆಗೆ ಕನ್ನಡ ನಾಟಕರಂಗದ ಸಂಗೀತ ಸಂಪತ್ತಿನ ಬಗ್ಗೆ ಒಂದು ರೂಪಕವನ್ನು ತಯಾರಿಸಲು ಆಕಾಶವಾಣಿಯವರು ಕೇಳಿದಾಗ ನಾನು ಹಳೆಯ ಕಾಲದ ಕಳೆದುಳಿದ ಹಾಡುಗಳನ್ನು ಹುಡುಕುತ್ತಾ ಹೊರಟಾಗ ನನಗೆ ಅದೃಷ್ಟವಶಾತ್ ಈ ಇಬ್ಬರು ಮಹಾ ಕಲಾಕೋವಿದರ 10-12 ಹಾಡುಗಳ ಧ್ವನಿಮುದ್ರಿಕೆಗಳು ಸಿಕ್ಕಿ ನನ್ನ ಮಾನ ಬಚಾವಾದುದಲ್ಲದೆ ನನಗಾದ ಆನಂದಕ್ಕೆ ಎಡೆ ಇಲ್ಲ. ಇಂದಿಗೂ ಇವು ಅಂದಿನ ಸ್ವರ್ಣಯುಗದ ಮರುಧ್ವನಿಗಳು. ಈ ಮನಮೋಹಕವಾದ ಹಾಡುಗಳನ್ನು ಕೇಳಿದಾಗ ಅಂದಿನ ನಾಟಕದ ಇಡೀ ದೃಶ್ಯ ಕಣ್ಣಿಗೆ ಕಟ್ಟುವುದೇ ಅಲ್ಲದೇ ಸಂಗೀತಾಭಿಮಾನ ಉಳ್ಳಯಾರಿಗಾದರೂ ಆಗುವ ಆನಂದ ಹೇಳತೀರದು. ಇಂದಿನ ಮೈಕ್ ಯುಗದ ವಿದ್ವಾಂಸರು ಸಹ ಈ ಕಂಠಗಳ ಶಕ್ತಿ ಮತ್ತು ಸಾಮರ್ಥ್ಯವನ್ನು ಹಾಡುಗಾರಿಕೆಯ ಮೋಹಕಶೈಲಿಯನ್ನು ಕೇಳಿದರೆ ತಮಗದು ಸಾಧ್ಯವಾಗದೆಂದು ತಲೆಬಾಗಿಸುವಂತಾಗುತ್ತದೆ ಎಂದು ನನಗೆ ಆತ್ಮೀಯರಾದ ಕೆಲವು ವಿದ್ವನ್ಮಣಿಗಳೇ ಹೇಳಿದ್ದಾರೆ.

ಇದಿಷ್ಟು ಇವರ ಪಾತ್ರಾಭಿನಯ ಹಾಗೂ ಗಾಯನ ಸಾಮರ್ಥ್ಯ ಕುರಿತಂತಾಯಿತು. ಇದೊಂದು ಮುಖ. ಇನ್ನೊಂದು ಮುಖ. ಇಂದಿನ ಎಂಟೆದೆಯ ಗಂಡಸರೇ ಭೀತರಾಗಿ ಬೇಡಪ್ಪಾ ಎನ್ನುವ ನಾಟಕದ ಸಂಸ್ಥಾ ನಿರ್ವಹಣೆಗೂ ಟೊಂಕಕಟ್ಟಿ ಹಲವಾರು ವರ್ಷಗಳು ಚಾಮುಂಡೇಶ್ವರಿ ಕಂಪನಿ ಆಡಳಿತವನ್ನು ನಿರ್ವಹಿಸಿದ ಈಕೆಯ ಧೈರ್ಯ, ಸ್ಥೈರ್ಯ, ದೃಢಚಿತ್ತ ಹಾಗೂ ತ್ಯಾಗ, ಬಲಿದಾನಗಳ ವಿವರಗಳನ್ನು ಈ ಕಥನದಲ್ಲಿ ಓದಿದವರಿಗೆ ಇವರ ಕಲಾಸೇವೆಯ ವಿಸ್ತಾರವಾದ ವ್ಯಾಪ್ತಿ ಅರ್ಥವಾದೀತು.

ಕನ್ನಡ ವೃತ್ತಿನಾಟಕ ಕ್ಷೇತ್ರದ ಅತ್ಯಂತ ಸಮರ್ಥ ನಟರೂ, ಕಲಾವಿದರೂ, ಕೀರ್ತಿಶಾಲಿಗಳೆಲ್ಲರಿಗೂ ಒಂದಲ್ಲ ಒಂದು ಬಾರಿ ಕಂಪನಿ ನಿರ್ಮಿಸಬೇಕೆಂಬ ಹಂಬಲಹತ್ತಿ ಅವರಲ್ಲಿ ಬಹುತೇಕ ಮಂದಿ ಅತೀವ ವೇದನೆಯನ್ನು ಅನುಭವಿಸಿದ ಉದಾಹರಣೆಗಳಿವೆ. ಶ್ರೀಗಳಾದ ಜಿ. ನಾಗೇಶರಾಯರು, ಮರಿರಾಯರು, ಪೀರರು, ಸಿಂಹರು, ಗಂಗಾಧರರಾಯರು, ಸುಬ್ಬರಾಯರು, ಕಡೆಗೆ ಕೈಲಾಸಂ ಅವರು ಸಹ ಅತ್ಯುನ್ನತ ಕೀರ್ತಿಗಳಿಸಿದ ನಟರು. ಇವರೆಲ್ಲರೂ ನಾಟಕ ಕಂಪನಿ ಕಟ್ಟುವ ಯತ್ನದಲ್ಲಿ ಹಾಲಾಹಲವನ್ನೇ ಉಂಡು, ಅಪಾರ ನೋವಿಗೆ ಸಿಕ್ಕಿ ಪರಿತಪಿಸಿದುದೇ ಅಲ್ಲದೆ ಈ ಕಂಪನಿಗಳು ಸಹ ನಾಮಾವಶೇಷವಾದವು ಎಂದರೆ ಈ ಪುರುಷ ಪುಂಗವರ ಗತಿಯೇ ಹೀಗಾಯಿತೆಂದರೆ , ಒಬ್ಬ ಸ್ತ್ರೀ ಕಂಪನಿ ನಡೆಸುವ ಸವಾಲನ್ನು ಸ್ವೀಕರಿಸಿ

ಕಷ್ಟ ಬಂದಾಗ ತಮ್ಮ ಆಭರಣ, ಬಟ್ಟೆಬರೆಗಳನ್ನೇ ಮಾರಿ ಕಲಾವಿದರಿಗೆ ಸಂಬಳ ನೀಡಿ ಹಲವಾರು ವರ್ಷ ಕಂಪನಿಯನ್ನು ಯಶಸ್ವಿಯಾಗಿ ನಡೆಸಿದರೆಂದರೆ ಆಕೆಯ ಸ್ಥಿರ ಸಂಕಲ್ಪ, ಸಾಮರ್ಥ್ಯ, ತ್ಯಾಗಬುದ್ಧಿ ಹಾಗೂ ಕಷ್ಟಸಹಿಷ್ಣುತಾಶಕ್ತಿ ಎಷ್ಟಿರಬೇಕೆಂದು ಊಹಿಸಬಹುದು. ಶ್ರೀಮತಿಯವರು ಚಾಮುಂಡೇಶ್ವರಿ ಕಂಪನಿ ನಡೆಸುವ ಸವಾಲನ್ನು ಒಪ್ಪಿಕೊಂಡ ಧೈರ್ಯ, ದಾರುಣಾವಸ್ಥೆಯಲ್ಲೂ ಧೃತಿಗೆಡದೆ ಹಲವಾರು ವರ್ಷ ಮುಂದುವರೆಸಿದ ಸ್ಥೈರ್ಯ, ಕಡೆಗೂ ಶ್ರಮ ವಿಫಲವಾಗಿ ಕಂಪನಿ ಮುರಿದುಬಿದ್ದಾಗ ಈ ಹಿರಿ ಜೀವಕ್ಕೆ ಉಂಟಾದ ಯಾತನೆಗಳನ್ನು ಗಮನಿಸಿದರೆ ಈ ಧೀರೋದಾತ್ತ ವ್ಯಕ್ತಿಯ ಸೇವೆ, ತ್ಯಾಗ, ಬಲಿದಾನಗಳ ವಿಷಯ ಅರಿವಾಗಿ ನಮಗೆ ಅಚ್ಚರಿಯಾದೀತು.

ನನ್ನ ಮಿತ್ರ ಶ್ರೀ ಹ.ವೆಂ. ಸೀತಾರಾಮಯ್ಯನವರು ಇಂತಹ ಒಂದು ಮಹಾನ್ ವ್ಯಕ್ತಿಯ ಆತ್ಮಕಥೆಯನ್ನು ಕಾಗದಕ್ಕಿಳಿಸಿ ಸುಧಾದ ಬಣ್ಣದ ಬದುಕಿನ ಓದುಗರಿಗೆ ಒಂದು ಅಪೂರ್ವ ಅನುಭವವನ್ನು ಒದಗಿಸಿದ್ದಕ್ಕಾಗಿ ನಾನು ಅವರಿಗೆ ಅತ್ಯಂತ ಋಣಿ. ಇಂದಿನ ಹಲವಾರು ಚಲನಚಿತ್ರಗಳಲ್ಲಿ ನೀಡುತ್ತಿರುವ ಅಗ್ಗದ ಮನರಂಜನೆ, ಕಾಕಧ್ವನಿ ಸಂಯೋಜಿತ ಗೀತೆಗಳು, ಇತ್ಯಾದಿ ಕೀಳು ಆಕರ್ಷಣೆ ಗಳಿಗೆ ಮನಸೋತ ಮಂದಿ ನಮ್ಮ ನಾಟಕರಂಗದ ಭವ್ಯ ಪರಂಪರೆ, ನಮ್ಮ ನಟನಟಿಯರ ಅಸಾಧಾರಣ ಕಲಾಪ್ರೌಢಿಮೆಯ ಬಗ್ಗೆ ಅಜ್ಞರೇ ಸರಿ. ನಮ್ಮ ಜನಕ್ಕೆ ಈ ಅರಿವು ಹೆಚ್ಚಾದರೆ, ಅಂದು ನಮ್ಮಲ್ಲಿ ನಮ್ಮ ಪರಂಪರಾನುಗತವಾದ ಕಲೆಯ ಬಗ್ಗೆ ಸ್ವಾಭಿಮಾನ ಮೂಡಿ ನಮ್ಮ ಅರಿವು ಹಿರಿದಾದೀತು. ಈ ಪುಸ್ತಕ ಆ ಕಾರ್ಯ ಮಾಡೀತು ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಶಂಕರವನ, ಬೆಂಗಳೂರು -4. - ಇ. ಆರ್. ಸೇತೂರಾಂ

ತಾ|| 5-05-1975 ಸಂಪಾದಕ, ಸುಧಾ

## ಸಾಹಸದ ಫಲ

"ರಂಗಭೂಮಿಯ ಮೇಲೆ ಸ್ತ್ರೀಯರೇ ಬರಬಹುದೆ" ಎಂಬ ವಿಷಯದ ಮೇಲೆ ಐದಾರು ದಶಕಗಳ ಹಿಂದೆ ದೊಡ್ಡದೊಂದು ವಿವಾದವೆದ್ದು, ವಿಷಯದ ಪರವಾಗಿ ಪಂಡಿತರೂ, ಪತ್ರಿಕೆಗಳು ಪಾಲುಗೊಂಡುದುಂಟು. ಹತ್ತು ಹಲವಾರು ಕಾರಣಗಳನ್ನೂ ಮುಂದೊಡ್ಡಿ, ಹೆಣ್ಣು ಮಕ್ಕಳು ರಂಗದ ಮೇಲೆ ಕಾಣಿಸಿಕೊಳ್ಳಲೇ ಕೂಡದು ಎಂದು ಹಟ ಹಿಡಿದವರ ವಾದವನ್ನು ಟೊಳ್ಳುಮಾಡಿ, ರಂಗದಲ್ಲಿ ಸ್ತ್ರೀಯರಿಗೆ ಸ್ಥಾನ ಕಲ್ಪಿಸುವಲ್ಲಿ ಮಳವಳ್ಳಿ ಸುಂದರಮ್ಮನವರ ದುಡಿಮೆ ದೊಡ್ಡದು. ಪಲ್ಲವಿ ಸಂಗೀತದಲ್ಲಿ ಪಂಡಿತ ಪರಿಣತಿ ಪಡೆದಿದ್ದ ಆಕೆ, ರಂಗದ ಜೇನುಗೂಡಿಗೆ ಕೈ ಇಕ್ಕದೆ ಸಂಗೀತವನ್ನೇ ಅವಲಂಬಿಸಿ ಇದೇ ಕೀರ್ತಿ ಶಿಖರವನ್ನೇ ಮುಟ್ಟಬಹುದಾಗಿತ್ತು ಅಥವಾ ತಮ್ಮ ಹೆಸರಿಗೆ ಅನ್ವರ್ಥವಾಗಿದ್ದ ಆಕೆ ಸ್ವಂತ ಸಂಸಾರ ಬೆಳೆಯಿಸಿಕೊಂಡು ಅದರಲ್ಲಿಯೇ ಮುಳುಗಿ ಹಾಯಾಗಿ ಇರಬಹುದಾಗಿತ್ತು. ಆದರೆ, ಅಂಥ ತಂದೆ, ನಾದಯೋಗಿ ಸುಬ್ಬಣ್ಣನವರಂಥ ಪ್ರಭಾವಶಾಲೀ ರಂಗಪ್ರವರ್ತಕರ ಹೆಸರು, ಮಗಳಿಂದಾಗಿ ಹೆಚ್ಚಿನ ಹಿರಿಮೆಗೆ ಸಂದು ಹಸಿರಾಗಿಯೇ ಉಳಿಯುವಂತೆ ಆಕೆ ತಮ್ಮನ್ನು ತಾವೇ ರಂಗಕ್ಕೆ ಕಟ್ಟಿಕೊಂಡು ದುಡಿದರು. ಶರೀರ- ಶಾರೀರ ಸಂಪತ್ತಿಯನ್ನು ಅದಕ್ಕಾಗಿ ಸವೆಸಿದರು. ಅತ್ತ ಣ ಗುಳೇದಗುಡ್ಡ ಗಂಗೂಬಾಯಿಯಂತೆ, ಶಿವನ ಸಂಸಾರವನ್ನೇ ಹತ್ತು ಕಾಲ, ಹೌದು ಹೌದೆನ್ನುವಂತೆ ನಡೆಸಿದರು.

ಹೆಣ್ಣು ಹೆಂಗಸೊಬ್ಬಳು ಗಂಡಿಗಿಂತ ಗಂಡಾಗಿ ಗಂಡು ಮಂಡಳಿಯೊಂದನ್ನು ಅಂಗೈಲಿಟ್ಟುಕೊಂಡು ಆಡಿಸಿದ್ದು ಹಳೇ ಮೈಸೂರು ವೃತ್ತಿರಂಗದ ಕತೆಯಲ್ಲಂತೂ ಅದೇ ಮೊದಲು . ಆದರಿಂದಾಗಿ ಸುಂದರಮ್ಮನವರ ರಂಗವೃತ್ತ ಹತ್ತೂ ನಿಟ್ಟುಗಳಿಂದ ಹೊಸಮಾತು ಹೇಳುವುದು ಸ್ವಾಭಾವಿಕ. ಈ ದೃಷ್ಟಿಯಿಂದ ಇದೀಗ ಬೆಳೆದು ಬರುತ್ತಿರುವ ನಮ್ಮ ಸಾಹಿತ್ಯಕ್ಕೆ **ಅಭಿನಯ ವಿಶಾರದೆ** ಉಪಯುಕ್ತವಾದ ಸೇರ್ಪಡೆ.

ಇನ್ನು ಇಂಥ ಈ ಪುಸ್ತಕವನ್ನು ಹೊರತರುತ್ತಿರುವ ಹ.ವೆಂ. ಸೀತಾರಾಮಯ್ಯನವರ ಸಾಹಸವಾದರೂ ದೊಡ್ಡದೇ. "**ಕನ್ನಡ ರಂಗಭೂಮಿಯ ಕಲಾವಿದರು**" ಎಂಬ ಸ್ವತಂತ್ರ ಗ್ರಂಥಕ್ಕೆ ಕಾರಣರಾದ ಅವರು ಅಂಥ ಕಲಾವಿದರ ಬಗ್ಗೆ ಎಣೆಯಿಲ್ಲದ ಕಳಕಳಿಯನ್ನು ಎದೆತುಂಬ ತುಂಬಿಕೊಂಡು, ಆರ್ತಸ್ಥಿತಿಗೆ ಇಳಿದಿರುವ ಅವರಿಗೆ ಸಕ್ರಿಯ ಸಹಾಯ ಸಲ್ಲಿಸುತ್ತಿದ್ದಾರೆ. ವೃತ್ತಿ ಕಲಾವಿದರೊಂದಿಗೆ ಕುಳಿತು ವಿಷಯ ಸಂಗ್ರಹಿಸಿ ಪ್ರಕಟಿಸಿದುದನ್ನು ಉತ್ಸವವೇರ್ಪಡಿಸಿ ಉದ್ಘಾಟಿಸಿ, ತಾವು ಹೀಗೆ ಮೈಕೈ ಸುಟ್ಟುಕೊಂಡರೂ, ಫಲ ಬಂದರೆ ಅದರಲ್ಲಿ ಮೂರು ಪಾಲನ್ನು ಕಲಾವಿದರಿಗೇ ಕೊಡಮಾಡುವ ಅವರ ಅಂತರಂಗದ ಆರ್ದ್ರತೆ, ಈಗಿನಂಥ ಅತಿ ಕೆಟ್ಟ ಕಾಲದ ನಿಟ್ಟಿನಿಂದ, ಅತ್ಯಂತ ಆಶ್ಚರ್ಯಕರವಾದದ್ದು. ಅವರ ಉತ್ಸಾಹದ ದುಡಿಮೆಯಿಂದಾಗಿಯೇ ಆರ್. ನಾಗೇಂದ್ರರಾಯರ ಆತ್ಮವೃತ್ತವಾದರೂ ಪುಸ್ತಕವಾಗಿ ಹೊರಬಂದಿತು.

ಇಂದು ಎಪ್ಪತ್ತೊಂದರ ಹೊಸ್ತಿಲಲ್ಲಿರುವ ಸುಂದರಮ್ಮನವರಿಗೆ ಸಂತೋಷ ವಾಗುತ್ತದೆ. ಇದೀಗ ಅವರ ಅದೇ ಸಾಹಸದ ಫಲವಾಗಿ "**ಅಭಿನಯ ವಿಶಾರದೆ**" ಬೆಳಕು ಕಾಣುತ್ತಿದ್ದಾಳೆ. ಇಂಥದೊಂದು ಒಳ್ಳೆಯ ಕೆಲಸದ ಕಾರಣ, ಸಾವಿರಾನುಸಾವಿರ ಕನ್ನಡಿಗರಿಗೆ

ವರ್ಷಾನುಗಟ್ಟಲೆ, ತಮ್ಮ ರಂಗಕಲೆಯಿಂದ ಸಂತೋಷಕೊಟ್ಟು ಇಂದು ನಿರ್ವಿಣ್ಣಾವಸ್ಥೆಯಲ್ಲಿರುವ ಆಕೆಗೆ, ಕನ್ನಡಿಗರ ಕೃತಜ್ಞತೆಯ ಕುರುಹಾಗಿ ಬಂದ ಈ ಪುಸ್ತಕ ನಿಜವಾಗಿ ಸಂತೋಷಕೊಡುತ್ತದೆ. ನೂರಕ್ಕೆ ನೂರು ನಿಸ್ವಾರ್ಥ ಬುದ್ಧಿಯಿಂದ ಇಂಥ ಒಳ್ಳೆಯ ಕೆಲಸ ಮಾಡಿದ ಸೀತಾರಾಮಯ್ಯನವರು ಧನ್ಯರೆನಿಸುತ್ತಾರೆ.

ಬೆಂಗಳೂರು - 21.
ದಿನಾಂಕ : 8-5-75

**ಡಾ|| ಎಚ್.ಕೆ. ರಂಗನಾಥ್**

## ನನ್ನ ಮಾತು

ಕನ್ನಡ ರಂಗಭೂಮಿಯ ಪ್ರಸಿದ್ಧ ಅಭಿನೇತ್ರಿ ಮಳವಳ್ಳಿ ಸುಂದರಮ್ಮ ಅವರಿಗೆ ಇದೀಗ ಎಪ್ಪತ್ತೊಂದು ವರ್ಷ ತುಂಬಿದೆ. ಅವರು ಸುಮಾರು ಅರವತ್ತು ವರ್ಷಗಳ ಕಾಲ ರಂಗಶಾರದೆಯನ್ನೂ, ಸಂಗೀತ ಸರಸ್ವತಿಯನ್ನೂ ಆರಾಧಿಸಿ, ಕೀರ್ತಿವಂತರಾಗಿದ್ದಾರೆ. ಇಂತಹ ಧನ್ಯ ಕಲಾವಿದೆಯ ಬಣ್ಣದ ಬದುಕು ನಿಜಕ್ಕೂ ನಾಡಿನ ಸಂಪದ.

ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮನವರ ಆರು ದಶಕಗಳ ರಂಗಭೂಮಿ ಮತ್ತು ಕ್ಷೇತ್ರಗಳ ಸಾಧನೆ-ಸಿದ್ಧಿಯ ಘಟನಾವಳಿಗಳು ಕಲಾವಿಲಾಸಿಗಳಿಗೆ ಅಧ್ಯಯನ ಯೋಗ್ಯ ಗ್ರಂಥ.

ಸ್ತ್ರೀಯರ ಪಾತ್ರಗಳನ್ನೂ ಪುರುಷ ನಟರೇ ನಿರ್ವಹಿಸುತ್ತಿದ್ದು, ರಂಗಭೂಮಿಯನ್ನು ಪ್ರವೇಶಿಸಲು ಮಹಿಳೆಯರು ಹಿಂದೇಟು ಹಾಕುತ್ತಿದ್ದ ಸಂದಿಗ್ಧ ಸಮಯದಲ್ಲಿ ದಿಟ್ಟತನದಿಂದ ನಾಟಕದಲ್ಲಿ ಪಾತ್ರವಹಿಸಲು ಮುಂದೆ ಬಂದ ನಾಲ್ಕಾರು ಆದ್ಯ ಕಲಾವಿದೆಯರಲ್ಲಿ ಮಳವಳ್ಳಿ ಸುಂದರಮ್ಮನವರು ಅಗ್ರಗಣ್ಯರಲ್ಲೊಬ್ಬರು. ಈ ದೃಷ್ಟಿಯಿಂದಲೂ ಕಲಾ ಸಾಹಿತ್ಯದಲ್ಲಿ ಸುಂದರಮ್ಮನವರ ಬಣ್ಣದ ಬದುಕಿಗೆ ಉನ್ನತ ಸ್ಥಾನವಿದೆ.

ರಂಗಭೂಮಿಯ ಇತಿಹಾಸದ ದೃಷ್ಟಿಯಿಂದಲೂ ಸುಂದರಮ್ಮನವರ ಜೀವನ ಚರಿತ್ರೆ ಗಮನಾರ್ಹವಾಗಿದೆ. ಇವರ ಆತ್ಮಕಥೆಯ ಪಠಣದಿಂದ ಅರ್ಧ ಶತಮಾನದ ಅಂದಿನ ಕನ್ನಡ ರಂಗಭೂಮಿಯ ಸ್ವರೂಪ, ಸ್ಥಿತಿಗಳ ಪರಿಚಯವಾಗುತ್ತದೆ. ಮಳವಳ್ಳಿ ಸುಂದರಮ್ಮನವರ ಬದುಕಿನ ಈ ನಾನಾ ಮಹತ್ವಗಳೂ ನಾನು ಅವರ ಬಣ್ಣದ ಬದುಕನ್ನು ಬರೆದು, ಪ್ರಕಟಿಸಿ ಕನ್ನಡಿಗರ ಮಡಿಲಿಗೆ ಸಮರ್ಪಿಸಲು ಪ್ರೇರಣೆಯಾಯಿತು.

ಕನ್ನಡ ರಂಗಭೂಮಿಯಲ್ಲಿ ಶ್ರಮಿಸಿದ ಕಲಾವಿದರು ಕನ್ನಡ ರಂಗಭೂಮಿಯ ಅಭಿವೃದ್ಧಿಗೆ ದುಡಿದ ಪ್ರತಿಭಾವಂತರು ಮತ್ತು ಕನ್ನಡ ರಂಗಭೂಮಿಯ ವಿವಿಧ ಸಮಸ್ಯೆ ಹಾಗೂ ಸ್ವರೂಪಗಳನ್ನು ಕುರಿತು ಗ್ರಂಥಗಳನ್ನು ಪ್ರಕಟಿಸಬೇಕೆಂದೇ ಹಲವಾರು ವರ್ಷಗಳ ಹಿಂದೆ ಕಲಾ ಸಾಹಿತ್ಯ ಪ್ರಕಾಶನವನ್ನು ಆರಂಭಿಸಿದೆ. **ರಂಗಭೂಮಿಯ ಕಲಾವಿದರು** ಪ್ರಕಾಶನದ ಪ್ರಥಮ ಪ್ರಕಟಣೆ. ಈ ಗ್ರಂಥದಲ್ಲಿ 48 ಮಂದಿ ಕನ್ನಡ ಕಲಾವಿದರ ಕಲಾವಿದೆಯರ ಸಂಕ್ಷಿಪ್ತ ಪರಿಚಯವಿದೆ.

**ಪ್ರತಿಭಾನ್ವಿತರು** ಇದು ಪ್ರಕಾಶನದ ಎರಡನೆ ಪ್ರಕಟಣೆ. ಕಲೆಯ ಬಗೆಬಗೆಯ ಕ್ಷೇತ್ರಗಳಲ್ಲಿ ದುಡಿದು ದೊಡ್ಡವರಾದ ಹಲವಾರು ಮಂದಿ ಪ್ರತಿಭಾನ್ವಿತರುಗಳ ಪರಿಚಯ ಲೇಖನಗಳ ಸಂಕಲನ.

**ಇದು ನನ್ನ ಕಥೆ** ಕಲಾ ಸಾಹಿತ್ಯ ಪ್ರಕಾಶನದ ತೃತೀಯ ಕೃತಿ. ಇದು ಕನ್ನಡ ರಂಗಭೂಮಿಯ ಭೀಷ್ಮಾಚಾರ್ಯ ಆರ್. ನಾಗೇಂದ್ರರಾಯರ ಆತ್ಮಕಥನ. ನಟಸಾರ್ವಭೌಮ, ರಸಿಕರರಾಜ ಡಾ॥ ರಾಜಕುಮಾರರು ಬೃಹತ್ ಸಮಾರಂಭದಲ್ಲಿ ಈ ಕೃತಿಯನ್ನು ಬಿಡುಗಡೆ ಮಾಡಿದರು. ಕೃತಿಯನ್ನೂ, ಅದನ್ನು ಪ್ರಕಟಿಸಿದ ಕಾರ್ಯವನ್ನೂ ಶ್ಲಾಘಿಸಿ, ಕನ್ನಡಿಗರು ಇಂತಹ ಉತ್ತಮ ಕೆಲಸಕ್ಕೆ ಉದಾರವಾಗಿ ಉತ್ತೇಜನ ನೀಡಬೇಕೆಂದು ಮನವಿ ಮಾಡಿಕೊಂಡರು. ಡಾ॥ ರಾಜಕುಮಾರರ ಹಾರ್ದಿಕ ಕರೆ ಹುಸಿಯಾಗಲಿಲ್ಲ. ಕನ್ನಡಿಗರು ಈ ಪುಸ್ತಕಕ್ಕೆ ಪ್ರೋತ್ಸಾಹ ನೀಡಿದರು. ಮೆಚ್ಚುಗೆಯ ಮಾತುಗಳನ್ನಾಡಿದರು.

ಈ ಸಮಯದಲ್ಲಿ ನಾನು ಇನ್ನೂ ಒಂದು ಕೃತಜ್ಞತೆಯ ಮಾತನ್ನು ಹೇಳದಿದ್ದರೆ ಸಮಂಜಸವೆನಿಸದು. ಕಲಾಸಾಹಿತ್ಯ ಪ್ರಕಾಶನದ ಲಾಂಛನದಲ್ಲಿ ನಾನು ಹಲವಾರು ವರ್ಷಗಳಿಂದ ಕೈಗೊಂಡಿರುವ ಕಲಾಸಾಹಿತ್ಯ ಸೇವೆಗೆ ಶ್ರೀ ರಾಜಕುಮಾರರೇ ಮೊದಲ್ಗೊಂಡು ಕನ್ನಡದ ಹಿರಿಯ ಕಿರಿಯ ಕಲಾವಿದರು, ನಿರ್ದೇಶಕರು, ತಾಂತ್ರಿಕಜ್ಞರು, ಚಿತ್ರ ವಿತರಣೆಗಾರರು, ಪ್ರದರ್ಶಕರು ಹಾಗೂ ಉದ್ಯಮಿಗಳು, ಅಭಿಮಾನಿಗಳು ಯಥಾಶಕ್ತಿ ಪ್ರೋತ್ಸಾಹ ಹಾಗೂ ಉತ್ಸಾಹವನ್ನಿತ್ತಿದ್ದಾರೆ. ಇವರೆಲ್ಲರಿಗೂ ಕೃತಜ್ಞತೆಯನ್ನು ಸಮರ್ಪಿಸುತ್ತಿದ್ದೇನೆ.

**ಅಭಿನಯ ವಿಶಾರದೆ** ಇದೀಗ ನಿಮ್ಮ ಕೈಲಿದೆ. ಇದು ನನ್ನ ಮೂರನೆ ಕೃತಿ ಹಾಗೂ ಪ್ರಕಾಶನದ ನಾಲ್ಕನೆಯ ಪ್ರಕಟಣೆ. ಈ ಕೃತಿಗೂ ಅಭಿಮಾನಿಗಳು ಉತ್ತೇಜನ ನೀಡುವರೆಂದು ಆಶಿಸುತ್ತೇನೆ.

ಮಳವಳ್ಳಿ ಸುಂದರಮ್ಮನವರ ಅಭಿನಯ ಪ್ರತಿಭೆಯನ್ನೂ, ಸಂಗೀತ ಸಾಮರ್ಥ್ಯವನ್ನೂ ಕಂಡ ನಾನು ಆಕೆಯ ಬಗ್ಗೆ ಬರೆಯಲು ಐದು ವರ್ಷಗಳ ಹಿಂದೆಯೇ ಸಂಕಲ್ಪಿಸಿದೆ. ಸುಂದರಮ್ಮನವರನ್ನು ಕಂಡು ಈ ಬಗ್ಗೆ ಸಮಾಲೋಚನೆ ನಡೆಸಿದೆ. ಅವರ ಸಂಪೂರ್ಣ ಸಹಕಾರ ನನಗೆ ದೊರಕಿತು. ಒಂದೆರಡು ತಿಂಗಳಲ್ಲಿ ಸುಂದರಮ್ಮನವರ ಆತ್ಮಕಥನವನ್ನು ಬರೆದು ಮುಗಿಸಿದೆ.

ಕಲಾವಿದರ ಆತ್ಮಕಥನವನ್ನು ಪ್ರಕಟಿಸುವುದಕ್ಕಾಗಿಯೇ ಬಣ್ಣದ ಬದುಕು ವಿಭಾಗವನ್ನು ಆರಂಭಿಸಿ, ಕಲಾಸಾಹಿತ್ಯವನ್ನು ವಿಪುಲವಾಗಿ ಬೆಳೆಸುತ್ತಿರುವ ಕನ್ನಡದ ಅತ್ಯಂತ ಜನಪ್ರಿಯ ಸುಧಾ ವಾರಪತ್ರಿಕೆಯ ಸಂಪಾದಕ ಶ್ರೀ ಇ. ಆರ್. ಸೇತೂರಾಂ ಮತ್ತು ಸಹಾಯಕ ಸಂಪಾದಕ ಶ್ರೀ ಎಂ.ಬಿ. ಸಿಂಗ್ ಅವರನ್ನು ಕಂಡು ನಾನು ಈ ಸಂಗತಿಯನ್ನು ನಿವೇದಿಸಿದಾಗ ಅವರು ಸುಂದರಮ್ಮನವರ ಆತ್ಮಕಥನವನ್ನು ಸುಧಾದಲ್ಲಿ ಧಾರಾವಾಹಿಯಾಗಿ ಪ್ರಕಟಿಸಲು, ಸಂತೋಷದಿಂದ ಸಮ್ಮತಿಸಿ ಪ್ರೋತ್ಸಾಹಿಸಿದರು.

ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮನವರ ಬಣ್ಣದ ಬದುಕು ಸುಧಾ ವಾರಪತ್ರಿಕೆಯಲ್ಲಿ 1971ರ ಜುಲೈ 2 ರಿಂದ 1971ರ ಸೆಪ್ಟೆಂಬರ್ 19ರವರೆಗೆ ಒಂಬತ್ತು ವಾರಗಳ ಕಾಲ ಧಾರಾವಾಹಿಯಾಗಿ ಪ್ರಕಟಗೊಂಡು ಜನಮೆಚ್ಚುಗೆಯನ್ನು ಪಡೆಯಿತು. ಇದಕ್ಕಾಗಿ ನಾನು ಸುಧಾ ಪತ್ರಿಕೆಯ ಶ್ರೀ ಇ. ಆರ್. ಸೇತೂರಾಂ ಮತ್ತು ಶ್ರೀ ಎಂ.ಬಿ. ಸಿಂಗ್ ಅವರಿಗೆ ನನ್ನ ಕೃತಜ್ಞತೆಯನ್ನು ಸಮರ್ಪಿಸುವುದು ನನ್ನ ಪ್ರಥಮ ಕರ್ತವ್ಯವಾಗಿದೆ.

ಸುಧಾದಲ್ಲಿ ಪ್ರಕಟವಾದ ಆತ್ಮಕಥನವು ಇದೀಗ ಇನ್ನಷ್ಟು ಪರಿಷ್ಕಾರಗಳೊಡನೆ ಸಚಿತ್ರವಾಗಿ ಗ್ರಂಥರೂಪದಲ್ಲಿ ಪ್ರಕಟವಾಗಿದೆ. ಈ ದೊಡ್ಡ ಕೆಲಸದಲ್ಲಿ ನನಗೆ ಆರಂಭದಿಂದ ಅಂತ್ಯದವರೆಗೂ ಸಹಕಾರ ನೀಡಿದ ಹಿರಿಯ ಕಲಾವಿದೆ ಶ್ರೀಮತಿ ಮಳವಳ್ಳಿ ಸುಂದರಮ್ಮನವರಿಗೆ ನಾನು ಕೃತಜ್ಞತೆಯನ್ನು ಸೂಚಿಸದಿದ್ದರೆ ಕರ್ತವ್ಯಲೋಪ ಮಾಡಿದಂತಾಗುತ್ತದೆ.

ಮಳವಳ್ಳಿ ಸುಂದರಮ್ಮನವರ ತಂದೆ ಮಳವಳ್ಳಿ ಸುಬ್ಬಣ್ಣನವರು ವಾಗ್ದೇವಿಯ ವರಪುತ್ರರಾದ ಉತ್ತಮ ಕಲಾವಿದರು; ಪಿಟೀಲು ವಾದನದಲ್ಲಿ ಅವರು ನಿಷ್ಣಾತರು. ಮಗಳ ಕಲಾವಿಕಸನಕ್ಕೆ ಮಾರ್ಗದರ್ಶನ ನೀಡಿದ ಮಹಾನುಭಾವರು. ಈ ಗ್ರಂಥದ ಮಹತ್ವ ಅಧಿಕವಾಗಲೆಂದು ಮಳವಳ್ಳಿ ಸುಬ್ಬಣ್ಣನವರ ಕಲಾ ಜೀವನದ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಸೇರಿಸಲಾಗಿದೆ.

ಕನ್ನಡ ರಂಗಭೂಮಿಯು ಬೆಳೆದು ಬಂದ ಹಾದಿಯ ಬಗ್ಗೆ ಆಸಕ್ತರಾದವರಿಗೆ ಸಾಧಕವಾಗಲೆಂದು ಸುಂದರಮ್ಮನವರ ರಂಗಭೂಮಿಯ ಕಾಲು ಶತಮಾನದ ಇತಿಹಾಸವನ್ನು ಈ ಗ್ರಂಥದಲ್ಲಿ ಅಳವಡಿಸಲಾಗಿದೆ. ಈ ಪ್ರೌಢ ಪ್ರಬಂಧವನ್ನು ಬರೆದುಕೊಟ್ಟ ಪ್ರಸಿದ್ಧ ನಾಟಕಕಾರರೂ, ಸಾಹಿತಿಗಳೂ ಆದ ಶ್ರೀ. ಬಿ. ಪುಟ್ಟಸ್ವಾಮಯ್ಯನವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಗ್ರಂಥದ ಸ್ವರೂಪ ದರ್ಶನದ ಬಗ್ಗೆ ರಂಗಭೂಮಿಯ ಪರಿಣತರುಗಳಾದ ಶ್ರೀ ಇ. ಆರ್. ಸೇತೂರಾಂ ಮತ್ತು ಡಾ|| ಎಚ್.ಕೆ. ರಂಗನಾಥ್ ಅವರುಗಳು ಮೆಚ್ಚುಗೆಯ ಮಾತುಗಳನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಈ ಸಹೃದಯ ಸಂಪನ್ನರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಎಲ್ಲ ಮಹನೀಯರುಗಳ ಲೇಖನಗಳಿಂದ ಈ ಗ್ರಂಥವು ವೈಶಿಷ್ಟ್ಯಮಯವಾಗಿ ಅದರ ಮಹತ್ವವು ಹೆಚ್ಚಿದೆಯೆಂದು ನಾನು ಭಾವಿಸಿದ್ದೇನೆ.

ಈ ಗ್ರಂಥದ ಮುಖಪುಟದ ವಿನ್ಯಾಸವನ್ನು ರಚಿಸಿಕೊಟ್ಟ ನಾಡಿನ ಪ್ರಸಿದ್ಧ ಚಿತ್ರಕಲಾವಿದರಾದ ಶ್ರೀ ರಮೇಶ್ ಅವರಿಗೂ, ಗ್ರಂಥವನ್ನು ಸುಂದರವಾಗಿ ಅಚ್ಚು ಮಾಡಿರುವ ಕೃಷಿಕ ಪ್ರಿಂಟರ್ಸ್‌ನ ಶ್ರೀ ಎನ್. ಗಂಗಯ್ಯ, ಶ್ರೀ ಡಿಸೋಜಾ, ಶ್ರೀ ಎಚ್. ಆರ್. ರಾಜಣ್ಣ ಅವರುಗಳಿಗೂ ನನ್ನ ವಂದನೆಯನ್ನು ಸಲ್ಲಬೇಕು.

ಬೆಂಗಳೂರು-21. ಹ.ವೆಂ. ಸೀತಾರಾಮಯ್ಯ

ದಿನಾಂಕ : 10-5-1975

# ಅಭಿನಯ ವಿಶಾರದೆ

# ಮಳವಳ್ಳಿ ಸುಂದರಮ್ಮ ನವರು

## ತಂದೆಯೇ ಮೊದಲ ಗುರು

ಕನ್ನಡ ರಂಗಭೂಮಿಗೆ ನಾನು ಪದಾರ್ಪಣ ಮಾಡಿ ಆರು ದಶಕಗಳು ಜಾರಿ ಹೋಗಿವೆ. ಈ ಆರು ದಶಕಗಳ ಬಣ್ಣದ ಬದುಕಿನಲ್ಲಿ ಅನೇಕ ಕಷ್ಟಕೋಟಲೆಗಳನ್ನು ಅನುಭವಿಸಿದ್ದೇನೆ. ರಂಗಭೂಮಿಯ ಏಳುಬೀಳುಗಳನ್ನು ಕಂಡಿದ್ದೇನೆ. ಅನೇಕ ಪ್ರತಿಭಾನ್ವಿತ ಅಭಿನೇತ್ರಿಯರೂ, ಕಲಾತಪಸ್ವಿಗಳೂ ಕನ್ನಡ ರಂಗಕಲೆಯನ್ನು ಪ್ರಜ್ವಲಗೊಳಿಸಿದ್ದನ್ನು ಕಂಡಿದ್ದೇನೆ. ಎಷ್ಟೋ ವೇಳೆ ನನ್ನ ಕಲಾಬಾಳಿನಲ್ಲಿ ಒದಗಿದ ಕಹಿಪ್ರಸಂಗಗಳಿಂದಾಗಿ ಬಣ್ಣದ ಬದುಕಿಗೇ ಕೊನೆಯ ನಮಸ್ಕಾರ ಹೊಡೆಯಬೇಕೆಂದು ತೀರ್ಮಾನಿಸಿದ್ದರೂ ಅದು ಸಾಧ್ಯವಾಗದೆ ಒಮ್ಮೊಮ್ಮೆ ಕಲಾಭಿಮಾನಿಗಳ ಒತ್ತಾಯಕ್ಕೆ ಮಣಿದು ಮತ್ತೆ ಬಣ್ಣದ ಬದುಕಿನಲ್ಲೇ ಸಫಲತೆಯತ್ತ ಸಾಗಿದ್ದೇನೆ. ಎಷ್ಟೋ ಸಂಘಸಂಸ್ಥೆಗಳು ನನ್ನನ್ನು ಆಹ್ವಾನಿಸಿ ''ತಾವು ಅರವತ್ತು ವರ್ಷಗಳಿಂದಲೂ ಕನ್ನಡ ರಂಗಭೂಮಿಯಲ್ಲಿ ತಮ್ಮ ಅಮೋಘವಾದ ಹಾಡುಗಾರಿಕೆಯಿಂದ, ಅಭಿನಯ ಕೌಶಲ್ಯದಿಂದ ಕನ್ನಡರಂಗಕಲೆಯ ಸೇವೆಗೈದಿದ್ದೀರಿ. ಕನ್ನಡಿಗರ ಪ್ರೀತಿ,ಗೌರವ, ವಿಶ್ವಾಸಗಳಿಗೆ ಪಾತ್ರರಾಗಿದ್ದೀರಿ. ಕನ್ನಡಿಗರ ಹೃದಯಮಂದಿರದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಪಡೆದಿದ್ದೀರಿ'' ಎಂದು ತುಂಬು ಹೃದಯದಿಂದ ನನ್ನ ಕಲಾ ಜೀವನವನ್ನು ಹೊಗಳಿ ಸನ್ಮಾನಿಸಿವೆ. ಈ ಸಂಘ ಸಂಸ್ಥೆಗಳ ನಿಸ್ಪೃಹವಾದ ಸನ್ಮಾನದಿಂದ ನನ್ನ ಕಲಾಜೀವನದ ಕಹಿ ಘಟನೆಗಳು ದೂರವಾಗಿ ಮೊದಲಿನ ಕೆಚ್ಚು, ಸಾಹಸ, ಹುರುಪು, ಉತ್ಸಾಹ ನನ್ನಲ್ಲಿ ಮರುಕಳಿಸುತ್ತವೆ.

ಇಂದು ನಾನು ಕಲಾರಂಗದಲ್ಲಿ ಸಾಕಷ್ಟು ಖ್ಯಾತನಾಮಳಾಗಿದ್ದರೆ ಅದರ ಶ್ರೇಯಸ್ಸು, ಕೀರ್ತಿ ನನಗೆ ಸಂಗೀತಾಭಿನಯಗಳೆರಡರಲ್ಲೂ ವಿಶೇಷವಾದ ಶಿಕ್ಷಣವಿತ್ತ, ಅಷ್ಟೇಕೆ, ತಮ್ಮ ಸರ್ವಸ್ವವನ್ನೂ ಧಾರೆ ಎರೆದುಕೊಟ್ಟ ನನ್ನ ತೀರ್ಥರೂಪು, ಸಂಗೀತದ ಗುರು, ವಾಗ್ದೇವಿಯ ವರಪುತ್ರ, ರಸಋಷಿ ದಿವಂಗತ ಮಳವಳ್ಳಿ ಸುಬ್ಬಣ್ಣ ಅವರದು. ಕಲೆಯ ರಂಗದಲ್ಲಿ ನನ್ನನ್ನು ಪ್ರವರ್ಧಮಾನಕ್ಕೆ ತಂದ ಅವರ ಸಾಧನೆ-ಪ್ರೌಢಿಮೆಯ ಬಗ್ಗೆ ನನಗೆ ತಿಳಿದ ಕೆಲವು ವಿಷಯಗಳನ್ನು ತಮ್ಮಲ್ಲಿ ನಿವೇದಿಸುವುದು ಉಚಿತವೆನಿಸುತ್ತದೆ. ಅರ್ಧಶತಮಾನದವರೆಗೆ ಅವಿಶ್ರಾಂತ ಕಲಾಸೇವೆಗೈದು ಶಿವೈಕ್ಯರಾದ ನನ್ನ ತಂದೆಯವರು ಕೇವಲ ವ್ಯಕ್ತಿಯಷ್ಟೇ ಅಲ್ಲ; ಅವರೊಂದು ಶಕ್ತಿ. ವಿಖ್ಯಾತ ನಾಟಕ ಕಂಪನಿಗಳಾದ ಗುಬ್ಬಿ ಕಂಪನಿ, ಚಾಮುಂಡೇಶ್ವರಿ ನಾಟಕ ಸಭಾ,

ಸಿ.ಬಿ. ಮಲ್ಲಪ್ಪನವರ ಶ್ರೀ ಚಂದ್ರಮೌಳೇಶ್ವರ ನಾಟಕ ಮಂಡಲಿಗಳಲ್ಲಿ ಕಾವಿಬಟ್ಟೆ ಧರಿಸಿ ಹಾರ್ಮೋನಿಯಂ, ತಬಲಾದವರೊಂದಿಗೆ ಕುಳಿತು ಪಿಟೀಲು ನುಡಿಸುತ್ತಿದ್ದುದನ್ನು ಇಂದಿಗೂ ಅವರನ್ನು ನೋಡಿರುವ ಕಲಾರಸಿಕರು ಜ್ಞಾಪಿಸಿಕೊಳ್ಳುತ್ತಲೇ ಇರುತ್ತಾರೆ. ಅಭಿನಯ ವಿಶಾರದ ದಿವಂಗತ ಜಿ. ನಾಗೇಶರಾಯರು ಕಂದಗಳನ್ನು ಹಾಡುತ್ತಿದ್ದಾಗ ನನ್ನ ತಂದೆ ಪಿಟೀಲು ನುಡಿಸಿ ಒಸರಿಸುತ್ತಿದ್ದ ನಾದ ಮಾಧುರ್ಯ ಬಣ್ಣನೆಗೆ ಮೀರಿದ್ದು, ಸಂಗೀತಾಭಿಮಾನಿಗಳು ನಮ್ಮ ಮನೆಗೆ ಬಂದು 'ಸುಬ್ಬಣ್ಣನವರೇ ಸ್ವಲ್ಪ ಆಗಲಿ' ಎಂದರೆ ಸಾಕು, ಅವರು ಕಮಾನನ್ನು ಈಚೆಗೆಳೆದು, ನುಡಿಸುತ್ತಿದ್ದ ಬಗೆಯಿಂದಾಗಿ ಅವರ ಪ್ರೌಢಿಮೆಗೆ ವಿನಯದ ತೊಡಿಗೆ ಬಂದಿತ್ತು.

ತಂದೆಯವರು ನುಡಿಸುತ್ತಿದ್ದ ಕಂದ, ಮಟ್ಟುಗಳನ್ನು ಕೇಳಲೆಂದೇ ಕಲೋಪಾಸಕರು, ಎಲ್ಲೆಲ್ಲಿಂದಲೋ ತಂಡೋಪತಂಡವಾಗಿ ಬರುತ್ತಿದ್ದರು, ತಾತಾ ಎಂದೂ, ಮಳವಳ್ಳಿ ಸುಬ್ಬಣ್ಣ ಎಂದೂ, ಪಿಟೀಲು ಸುಬ್ಬಣ್ಣ ಎಂದೂ ತಂದೆಯವರು ರಸಿಕರಿಗೆ ಪರಿಚಿತರಾಗಿದ್ದರು. ಸಾರ್ವಜನಿಕ ಪಿಟೀಲು ಕಚೇರಿಗಳಿಗೆ ಅವರು ಎಂದೂ ಒಪ್ಪಿಕೊಂಡವರಲ್ಲ, ಸ್ನೇಹಿತರ ಆನಂದಕ್ಕಾಗಿ ಹಿಡಿದ ವಾದ್ಯವನ್ನು ತಾಸು ಕಾಲ ಕೆಳಗೆ ಇಟ್ಟವರಲ್ಲ. ತಂತಿಯ ಮೇಲೆ ಕಮಾನನ್ನು ಇಟ್ಟರೆ ಸಾಕು ಅವರು ಒಮ್ಮೆಲೇ ಮೈಮರೆಯುತ್ತಿದ್ದರು. ಅವರ ವಾದನದ ಸೊಬಗಿಗೆ ಮನಸೋತ ಶ್ರೋತೃಗಳು ಬೇರೊಂದು ಲೋಕವನ್ನೇ ಪ್ರವೇಶಿಸುತ್ತಿದ್ದರು. ಇನ್ನು ಆ ಕಾಲದ ರಂಗ ಕಲಾವಿದರಿಗೆ ಅವರು ಗುರು. ತಮ್ಮ ಭಾವ ಪ್ರಧಾನ ಗದ್ಯಶೈಲಿಯಿಂದ, ಹೃದ್ಯ ಅಭಿನಯದಿಂದ ಕನ್ನಡ ತಿಳಿಯದವರನ್ನೂ ಮೆಚ್ಚಿಸಿದ ಮಹಮದ್ ಪೀರ್, ಕನ್ನಡ ರಂಗಭೂಮಿಯ ಪ್ರತ್ಯಕ್ಷ ಯಮರೆನಿಸಿದ್ದ ನಟಭಯಂಕರ ಎಂ.ಎನ್. ಗಂಗಾಧರರಾವ್, ಗಾಯಕ ನಟ ಎಂ. ಸುಬ್ಬರಾವ್, ಗಾನಕಲಾ ವಿಶಾರದೆ ಕೆ. ಅಶ್ವತ್ಥಮ್ಮ, ಅಭಿನಯ ಕಲಾಧೀಮಂತ ಎಂ.ವಿ. ಸುಬ್ಬಯ್ಯನಾಯ್ಡು, ಪ್ರಸಿದ್ಧ ಅಭಿನೇತ್ರಿ ಬಿ. ಜಯಮ್ಮ ಮೊದಲಾದ ಖ್ಯಾತನಾಮ ಕಲಾವಿದರಿಗೂ, ಅಭಿನೇತ್ರಿಯರಿಗೂ ನನ್ನ ತಂದೆ ಸಂಗೀತ ಹೇಳಿಕೊಟ್ಟವರು. ಇಂಥ ಉಜ್ವಲ ಕಲೋಪಾಸಕರ ಪುತ್ರಿಯಾಗಿ ಜನ್ಮ ತಳೆದುದು ನನ್ನ ಸುಕೃತವಲ್ಲದೆ ಮತ್ತೇನೂ ಅಲ್ಲ.

ಕಲೆಗೆ, ಕಲೋಪಾಸಕರಿಗೆ ನೆಲೆವೀಡಾಗಿದ್ದ ಮೈಸೂರು ನನ್ನ ಜನ್ಮಸ್ಥಳ. ಹುಟ್ಟಿದ್ದು 12ನೇ ಸೆಪ್ಟೆಂಬರ್, 1905ರಂದು, ತಾಯಿ ಲಕ್ಷ್ಮೀದೇವಮ್ಮ. ಅಕ್ಕ ಪಾರ್ವತಮ್ಮ, ಅಣ್ಣ ಪುಟ್ಟಮಲ್ಲಪ್ಪ. ಈ ವೇಳೆಗಾಗಲೇ ತಂದೆಯವರು ಸ್ವತಃ ನಾಟಕ ಕಂಪನಿಯಲ್ಲಿ ಇದ್ದುದರಿಂದ ರಂಗಭೂಮಿಯ ಪ್ರಸಿದ್ಧ ನಟನಟಿಯರು ನಮ್ಮ ಮನೆಗೆ ಬಂದು ತಂದೆಯವರೊಡನೆ ಸಂಗೀತಾಭಿನಯಗಳ ಬಗ್ಗೆ ಗಂಟೆಗಟ್ಟಲೆ ವಿಚಾರ ವಿನಿಮಯ ನಡೆಸುತ್ತಿದ್ದರು. ನಮ್ಮ ಮನೆ ಒಂದು ಬೃಹತ್ ಸಂಗೀತ ಶಿಕ್ಷಣ ಶಾಲೆಯೋ ಏನೋ ಎಂಬಂತಿತ್ತು. ಸಯ್ಯಾಜಿರಾವ್ ರಸ್ತೆಯಲ್ಲಿರುವ ವಿಕ್ಟೋರಿಯಾ ಗರ್ಲ್ಸ್

ಸ್ಕೂಲ್‌ಗೆ ನನ್ನನ್ನು ಸೇರಿಸಲಾಯಿತು. ಆದರೆ ಮನೆಯ ಸಂಗೀತಾಭಿನಯದ ವಾತಾವರಣ ನನ್ನನ್ನು ಓದಿನ ಕಡೆ ಗಮನವೀಯಲು ಬಿಡಲಿಲ್ಲ. ಹುಟ್ಟಿನಿಂದಲೇ ಸಂಗೀತದ ಗೀಳು, ತಂದೆಯವರಲ್ಲಿ ಸಂಗೀತವನ್ನು ಅಭ್ಯಾಸ ಮಾಡಲು ಮನಸ್ಸು ಹಾತೊರೆಯುತ್ತಿತ್ತು. ತಂದೆಯವರಿಗೂ ಇದು ಬಹುಬೇಗ ಅರ್ಥವಾಯಿತು. ಒಂದು ಶುಭ ಮುಹೂರ್ತದಲ್ಲಿ ಅಕ್ಕನವರಿಗೂ ನನಗೂ ಸಂಗೀತ ಪಾಠ ಪ್ರಾರಂಭ ಮಾಡಿದರು. ಎರಡು ವರ್ಷಗಳ ಪರ್ಯಂತ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ನಿಷ್ಕೃಷ್ಟವಾದ ಶಿಕ್ಷಣ ಕೊಟ್ಟರು. ಸಂಗೀತದ ಪಾಠ ಪೂರೈಸಿದ ಮೇಲೆ ತಂದೆಯವರು ನನಗೆ ಹೇಳಿದರು. ''ನೋಡಮ್ಮಾ, ನಿನಗೆ ದೈವದತ್ತವಾದ ಕಂಠಶ್ರೀ ಇದೆ. ಸಾಕಷ್ಟು ತರಬೇತಿಯನ್ನೂ ಕೊಟ್ಟಿದ್ದೇನೆ. ಆದರೆ ಇಷ್ಟಕ್ಕೆ ತೃಪ್ತಳಾಗಬೇಡ. ಅಕ್ಷಯವಾದ ತೃಷೆ, ನಿರಂತರವಾದ ಸಾಧನೆ ನಿನ್ನದಾಗಲಿ. ಇದನ್ನು ನಿನ್ನ ಬಾಳಿಗೆ ತಾರಕಮಂತ್ರವಾಗಿಸಿಕೋ. ಆಗ ಮಾತ್ರ ಸಂಗೀತ ಶಾರದೆಯ ಸನ್ನಿಧಿ ಸಾಧ್ಯ '' ಎಂದರು. ಇಂದಿಗೂ ಆ ಮಾತು ನನ್ನ ಸ್ಮೃತಿ ಪಟಲದಿಂದ ಜಾರಿಹೋಗಿಲ್ಲ. ಮುಂದೆ ಅವರು ಶ್ರೀಕೃಷ್ಣ ವಿಲಾಸ ನಾಟಕ ಸಭಾ ನೇತೃತ್ವವನ್ನು ವಹಿಸಿಕೊಂಡ ಮೇಲೆ ನನಗೂ ರಂಗಪ್ರವೇಶವಾಯಿತು.

ನನ್ನ ತಂದೆಯವರಿಗೆ ಮರು ಮದುವೆಯೂ ಆಯಿತು. ಉದರ ನಿರ್ವಹಣೆಗಾಗಿ ಸಂಗೀತಪಾಠ ಇಟ್ಟುಕೊಂಡರು. ಈ ಮಧ್ಯೆ ಅವರಿಗೆ ಮೈಸೂರು ಬೇಸರವೆನಿಸಿತು. ಸ್ವಲ್ಪ ಕಾಲ ಮೈಸೂರಿನಿಂದ ದೂರವಿರಬೇಕೆಂದು ಮೂಗೂರಿಗೆ ಹೋಗಿ ನೆಲೆಸಿದರು. ಅಲ್ಲಿ ಒಂದು ದಿನ ನಮಗೆ ಸಂಗೀತ ಪಾಠ ಹೇಳಿಕೊಡುತ್ತಿದ್ದಾಗ ಯಳಂದೂರಿನಿಂದ ವೀರಬಸಪ್ಪ ಎಂಬ ಶ್ರೀಮಂತರೊಬ್ಬರು ತಂದೆಯವರನ್ನು ಕಾಣಲು ಬಂದರು. ಸ್ಥಗಿತಗೊಂಡಿದ್ದ ತಮ್ಮ ಶ್ರೀ ಕೃಷ್ಣವಿಲಾಸ ನಾಟಕಸಭಾ ವೃತ್ತಿ ನಾಟಕ ಮಂಡಲಿಯನ್ನು ಮತ್ತೆ ಪ್ರಾರಂಭಿಸಲಿದ್ದೇನೆ. ಅದಕ್ಕೆ ತಾವು ಮೇನೇಜರ್ ಆಗಬೇಕೆಂದು ಕೋರಿಕೊಂಡರು. ತಂದೆಯವರು ಸ್ವಲ್ಪ ಕಾಲ ಯೋಚಿಸಿ ಆಗಲಿ ಎಂದು ಒಪ್ಪಿಕೊಂಡರು.

ಕಲಾವತಿ ಪರಿಣಯ, ಪಾಂಡು ವಿಜಯ, ಸದಾರಮೆ, ಗುಲೇಬಕಾವಲಿ, ಚೋರಕಥೆ, ಸಾರಂಗಧರ, ಮತ್ತು ವಸಂತಮಿತ್ರ ವಿಜಯ, ಮೊದಲಾದ ಸಂಗೀತ ಪ್ರಧಾನವಾದ ನಾಟಕಗಳನ್ನು ಈ ಮಂಡಲಿಗೋಸ್ಕರ ತೆಗೆದುಕೊಂಡ ನಂತರ ಪ್ರಮುಖ ಬಾಲಪಾತ್ರಗಳು ನನಗೆ ಮೀಸಲಾದವು. ನನ್ನ ಶಾರೀರ ಸೊಗಸಾಗಿದ್ದುದರಿಂದ ಈ ಪಾತ್ರಗಳಲ್ಲಿ ನಾನು ಯಶಸ್ವಿಯಾಗಬಲ್ಲೆನೆಂಬುದನ್ನು ತಂದೆಯವರು ನಿರೀಕ್ಷಿಸಿದರು; ದಿನದ ಬಹುವೇಳೆ ರಂಗ ಶಿಕ್ಷಣ ಪಾತ್ರಾಭ್ಯಾಸಗಳಲ್ಲಿ ಹೋಗುತ್ತಿತ್ತು. ಈ ವೇಳೆಗೆ ನಾನು ಏಳನೇ ವಯಸ್ಸಿನ ಕಿಶೋರಿ.

ಇದು ಐವತ್ತು ವರ್ಷಗಳ ಹಿಂದಿನ ಮಾತು. ಇನ್ನೂ ಬಯಲಾಟದ ಕಾಲ. ಅಂದಿನ

ಜನ ಕಲಾಪ್ರೇಮಿಗಳು, ರಸಿಕರು. ರಂಗಭೂಮಿಯ ಬಗ್ಗೆ ಅಪಾರವಾದ ಆಸ್ಥೆ ತೋರುತ್ತಿದ್ದರು. ರಂಗಮಂಟಪವನ್ನು ಮೈದಾನಗಳಲ್ಲಿ ಕಟ್ಟಬೇಕಾಗುತ್ತಿತ್ತು. ಮೂರಡಿ ಹಳ್ಳ ತೆಗೆದು, ಆ ಮಣ್ಣು ವೇದಿಕೆಗಷ್ಟು, ಹಿಂದುಗಡೆಯ ನಾಲ್ಕಾಣೆ ವಿಭಾಗಕ್ಕಷ್ಟು ಪೇರಿಸಿ ಚಪ್ಪರ ಕಟ್ಟಿ ಮೇಲೆ ತಗಡು ಹೊದಿಸುತ್ತಿದ್ದರು. ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಲಾಗುತ್ತಿತ್ತು. ವಿದ್ಯುತ್ ಯುಗವಲ್ಲವಾದ್ದರಿಂದ ಚಂದ್ರಕಾಂತ (ಗ್ಯಾಸ್ ಲೈಟ್)ಸಿದ್ಧವಾಗಿರುತ್ತಿತ್ತು. ಧ್ವನಿವರ್ಧಕದ ಹೆಸರು ಇರಲೇ ಇಲ್ಲ. ಶಾರೀರ ಸಂಪತ್ತಿಲ್ಲದ ನಟರೇ ಆಗ ಇರಲಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಅಂತಹ ರಂಗಮಂದಿರದಲ್ಲಿ ಮುಂದಿನ ಸೀಟಿಗೆ ಎರಡು ರೂಪಾಯಿ. ಹಿಂದಿನ ಎತ್ತರದ ನೆಲಕ್ಕೆ ನಾಲ್ಕಾಣೆ. ( ಈ ಕ್ಲಾಸಿನ ಪ್ರೇಕ್ಷಕರಿಗೆ ನಾಲ್ಕಾಣೆ ಪ್ರಭುಗಳೆಂದೇ ನಾಮಕರಣವಾಗಿ ಹೋಗಿತ್ತು) ರಾತ್ರಿಯೂಟ ಮುಗಿಸಿ, ಎಲೆಯಡಿಕೆ ಮೆದ್ದು, ಆ ಜನ ರಂಗಮಂದಿರಕ್ಕೆ ಬರುತ್ತಿದ್ದರು. ಉತ್ತಮವಾಗಿ ನಡೆಯದ ನಾಟಕಕ್ಕೆ ಛೀಗಳೆಯುವುದಿರಲಿ, ಕಲ್ಲು ಬೀರಲು ಸಹ ಆ ಪ್ರೇಕ್ಷಕ ವೃಂದ ಹಿಂದೆಮುಂದೆ ನೋಡುತ್ತಿರಲಿಲ್ಲ. ನಾಟಕ ಪಾಂಕ್ತವಾಗಿ ನಡೆಯಬೇಕು. ಮಂಗಳಾರತಿ ಆಗುವ ಹೊತ್ತಿಗೆ ಸೂರ್ಯೋದಯ ವಾದರೂ ಅಡ್ಡಿಯಿಲ್ಲ ಆತುರವಿರಬಾರದು. ಸಂಗೀತ ಸೊಂಪಾಗಿರಬೇಕು. ಸಂಗೀತವಿಲ್ಲದ ನಾಟಕ, ಅದು ನಾಟಕವೇ ಅಲ್ಲ ಎಂಬ ಸಿದ್ಧಾಂತ ಪ್ರೇಕ್ಷಕರದಾಗಿತ್ತು. ಶೃಂಗಾರ ಮುಂತಾದ ನವರಸ ಭರಿತ ಕಥಾವಸ್ತು, ಶ್ರೇಷ್ಠ ಕಲಾವಿದರು. ಉತ್ತಮ ಸಂಗೀತ ಇವಕ್ಕೆ ಜನ ಬೆಲೆಕೊಡುತ್ತಿದ್ದರು. ಅಂದಿನ ಅಭಿನಯ ಕೌಶಲವೆಂತಹುದೆಂದರೆ ಗಂಡಸರೇ ಸ್ತ್ರೀ ಪಾತ್ರವನ್ನೂ ಅನ್ಯಾದೃಶವಾಗಿ ನಿರ್ವಹಿಸುತ್ತಿದ್ದರು. ಅಂತಹ ಕಾಲದಲ್ಲಿ ನಾನು ಕನ್ನಡ ರಂಗಭೂಮಿಗೆ ಪ್ರಥಮ ಅಭಿನೇತ್ರಿಯಾಗಿ ಪದಾರ್ಪಣ ಮಾಡಿದೆ.

ಶ್ರದ್ಧೆ, ಆಸಕ್ತಿಗಳಿಂದ ಸಂಗೀತಾಭ್ಯಾಸ ನಡೆದಿದ್ದಂತೆಯೇ ಸಂಗೀತ ಪ್ರಧಾನ ನಾಟಕಗಳಲ್ಲೂ ಸಾಕಷ್ಟು ತರಬೇತಿ ಹೊಂದಿದೆ. ತಂದೆಯವರ ಆಣತಿಯಂತೆ ಯಳಂದೂರಿನ ಶ್ರೀ ಕೃಷ್ಣ ಕರ್ನಾಟಕ ನಾಟಕ ಸಭಾದಲ್ಲಿ ಬಾಲಪಾತ್ರಗಳನ್ನು ನಿರ್ವಹಿಸತೊಡಗಿದೆ. ಸುಶ್ರಾವ್ಯವಾದ ಶಾರೀರವನ್ನು ಪಡೆದಿದ್ದ ನಾನು ಈ ನಾಟಕದಲ್ಲಿ ಕಲಾರಸಿಕರ ಮೆಚ್ಚುಗೆಗೆ ಪಾತ್ರಳಾದೆ. ಆಗ್ಗೆ ಈ ಮಂಡಳಿಯಲ್ಲಿ ಸ್ತ್ರೀ ಪಾತ್ರಗಳನ್ನು ವೈಕುಂಠಾಚಾರ್, ಶಂಕರಪ್ಪ, ಚಂದ್ರಶೇಖರಪ್ಪ ಮೊದಲಾದವರು ನಿರ್ವಹಿಸುತ್ತಿದ್ದರು. ಇವರುಗಳ ಅಭಿನಯ, ಪರಿಣತ ಅಭಿನೇತ್ರಿಯರನ್ನೂ ನಾಚಿಸುವಂತಿತ್ತು. ಹನುಮಂತರಾವ್ ಎಂಬುವರು ರಾಜಾಪಾರ್ಟನ್ನು ಬಹು ಸೊಗಸಾಗಿ ಮಾಡುತ್ತಿದ್ದರು. ಕೆಲವು ಕಾಲ ನಡೆದ ಈ ಮಂಡಳಿ ಕೊನೆಗೆ ಹೇಳಹೆಸರಿಲ್ಲದಂತಾಗಿ ಹೋಯಿತು.

ಆ ಕಂಪನಿ ನಿಂತುಹೋದ ನಂತರ ಮತ್ತೆ ಸಂಗೀತಾಭ್ಯಾಸದಲ್ಲೇ ಮಗ್ನಳಾದೆ. ಒಂದು ದಿನ ತುಮಕೂರಿನ ಸೀತಾಮನೋಹರ ನಾಟಕ ಮಂಡಳಿಯ ನೇತಾರರಾದ ಸೀತಪ್ಪ (ಸೀತಾರಾಮಯ್ಯನವರು)ನವರು ಆಗಮಿಸಿ ತಂದೆಯವರನ್ನು ಕುರಿತು

ದುಗುಡ ತುಂಬಿದ ದನಿಯಲ್ಲಿ ಕೈಮುಗಿದು "ಸಂಗೀತ ಕ್ಷೇತ್ರದಲ್ಲಿ, ಕನ್ನಡ ರಂಗಭೂಮಿಯಲ್ಲಿ ಕೀರ್ತಿಯ ಗೌರಿಶಂಕರವನ್ನೇರಿರುವ ತಾವು ದೊಡ್ಡ ಮನಸ್ಸು ಮಾಡಿ ನಮ್ಮ ಕಂಪನಿಗೆ ದಯಮಾಡಿಸಿ, ಕುಂಟುತ್ತಾ ನಡೆಯುತ್ತಿರುವ ನಮಗೆ ಪ್ರೋತ್ಸಾಹವೀಯಬೇಕು" ಎಂದು ಪ್ರಾರ್ಥಿಸಿದರು. ತಂದೆಯವರ ಒಪ್ಪಿಗೆ ದೊರೆತ ನಂತರ, ನನ್ನನ್ನೂ - ಅಕ್ಕನನ್ನೂ ಕುರಿತು ಕನ್ನಡ ರಂಗಭೂಮಿಯ ಆಚಾರ್ಯ ಸ್ವರೂಪಿಗಳಾದ ಶ್ರೀ ಸುಬ್ಬಣ್ಣನವರ ಅಭಿನಯದ ಕಮ್ಮಟದ ಸ್ವರ್ಣನಾಣ್ಯವಾಗಿ ರೂಪುಗೊಂಡ ನೀವಿಬ್ಬರೂ ನಮ್ಮ ಕಂಪನಿಗೆ ಬರಬೇಕು ಎಂದರು.

ಸೀತಪ್ಪನವರು ಸ್ತ್ರೀ ಪಾತ್ರಗಳ ಅಭಿನಯದಿಂದ ಪ್ರೇಕ್ಷಕ ಕೋಟಿಯನ್ನು ಬೆರಗುಗೊಳಿಸಿ ಕನ್ನಡ ರಂಗಭೂಮಿಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದರು. 1914ರ ಮಾತು. ಅವರ ಮಂಡಳಿ ಕರ್ನಾಟಕದ ಹೆಸರಾಂತ ನಾಟಕ ಕಂಪನಿಗಳಲ್ಲಿ ಒಂದೆನಿಸಿತ್ತು. ಕಂಪನಿಯಲ್ಲಿ ಅಭಿನಯ ಕೌಶಲದಿಂದ, ದೈವಿಕ ಶಾರೀರ ಸಂಪತ್ತಿನಿಂದ ಪ್ರೇಕ್ಷಕರನ್ನು ತಲೆದೂಗಿಸುತ್ತಿದ್ದ ಅನೇಕ ನಟರಿದ್ದರು. ಆದರೂ ಸೀತಪ್ಪನವರ ಹಣೆಯ ಬರಹವೋ, ಕನ್ನಡ ರಂಗಭೂಮಿಯ ದುರಾದೃಷ್ಟವೋ ಉತ್ಪತ್ತಿ (ಕಲೆಕ್ಷನ್) ಮಾತ್ರ ಕುಂಟುತ್ತಲೇ ನಡೆಯುತ್ತಿತ್ತು. ಗುಲೇಬಕಾವಲಿ, ಸುಭದ್ರಾ, ಪರಿಣಯ, ಕವಿರತ್ನ ಕಾಳಿದಾಸ . . . ಮೊದಲಾದವು ಕಂಪನಿಯ ಹೆಸರಾಂತ ನಾಟಕಗಳು. ಸುಭದ್ರಾ, ಚೂಡಾಮಣಿ, ಬಕಾವಲಿ ಮೊದಲಾದ ಪಾತ್ರಗಳನ್ನು ನಾನು ನಿರ್ವಹಿಸತೊಡಗಿದೆ. ಅಕ್ಕ ಕೃಷ್ಣನ ಪಾತ್ರವನ್ನು ನಿರ್ವಹಿಸ ತೊಡಗಿದಳು. ಕಂಪನಿಯ ಮಾಲೀಕರು ಸತ್ಯಭಾಮಾ(ಸುಭದ್ರಾ) ರತ್ನಮಾಲಾ (ಕವಿರತ್ನ ಕಾಳಿದಾಸ) ಮೊದಲಾದ ಪಾತ್ರಗಳನ್ನು ಅಭಿನಯಿಸುತ್ತಿದ್ದರು. ಕಂಪನಿ ತುಮಕೂರು, ಹಾಸನ, ಗೋಣಿಕೊಪ್ಪಲು, ವೀರಾಜಪೇಟೆ ಮೊದಲಾದೆಡೆಗಳಲ್ಲಿ ಮೊಕ್ಕಾಂ (ಕ್ಯಾಂಪ್)ಮಾಡಿತು. ಸುಮಾರು 8-10 ತಿಂಗಳ ತನಕ ಈ ಮಂಡಲಿಯ ಸೇವೆಗೈದ ತಂದೆಯವರು ಸ್ವಂತ ಕಂಪನಿಯ ಸ್ಥಾಪನೆಯ ಬಗ್ಗೆ ಕಾರ್ಯಮಗ್ನರಾದರು. ತಂದೆಯವರ ಸ್ವಂತ ನಾಟಕ ಮಂಡಲಿಯ ಸುದ್ದಿ ಬಹುಬೇಗ ಎಲ್ಲ ಕಡೆಯೂ ಹರಡಿತು. ಶ್ರೀ ಶಾರದಾ ವಿಲಾಸ ನಾಟಕ ಸಭಾದ ಮಾಲೀಕ ಶ್ರೀ ಬಿ. ಎಂ. ರಂಗನಾಥ ಮೊದಲಿಯಾರರ ಕಿವಿಗೂ ಈ ಸುದ್ದಿ ಬೀಳುವುದು ತಡವಾಗಲಿಲ್ಲ. ಅವರು ತಂದೆಯವರನ್ನು ಭೇಟಿಮಾಡಿ ತಮ್ಮ ಕಂಪನಿಯ ಭಾಗಸ್ಥರಾಗಲು (ಪಾರ್ಟ್ನರ್) ಕರೆಕೊಟ್ಟರು.

ಸರ್ವಶ್ರೀ ಬಿ.ವಿ. ಗುರುಮೂರ್ತಪ್ಪ, ಜಿ. ಮುನಿಸ್ವಾಮಯ್ಯ, ಬಫೂನ್ ಡಿ. ಮುನಿಸ್ವಾಮಯ್ಯ, ಬೆಳ್ಳೂರು ನಂಜುಂಡಯ್ಯ, ಮಿರ್ಲೆ ಶ್ರೀನಿವಾಸರಾವ್, ಆನೇಕಲ್ ಮುನಿಸ್ವಾಮಯ್ಯ ಮೊದಲಾದ ಪ್ರಖ್ಯಾತ ನಟರುಗಳಿಂದ ಕೂಡಿದ್ದ ಈ ಕಂಪನಿ ಕರ್ನಾಟಕದಲ್ಲಿ ಹೆಸರು ಗಳಿಸಿತ್ತು. ಸಂಪೂರ್ಣ ರಾಮಾಯಣ, ಸುಭದ್ರ, ನಾಟಕಗಳು

ಯಶಸ್ವಿ ಪ್ರಯೋಗಗಳೆನಿಸಿದವು. ಈ ನಾಟಕಗಳಲ್ಲಿ ಸೀತೆ, ಸುಭದ್ರೆ, ಪಾತ್ರಗಳನ್ನು ವಹಿಸತೊಡಗಿದೆ. ದಿನವಹಿ600-700ರೂ. ಕಲೆಕ್ಷನ್. ಕಿಚ್ಚಟ್ಟಿ ಛತ್ರದಲ್ಲಿದ್ದ ರತ್ನಾವಳಿ ಥಿಯೇಟರಿನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಇಲ್ಲಿ 2-3 ತಿಂಗಳುಗಳು ಮಾತ್ರವಿದ್ದು ಕಂಪನಿಯಿಂದ ತಂದೆಯವರೊಡನೆ ಹೊರಬಂದೆ. ಕಂಪನಿಯಲ್ಲಿ ರಾಜಕೀಯ ತಲೆಹಾಕಿ ಸೌಹಾರ್ದತೆಯ ವಾತಾವರಣ ಕಲುಷಿತಗೊಂಡು ಮನಸ್ಸಿಗೆ ವೇದನೆಯಾದುದೇ ಇದಕ್ಕೆ ಕಾರಣ.

ತಂದೆಯವರಿಗೆ ಸ್ವಂತ ನಾಟಕ ಮಂಡಲಿಯನ್ನು ನಡೆಸಲೇಬೇಕು ಎನ್ನುವ ಛಲ ದಿನೇ ದಿನೇ ಪ್ರಬಲವಾಗತೊಡಗಿತು. ತಂದೆಯವರಿಂದಲೇ ಶಿಕ್ಷಣ ಪಡೆದಿದ್ದ ಅನೇಕ ಖ್ಯಾತ ನಟರು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ತಮ್ಮ ಬೆಂಬಲವನ್ನು ಸೂಚಿಸಿದರು.

1920-21ರ ಸುಮಾರಿಗೆ **'ಶ್ರೀ ಸಾಮ್ರಾಜ್ಯ ಲಕ್ಷ್ಮೀ ನಾಟಕ ಸಭಾ'** ಎಂಬ ಲಾಂಛನದೊಡನೆ ನಮ್ಮ ಸ್ವಂತ ಕಂಪನಿ ಪ್ರಾರಂಭವಾಯಿತು. ಅಣ್ಣ ಪುಟ್ಟಮಲ್ಲಪ್ಪನವರು ಕಂಪನಿಯ ಮಾಲೀಕನ ಪಟ್ಟವನ್ನು ವಹಿಸಿದರು. ತಂದೆಯವರು ಮ್ಯಾನೇಜರ್ ಹುದ್ದೆಯನ್ನು ಹೊತ್ತು ಮಾರ್ಗದರ್ಶನ ನೀಡಿ ಕಂಪನಿಯ ಪ್ರಗತಿಗೆ ಬದ್ಧಕಂಕಣರಾದರು. ಮಂಡಲಿಯ ಪ್ರಾರಂಭೋತ್ಸವಕ್ಕೆ ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರು ಆಗಮಿಸಿ ಆಶೀರ್ವದಿಸಿದರು. ಬೊಂಬಾಯಿನ ಹೆಸರಾಂತ ಪೇಯಿಂಟರ್ ಕೇಶವ ವಿಷ್ಣು ಕೇಳ್ಕರ್ ಅವರು ಅದ್ದೂರಿಯ ದೃಶ್ಯಾವಳಿಗಳನ್ನು ರಚಿಸಿ ಕೊಟ್ಟರು. ಸೊಗಸಾದ ವಾದ್ಯವೃಂದವೂ ಸಿದ್ಧವಾಯಿತು.

ಬೆಂಗಳೂರು ದೊಡ್ಡಣ್ಣ ಹಾಲ್‌ನಲ್ಲಿ ನಾಟಕ ಪ್ರದರ್ಶನಕ್ಕೆ ಏರ್ಪಾಡಾಯಿತು. ಗುರುಮೂರ್ತಪ್ಪನವರು ರಾಜಾಪಾರ್ಟುಗಳನ್ನು ನಿರ್ವಹಿಸತೊಡಗಿದರು. ನಾನು ಸುಭದ್ರಾ, ದ್ರೌಪದಿ, ಗುಲೇಬಕಾವಲಿ, ಚೂಡಾಮಣಿ ಮೊದಲಾದ ಪಾತ್ರಗಳ ನಿರ್ವಹಣೆಯಿಂದ ಪ್ರೇಕ್ಷಕರನ್ನು ತಲ್ಲೀನರನ್ನಾಗಿಸುತ್ತಿದ್ದೆ (ಇದಕ್ಕೆ ಬಹುಮಟ್ಟಿಗೆ ನನ್ನ ಕಂಠಶ್ರೀ ಕಾರಣವಾಗಿತ್ತು. ಉಳಿದ ನಟರ ಅಭಿನಯವೂ ಸಹ ಕಲಾಪ್ರೇಮಿಗಳನ್ನು ಪುನಃ ಪುನಃ ಆಕರ್ಷಿಸುವಷ್ಟು ಉನ್ನತ ಮಟ್ಟದಲ್ಲಿತ್ತು.) ಸರಿಸುಮಾರು ಆರು ತಿಂಗಳ ತನಕ ನಾಟಕಗಳ ಪ್ರದರ್ಶನವಾಗಿ ಕಂಪನಿಯ ಕೀರ್ತಿ ಪ್ರತಿಷ್ಠೆಗಳು ಶಿಖರಕ್ಕೇರಿತು.

ಬೆಂಗಳೂರಿನ ಯಶಸ್ವೀ ಮೊಕ್ಕಾಂ ಮುಗಿಸಿ ಮುಂದೆ ನಾವು ಬಳ್ಳಾರಿಯಲ್ಲಿ ಮೊಕ್ಕಾಂ ಮಾಡಿದೆವು. ಇಲ್ಲಿ ವಿರಾಟಪರ್ವ, ಹರಿಶ್ಚಂದ್ರ, ಪ್ರಹ್ಲಾದ, ಸುಭದ್ರಾ ಕಲ್ಯಾಣ, ಕಾಳಿದಾಸ, ಗುಲೇಬಕಾವಲಿ ಮೊದಲಾದ ನಾಟಕಗಳನ್ನು ಆಡತೊಡಗಿದೆವು. ಅಭಿನಯ ವಿಶಾರದ ಜಿ. ನಾಗೇಶರಾಯರು ರಾಜಾ ಪಾತ್ರಗಳನ್ನು, ನಾನು ದ್ರೌಪದಿ,

ಸುಭದ್ರಾ, ಚೂಡಾಮಣಿ, ಬಕಾವಲಿ ಪಾತ್ರಗಳನ್ನೂ ನಿರ್ವಹಿಸತೊಡಗಿದೆ. ನಾಗೇಶರಾಯರಂತಹ ಪರಿಣತ ನಟರನ್ನು ನಾನು ಇದುವರೆಗೂ ಕಂಡಿಲ್ಲ. ಕನ್ನಡ ನಾಟಕ ಪ್ರಪಂಚವಿನ್ನೂ ಶೈಶಾವಸ್ಥೆಯಲ್ಲಿದ್ದು ನಾಟಕಗಳಿಗೆ ಯಾವ ನವ್ಯತೆಯೂ ಇರದಿದ್ದ ಕಾಲದಲ್ಲಿಯೇ ನಿಸ್ಸೀಮ ಕಲಾವಿದರೆಂದು ಖ್ಯಾತನಾಮರಾಗಿದ್ದರು. ಅವರು ಶಾಕುಂತಲಾದಲ್ಲಿ ದುಷ್ಯಂತ, ಸುಭದ್ರದಲ್ಲಿ ಅರ್ಜುನ, ವಿರಾಟಪರ್ವದಲ್ಲಿ ಕೀಚಕ, ಧ್ರುವವಿಜಯದಲ್ಲಿ ಉತ್ತಾನಪಾದ, ಮನ್ಮಥ ವಿಜಯದಲ್ಲಿ ಮನ್ಮಥ, ಕಾಳಿದಾಸದಲ್ಲಿನ ಭೂತೋ ನ ಭವಿಷ್ಯತಿ ಎಂಬಂತೆ ಅಭಿನಯಿಸುತ್ತಿದ್ದರು. ನಾಗೇಶರಾಯರ ಕಲಾಪ್ರತಿಭೆಯನ್ನು ಮೆಚ್ಚಿ ಅನೇಕ ಸಂಘಸಂಸ್ಥೆಗಳು ಪಾರಿತೋಷಕಗಳನ್ನು ಪದಕ, ಮೆಡೆಲ್ಲುಗಳನ್ನು, ತೊಡಗಳನ್ನೂ ಬಹುಮಾನಿಸಿದ್ದವು. ಅವರ ಸಂಗೀತಾಭಿನಯಗಳಿಗೆ ತಲೆದೂಗಿ ಉಡುಪಿಯ ಶ್ರೀ ವ್ಯಾಸರಾಯಮಠದ ಸ್ವಾಮಿಗಳವರು **ಅಭಿನಯ ವಿಶಾರದ** ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ತನ್ಮಯತೆಯ ಅಭಿನಯ, ಅಪಾರವಾದ ಸಂಗೀತ ಜ್ಞಾನ ಮಧುರವಾದ ಶಾರೀರ ಪಾತ್ರಗಳನ್ನು ನಿತ್ಯಜೀವಂತವಾಗಿಸುತ್ತಿದ್ದ ಇವರೊಂದಿಗೆ ನಾನು ಅಭಿನಯಿಸುತ್ತಿದ್ದ ಆ ಕಾಲವನ್ನು ನೆನೆಸಿಕೊಂಡಾಗ ಅದೇನು ಕನಸೋ ನನಸೋ ಎಂಬಂತಾಗುತ್ತದೆ. ◆

## ಸಂಗೀತದಲ್ಲಿ ಶ್ರೇಯಸ್ಸು

ಬಳ್ಳಾರಿಯಲ್ಲಿ ವಿರಾಟಪರ್ವ ನಾಟಕ ಯಶಸ್ವಿಯಾಗಿ ಪ್ರದರ್ಶನಗೊಂಡು ನಾಟಕದ ಕೀರ್ತಿ ನಾಗರಿಕರ ಮನೆಮಾತಾಗಿ ಹೋಯಿತು. ಸುತ್ತಮುತ್ತಲಿನಿಂದಲೂ ಜನ ಆಗಮಿಸಿ ನಾಟಕ ನೋಡತೊಡಗಿದರು. ನಾಟ್ಯಕಲಾಪ್ರಪೂರ್ಣ ಬಳ್ಳಾರಿ ರಾಘವರು ಒಂದು ದಿನ ರಂಗಮಂದಿರಕ್ಕೆ ದಯಮಾಡಿಸಿದರು.

ರಾಘವರು, ರಾಮದಾಸ್, ಅರ್ಜುನ, ಚಾಣಕ್ಯ, ದುರ್ಯೋಧನ, ಹರಿಶ್ಚಂದ್ರ, ರಾವಣ, ಹಿರಣ್ಯಕಶಿಪು, ವೀರನಾಯಕ, ಪಠಾಣ್‌ರುಸ್ತುಂ . . . . ಮೊದಲಾದ ಪಾತ್ರಗಳಿಂದ ಕಲಾರಸಿಕರ ಮನೋಪಟಲದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವರು. ವಿಖ್ಯಾತ ಪಾಶ್ಚಾತ್ಯ ನಾಟಕಕಾರರ, ನಟರ, ನಾಟಕ ವಿಮರ್ಶಕರ ಮೆಚ್ಚುಗೆಯನ್ನು ಸಂಪಾದಿಸಿ ನಮ್ಮ ದೇಶಕ್ಕೆ ಕೀರ್ತಿ ತಂದ ಉನ್ನತ ದರ್ಜೆಯ ನಟರು ಎಂಬುದನ್ನು ಕೇಳಿದ್ದೆ. ಈಗ ಅವರ ಆಗಮನದಿಂದ ನಮ್ಮ ಸಂಸ್ಥೆಯ ಎಲ್ಲ ನಟರು ಉತ್ಸಾಹಿತರಾಗಿ ತಮ್ಮ ಅಭಿನಯ ವೈಭವದ ಪರಿಚಯವನ್ನು ರಾಘವರಿಗೆ ಮಾಡಿಸಿದರು. ನಾನು ಈ ನಾಟಕದಲ್ಲಿ ವಹಿಸಿದ ದ್ರೌಪದಿಯ ಪಾತ್ರ ಅವರನ್ನು ತುಂಬ ರಂಜಿಸಿತೆನ್ನಬೇಕು. ನಾಟಕ ಇನ್ನೇನು ಮುಕ್ತಾಯವಾಗಬೇಕು. ರಾಘವರು ನೇರವಾಗಿ ರಂಗಮಂಚದ ಮೇಲೆ ಬಂದು ನನ್ನ ಪಾತ್ರದ ಬಗ್ಗೆ ನಾಲ್ಕಾರು ಮೆಚ್ಚುಗೆಯ ಮಾತನ್ನಾಡಿ ಸಂತೋಷದಿಂದ ಹಾರ ಹಾಕಿ ಪುರಸ್ಕರಿಸಿದರು.

ಬಳ್ಳಾರಿ ಕ್ಯಾಂಪ್ ಮುಗಿದ ನಂತರ ಹೊಸಕೋಟೆ, ಮುಡುಕುತೊರೆ, ಕೊಳ್ಳೇಗಾಲ, ಮೊದಲಾದೆಡೆಗಳಲ್ಲಿ ಕಂಪನಿ ಬೀಡುಬಿಟ್ಟಿತು. ಕೊಳ್ಳೇಗಾಲದಲ್ಲಿ ಜಿ. ನಾಗೇಶರಾಯರು ಅನಿವಾರ್ಯ ಕಾರಣಗಳಿಂದಾಗಿ ಕಂಪನಿ ಬಿಟ್ಟರು. ಪ್ರೇಕ್ಷಕರ ಮೇಲೆ ತಮ್ಮ ಪಾತ್ರಗಳಿಂದ ಅಚ್ಚಳಿಯದ ಪರಿಣಾಮವನ್ನು ಬೀರುತ್ತಿದ್ದ ನಾಗೇಶರಾಯರ ನಿರ್ಗಮನದಿಂದ ವ್ಯಸನಾಕ್ರಾಂತರಾದೆವು. ಮುಂದೆ ಆ ಸ್ಥಾನವನ್ನು ತಮ್ಮ ಗಾನ ಅಭಿನಯದಿಂದ ತುಂಬಿಕೊಟ್ಟವರೆಂದರೆ ಗುರುಮೂರ್ತಪ್ಪನವರು. ನಮ್ಮ ಮುಂದಿನ ಮೊಕ್ಕಾಂ ಮೈಸೂರು ಟೌನ್‌ಹಾಲ್‌ನಲ್ಲಿ ನಾಟಕಗಳನ್ನು ಅಭಿನಯಿಸತೊಡಗಿದೆವು. 2ನೇ ರಾಣಿ ಪಾತ್ರಕ್ಕೆ ಗೋಪಾಲಪ್ಪ ಎಂಬುವರನ್ನು ಗೊತ್ತುಮಾಡಿಕೊಂಡೆವು. ರಂಗಭೂಮಿಗೆ ಬರುವ ಮುನ್ನ ಇವರು ಜಟಕಾಗಾಡಿ ಹೊಡೆದು ಜೀವನ ನಿರ್ವಹಣೆ ಮಾಡುತ್ತಿದ್ದರಂತೆ. (2ನೇ ರಾಣಿ ಪಾತ್ರವನ್ನು ವಹಿಸುತ್ತಿದ್ದ ಗಾಣಿಗರ ಮುನಿಸ್ವಾಮಿ

ಎಂಬುವರು ಇದ್ದಕ್ಕಿದಂತೆ ಪಾತ್ರವನ್ನು ವಹಿಸಲು ನಿರಾಕರಿಸಿದ್ದರಿಂದ ತಂದೆಯವರು ಗೋಪಾಲಪ್ಪನವರನ್ನು ಈ ಪಾತ್ರಕ್ಕೆ ಆಯ್ಕೆಮಾಡಿ ತರಬೇತಿ ಇತ್ತು ಲೀಲಾಜಾಲವಾಗಿ ಪಾತ್ರಗಳನ್ನು ನಿರ್ವಹಿಸುವಂತೆ ತಯಾರು ಮಾಡಿದರು.) ಹುಂಬನನ್ನೂ ಪ್ರತಿಭಾವಂತ ಅಭಿನಯ ಪಟುವಾಗಿ ರೂಪುಗೊಳ್ಳುವಂತೆ ಶಿಕ್ಷಣ ಕೊಡುವ ಒಂದು ವಿಶೇಷ ಸಾಮರ್ಥ್ಯ ನಮ್ಮ ತಂದೆಯವರಿಗಿತ್ತು.

ನಾನು ನಿರ್ವಹಿಸುತ್ತಿದ್ದ ಚೂಡಾಮಣಿ, ಚಂದ್ರಮತಿ, ಕಯಾದು, ಸದಾರಮೆ, ಮೋಹಶಾಸನೆ, ಅಂಬೆ, ತಿಲೋತ್ತಮೆ ಮೊದಲಾದ ವಿವಿಧ ರಸಪ್ರಧಾನವಾದ ಪಾತ್ರಗಳು ಪಂಡಿತ ಪಾಮರರೀರ್ವ್ವರಿಂದಲೂ ಮನ್ನಣೆ ಪಡೆದುವು. ಸುಭದ್ರೆಯ ಪಾತ್ರವಂತೂ ಪ್ರೇಕ್ಷಕವೃಂದಕ್ಕೆ ರಸದೌತಣವಾಗಿತ್ತು. ಆ ಪಾತ್ರದ ನನ್ನ ರಂಗಗೀತೆಗಳು ಕನ್ನಡ ಜನಮನವನ್ನು ಗೆದ್ದುವು. ನಾನು ದಾರಿಯಲ್ಲಿ ಹೋದರೆ ಸಾಕು, ಕಲಾವಿದರು-ಸಂಗೀತಪ್ರೇಮಿಗಳು ನನ್ನ ಕಡೆ ಬೊಟ್ಟು ಮಾಡಿ ಹೊಗಳುತ್ತಿದ್ದರು. ರಾತ್ರಿ ಹತ್ತೂವರೆಗೆ ಪ್ರಾರಂಭವಾಗುತ್ತಿದ್ದ ನಾಟಕಗಳಿಗೆ ಜನ ಆರು ಗಂಟೆಗೇ ಬಂದು ತಮ್ಮ ಸ್ಥಳವನ್ನು ಕಾಯ್ದಿರಿಸಿಕೊಳ್ಳುತ್ತಿದ್ದರು. ನಾಟಕದಲ್ಲಿ ಸುಭದ್ರೆ, ತಲೆನೋವಿನಿಂದ ತಪ್ತಳಾದಾಗ ಕೃಷ್ಣ ಬಲರಾಮರಿಂದ ಸಂತೈಸಲ್ಪಡುತ್ತಾಳೆ. ಈ ಸಂದರ್ಭದಲ್ಲಿ ನಾನು ಹಾಡುತ್ತಿದ್ದ ರಂಗಗೀತೆಯು ಮುಂದಿನ ಪೂಜೆಯ ದೃಶ್ಯದಲ್ಲಿ ಹಾಡುತ್ತಿದ್ದ ಭೈರವಿ - ಶಹನ-ನೀಲಾಂಬರಿ ಮತ್ತು ಸುರುಟಿಗಳಿಂದ ಕೂಡಿದ ರಾಗಮಾಲಿಕೆಯು ಪ್ರೇಕ್ಷಕರಿಗೆ ಅಪೂರ್ವವಾದ ಸಂತೋಷಕೊಟ್ಟಿತು. ಪ್ರತಿಯೊಂದು ರಾಗಕ್ಕೂ ಒನ್ಸ್‌ಮೋರ್ ಸುರಿಮಳೆ. ಅರ್ಜುನ ಸುಭದ್ರೆಯರಲ್ಲಿನ ಸಂಗೀತ ಸಂಭಾಷಣೆಯಂತೂ ಒಂದು ಪುಟ್ಟ ಸಂಗೀತ ಕಛೇರಿಯೇ ಸರಿ. ಆಗಲಂತೂ ಕಿವಿಗಡಚಿಕ್ಕುವಂತೆ ಚಪ್ಪಾಳೆ.

ಸುಭದ್ರಾ ಕಲ್ಯಾಣದ ನಾಟಕದ ಖ್ಯಾತಿ ಜನಜನಿತವಾಗಿ ಹೋಯಿತು. ಕಲಾಭಿಮಾನಿಗಳು, ಕಲಾಪೋಷಕರೂ ಆಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಗನ್ಮೋಹನ ಪ್ಯಾಲೇಸ್‌ನಲ್ಲಿ ನಾಟಕಗಳನ್ನು ಆಡಲು ಆಹ್ವಾನ ಕಳುಹಿಸಿದರು. ಆಹ್ವಾನದಿಂದ ನಾವೆಲ್ಲರೂ ಸಂತಸಗೊಂಡೆವು. ಎರಡು ನಾಟಕಗಳನ್ನು ಪ್ರದರ್ಶಿಸಲು ನಮಗೆ ತಿಳಿಸಲಾಗಿತ್ತು. ಮೊದಲ ನಾಟಕ ಸುಭದ್ರಾ, ಎರಡನೆಯದು ಕವಿರತ್ನ ಕಾಳಿದಾಸ. ಪ್ರಭುಗಳು ಪರಿವಾರದೊಡನೆ ಉನ್ನತ ಅಧಿಕಾರಿಗಳೊಂದಿಗೆ ನಾಟಕವನ್ನು ತದೇಕಚಿತ್ತರಾಗಿ ವೀಕ್ಷಿಸತೊಡಗಿದರು. ನಾಟಕದಲ್ಲಿ ಸುಭದ್ರೆ ಪೂಜೆ ಮಾಡುವ ದೃಶ್ಯ ಪ್ರಾರಂಭವಾಯಿತು. ಪಿಟೀಲು ವಾದನದಲ್ಲಿ ಏಕಮೇವಾದ್ವಿತೀಯರೆನಿಸಿಕೊಂಡಿದ್ದ ತಂದೆಯವರು ಮೈಮರೆತು ಪಿಟೀಲು ನುಡಿಸತೊಡಗಿದರು. ಪ್ರಭುಗಳು ರಂಗಮಂದಿರದ ಒಳಗೆ ನುಡಿಸುವ ಬದಲು ರಂಗಮಂದಿರದ ಮೇಲೆ ಕುಳಿತು ನುಡಿಸುವಂತೆ ಹೇಳಿಕಳುಹಿಸಿದರು. ನಾಟಕ ಮುಕ್ತಾಯವಾದ ನಂತರ ಪ್ರಭುಗಳು

ಭಕ್ಷಿಯವರ ಮುಖಾಂತರ ತಂದೆಯವರನ್ನು ಬರಮಾಡಿಕೊಂಡು ''ನಿಮ್ಮ ವಿದ್ವತ್ಪೂರ್ಣ ರಂಗಕಚೇರಿ ನಮಗೆ ಆನಂದತಂದಿತು. ಸಂಗೀತದಲ್ಲಿ ನೀವು ಸಾಧಿಸಿರುವ ಸಿದ್ಧಿ ಅಚ್ಚರಿಪಡುವಂಥದ್ದು'' ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅರಮನೆಯಲ್ಲಿ ನಡೆದ ಮೊದಲ ನಾಟಕಕ್ಕೆ ಪ್ರಭುಗಳಲ್ಲದೆ ದಕ್ಷಿಣದ ಘನ ವಿದ್ವಾಂಸರಾದ ಬಿಡಾರಂ ಕೃಷ್ಣಪ್ಪನವರು, ವೀಣೆ ಶೇಷಣ್ಣನವರು ಅಗ್ರಗಣ್ಯ ಪಿಟೀಲು ವಿದ್ವಾಂಸರಾದ ಸಂಗೀತರತ್ನ ಟಿ. ಚೌಡಯ್ಯನವರು ಆಗಮಿಸಿದ್ದರು. ಶಾಸ್ತ್ರೀಯ ಸಂಗೀತ ಪ್ರಧಾನವಾದ ಈ ನಾಟಕಗಳಲ್ಲಿ ನನ್ನ ಸುಭದ್ರೆ ಮತ್ತು ಚೂಡಾಮಣಿಯ ಪಾತ್ರ ನಿರ್ವಹಣೆಯು ಪ್ರಭುಗಳ ಮೆಚ್ಚುಗೆಗೆ ಪಾತ್ರವಾಯಿತು.

ಜಗನ್ಮೋಹನ ಅರಮನೆಯಲ್ಲಿ ಜರುಗಿದ ನಮ್ಮ ನಾಟಕಕ್ಕೆ ಗಾಯಕರು, ಗಮಕಿಗಳು, ವಿದೂಷಿಯರು ಆಗಮಿಸಿದ್ದ ಪರಿಣಾಮವಾಗಿ ಪ್ರಭುಗಳ ಸಮ್ಮುಖದಲ್ಲಿ ನಾನು ಸಂಗೀತ ಕಛೇರಿ ಮಾಡುವ ಅವಕಾಶವೂ ಲಭ್ಯವಾಗಿ ಸಮ್ಮರ್ ಪ್ಯಾಲೇಸ್‌ನಲ್ಲಿ ಕಚೇರಿ ಏರ್ಪಾಡಾಯಿತು,. ತಂದೆಯವರದೇ ಪಿಟೀಲು, ತಬಲ ವಿದ್ವಾನ್ ಸುಬ್ಬಯ್ಯ ಅವರದು. ಆಗ ನನ್ನ ವಯಸ್ಸು 18. ಪ್ರಭುಗಳ ಸಮ್ಮುಖದಲ್ಲಿ ಸಂಗೀತ ಕಚೇರಿ ಮಾಡುವುದೆಂದರೆ ಸಾಮಾನ್ಯ ಮಾತಾಗಿರಲಿಲ್ಲ. ರಸಿಕರೂ, ಸಂಗೀತಪ್ರಿಯರೂ ಆಗಿದ್ದ ಪ್ರಭುಗಳು ರಾಗಸಂಚಾರದ ಸೂಕ್ಷ್ಮಾಂಶಗಳನ್ನು ಗ್ರಹಿಸತಕ್ಕವರಾಗಿದ್ದರು. ರಸಭಿಜ್ಞರಾದ ವಿಮರ್ಶಕರಾಗಿದ್ದರು. **''ಧೈರ್ಯಂ ಸರ್ವತ್ರ ಸಾಧನಂ''** ನಾಣ್ಣುಡಿಗೆ ಮೊರೆಹೊಕ್ಕೆ. ನಮ್ಮ ಮನೆತನದ ದೇವತೆ ತಾಯಿ ಚಾಮುಂಡೇಶ್ವರಿಯನ್ನು ಭಕ್ತಿಯಿಂದ ಸ್ಮರಿಸಿದೆ. ಸಾಧನೆ ಬಲವಾಗಿದೆ. ಹೆದರಿಕೆ ಏಕೆ? ಎಂದು ಮನಸ್ಸು ಹೇಳುತ್ತಿತ್ತು. ಸಂಗೀತದ ಸರ್ವಸ್ವವನ್ನೂ ಧಾರೆಯೆರೆದ ತಂದೆಯವರ ಪಾದಗಳಿಗೆ ಎರಗಿದೆ. ''ಹೆದರಬೇಡ, ಧೈರ್ಯವಾಗಿ ಹಾಡು. ನಿನ್ನ ಶಾರೀರ ಸಂಪತ್ತಿನ ಬಗ್ಗೆ ನನಗೆ ನಂಬಿಕೆ ಇದೆ. ಪಕ್ಕವಾದ್ಯಗಳ ಜಮಾವಣೆಯು ಸೊಗಸಾಗಿದೆ ಅನುಭವಿಸಿ ಹಾಡು'' ಎಂದು ತಂದೆಯವರು ನನಗೆ ಧೈರ್ಯ ತುಂಬಿ ಆಶೀರ್ವದಿಸಿದರು.

ಪ್ರಭು ಸನ್ನಿಧಿಯಲ್ಲಿ ಸರಿಸುಮಾರು ಒಂದೂವರೆ ಗಂಟೆಗಳ ತನಕ ಹಾಡಿದೆ. ತಂದೆಯವರು ಹೇಳಿಕೊಟ್ಟಿದ್ದ ಅಪರೂಪದ ರಾಗಗಳನ್ನು ವಕ್ರಸಂಚಾರಗಳನ್ನು ಹಾಡಿದೆ. ಲಯಜ್ಞಾನ ರಾಗವಿನ್ಯಾಸ, ಕೌಶಲ, ತಾಳದ ಬಿಗಿ, ಸ್ವರಪ್ರಸ್ತಾರ ವೈಖರಿ ಪ್ರಭುಗಳಿಗೆ ಒಪ್ಪಿಗೆಯಾಯಿತು. **ಇದು ನನ್ನ ಜೀವನದ ಮೈಲುಗಲ್ಲುಗಳಲ್ಲಿ ಒಂದು.**

ಮಾರನೆಯ ದಿನ ಮಹಾಸ್ವಾಮಿಗಳು 1.500 ರೂಪಾಯಿಗಳ ಥೈಲಿಯೊಂದಿಗೆ ಪ್ರಶಂಸಾ ಪತ್ರವನ್ನು ಶಾಲು ಜೋಡಿ ಖಿಲ್ಲತ್ತುಗಳನ್ನು ಕಳುಹಿಸಿಕೊಟ್ಟರು. ◆

# ಕೈಲಾಸಂ ಓನ್ಸ್ ಮೋರ್ ಕೂಗಿದರು

ನನ್ನ ಸುಭದ್ರಾ ಪಾತ್ರ ನಾಟಕ ಶಿರೋಮಣಿ ಎ.ವಿ. ವರದಾಚಾರ್, ಉಭಯ ಕಲಾರತ್ನ ಚಿಕ್ಕರಾಮರಾಯರು, ಮೈಸೂರಿನ ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯ ( ತಾತಯ್ಯ) ಪ್ರಹಸನ ಪಿತಾಮಹ ಟಿ.ಪಿ. ಕೈಲಾಸಂ ಮೊದಲಾದವರ ಮೆಚ್ಚುಗೆಗೂ ಪಾತ್ರವಾಯಿತು. ಸುಭದ್ರೆ ಮತ್ತು ದ್ರೌಪದಿ ಪಾತ್ರಗಳನ್ನು ನೋಡಲೆಂದೇ ಕೈಲಾಸಂರವರು ಒಂದಲ್ಲ, ಎರಡಲ್ಲ, ನಾಲ್ಕಾರು ಬಾರಿ ನಾಟಕಕ್ಕೆ ಆಗಮಿಸಿದ್ದರು. ಒಮ್ಮೆ ಅವರು ಸದ್ದುಗದ್ದಲವಿಲ್ಲದೇ, ಗ್ಯಾಲರಿಯಲ್ಲಿ ಕುಳಿತು ನಾಟಕ ವೀಕ್ಷಿಸುತ್ತಿದ್ದರು. ಆ ದಿನದ ನಾಟಕ ವಿರಾಟಪರ್ವ. ಟೌನ್‌ಹಾಲ್ ಪ್ರೇಕ್ಷಕರಿಂದ ಕಿಕ್ಕಿರಿದು ಹೋಗಿತ್ತು. ಕನ್ನಡ ರಂಗಭೂಮಿಯ ಹೆಸರಾಂತ ಕಲಾವಿದೆ ಸಾಗರದ ಲಕ್ಷ್ಮೀಬಾಯಿಯವರು ಸುಧೇಷ್ಣೆಯ ಪಾತ್ರವನ್ನು ನಿರ್ವಹಿಸಿದರು. ನಾನು ನಾಟಕದ ಪ್ರಧಾನ ಪಾತ್ರ ದ್ರೌಪದಿಯಾಗಿದ್ದೆ. ನಮ್ಮಿರ್ವರ ಸಂಗೀತಮಯ ಸಂಭಾಷಣೆಯಲ್ಲಿ ಪ್ರೇಕ್ಷಕರು ಕೊಚ್ಚಿಹೋಗಿದ್ದರೆನ್ನಬೇಕು. ಅವರ ಕಂಠಶ್ರೀಯ ಮೋಡಿಗೊಳಗಾಗಿ ಗಾನಲೋಕದಲ್ಲಿ ವಿಹರಿಸುತ್ತಿದ್ದರು. ಕೀಚಕನ ಅಕ್ಕ ಸುಧೇಷ್ಣೆ 'ನನ್ನ ತಮ್ಮನ ಮಂದಿರಕ್ಕೆ ಹೋಗಿ ಮಧುವನ್ನು ತೆಗೆದುಕೊಂಡು ಬಾ ' ಎಂದು ಅಜ್ಞಾತವಾಸದಲ್ಲಿ ಸೈರಂಧ್ರಿಯಾಗಿದ್ದ ದ್ರೌಪದಿಗೆ ಆಜ್ಞಾಪಿಸುತ್ತಾಳೆ. ದ್ರೌಪದಿ "ಪರಮ ನೀಚನೂ, ಕಾಮಾಂಧನೂ ಆದ ನಿಮ್ಮ ಸೋದರನ ಮಂದಿರಕ್ಕೆ ಹೋಗಲಾರೆ'' ಎಂದು ಮೊದಲಿಸಿ ನುಡಿಯುತ್ತಾಳೆ. ಆಗ ಸುಧೇಷ್ಣೆ ಕೆರಳಿ, "ನಾನು ಹೇಳಿದುದಕ್ಕೆ ನೀನು ಪ್ರತಿಯಾಗಿ ಉದ್ಧಟತನ ಮಾಡುತ್ತಿರುವೆಯಾ ?'' ಎಂದು ಚೀರುತ್ತಾಳೆ. ಈ ದೃಶ್ಯದಲ್ಲಿ ನಾವಿಬ್ಬರೂ ಹಾಡಿನಲ್ಲೇ ಉತ್ತರ- ಪ್ರತ್ಯುತ್ತರವನ್ನು ಕೊಡುತ್ತೇವೆ. ಸುಮಾರು 10-15 ನಿಮಿಷಗಳ ಕಾಲದ ಈ ಹಾಡಿಗೆ ಪ್ರೇಕ್ಷಕರು ಮೆಚ್ಚುಗೆ ಸೂಚಿಸಿ ಪದೇ ಪದೇ ಕರತಾಡನ ಗೈಯುತ್ತಿದ್ದರು. ಹೃದ್ಯಶೈಲಿಯ ಲಲಿತರಾಗಕ್ಕೆ ಉತ್ತಮ ನಿದರ್ಶನವೆನಿಸಿದ ಆ ಪದ್ಯ ಇಂತಿದೆ.

ಸುಧೇಷ್ಣೆ : ಪೋಗಿ ನೀನನುಜಾತನಾಲಯಕೀಗ ತಾರೆಲೆ ಮಧುವನು

ದ್ರೌಪದಿ : ಪೋಗೆನಲ್ಲಿಗೆ, ಮನ್ನಿಪುದು, ತಲೆಬಾಗಿ ಬೇಡುವೆ ನಿಮ್ಮನು.

ಸುಧೇಷ್ಣೆ : ಸಾಕಿದುದಕೆ ಎದುರಾಡುವೆಯ, ಫಡ ಜೋಕೆ ನಿಲ್ಲಿಸು ಬಾಯನು.

ದ್ರೌಪದಿ : ಏನ ಪೇಳಲಿ ನಿನ್ನ ತಮ್ಮನು ಲೋಕದೊಳು ಬಲುದುರುಳನು.

ನನ್ನ ಮತ್ತು ಲಕ್ಷ್ಮಿಬಾಯಿ ಅವರ ಸುಮಧುರ ಕಂಠದಿಂದ ಹೊರಬಂದ ಸಂಗೀತ ಸಂಭಾಷಣೆಯನ್ನು ಕೇಳಿದ ತ್ಯಾಗರಾಜ ಪರಮಶಿವ ಕೈಲಾಸಂ ಅವರು ಗಟ್ಟಿಯಾಗಿ 'ಒನ್ಸ್ ಮೋರ್' ಎಂದು ಕೂಗಿದರು. ಕೈಲಾಸಂ ಕೂಗಿದ ಒನ್ಸ್ ಮೋರ್‌ಗೆ ಬೆಚ್ಚಿಬಿದ್ದ ಸುತ್ತಮುತ್ತಲಿನವರು 'ಸುಮ್ಮನಿರಯ್ಯಾ, ಏಕೆ ಹಾಗೆ ಅರಚಿಕೊಳ್ಳುತ್ತೀಯಾ ಸುಮ್ಮನೆ ನಾಟಕ ನೋಡೋದಕ್ಕೆ ಆಗೊಲ್ವೇನಯ್ಯಾ' ಎಂದು ಗದರಿಸಿದರು.

ನಾಟಕದ ಮತ್ತೊಂದು ಸ್ವಾರಸ್ಯ ಸನ್ನಿವೇಶದಲ್ಲೂ ಕೈಲಾಸಂ ಅವರು ಮತ್ತೊಮ್ಮೆ ಒನ್ಸ್ ಮೋರ್ ಎಂದು ರಂಗಮಂದಿರದಲ್ಲಿ ಮೊಳಗುವಂತೆ ಉಗ್ಗಡಿಸಿದರು. ಈ ಬಾರಿ ಪ್ರೇಕ್ಷಕರು ರೊಚ್ಚಿಗೆದ್ದು "ಕತ್ತುಹಿಡಿದು ಆಚೆಗೆ ನೂಕಬೇಕೊ, ಸುಮ್ಮನೆ ಕುಳಿತುಕೊಂಡು ನಾಟಕ ನೋಡುತ್ತಿಯೋ" ಎಂದು ಆಕ್ರೋಶದಿಂದ ಕೈಲಾಸಂ ಅವರ ಮೇಲೆ ಕೈಮಾಡಲು ಸಜ್ಜುಗೊಂಡರು. ಆಗ ರಂಗಮಂದಿರದ ಸುಪರ್ದಿನಲ್ಲಿದ್ದ ಕಂಪನಿಯ ಮುಖ್ಯಸ್ಥರಲ್ಲೊಬ್ಬರಾದ ಚಿಕ್ಕ ಬಸವರಾಜುರವರು ಗದ್ದಲ ಕೇಳಿ ಒಳಗೆ ಹೋಗಿ ನೋಡಿದಾಗ ಕೈಲಾಸಂರವರನ್ನು ಕಂಡು ದಿಗ್ಭ್ರಾಂತರಾಗಿ ಅವರ ಮನವೊಲಿಸಿ ರಂಗಭೂಮಿಯ ಮೇಲೆ ಕರೆತಂದು ಕನ್ನಡ ನಾಟಕ ಪ್ರಪಂಚದಲ್ಲಿ ಕೈಲಾಸಂರವರ ವಿಶಿಷ್ಟ ಸ್ಥಾನವನ್ನು ಕುರಿತು ರಸಿಕರಿಗೆ ಮನದಟ್ಟಾಗುವಂತೆ ಹೇಳಿ ಆ ದಿನದ ನಾಟಕಕ್ಕೆ ಅಜ್ಞಾತರಾಗಿ ಬಂದು ನಮ್ಮನ್ನು ಹೃತ್ಪೂರ್ವಕವಾಗಿ ಪ್ರೋತ್ಸಾಹಿಸಿದ 'ಕೈ' ರವರಿಗೆ ಕೃತಜ್ಞತೆಯನ್ನು ಸಲ್ಲಿಸಿ ರಂಗಮಂಟಪದಲ್ಲಿದ್ದ ನಟನಟಿಯರ ಪರಿಚಯವನ್ನು ಮಾಡಿಸಿದರು.

ನನ್ನ ಸುಭದ್ರಾ, ದ್ರೌಪದಿ, ತಿಲೋತ್ತಮೆ, ಅಂಬೆ, ಮೊದಲಾದ ಪಾತ್ರಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದವರಲ್ಲಿ ಮಹಾವಿದೂಷಿ ವಿದ್ಯಾಸುಂದರಿ ಗಾನಕಲಾವಿಶಾರದೆ ಬಿರುದಾಂಕಿತರಾದ ಬೆಂಗಳೂರಿನ ನಾಗರತ್ನಮ್ಮನವರು ಓರ್ವರು. ಸಂಗೀತ ಸಾಮ್ರಾಜ್ಯದಲ್ಲಿ ನಾಗರತ್ನಮ್ಮನವರದು ದೊಡ್ಡ ಹೆಸರು. ತಾನು ಸಂಪಾದಿಸಿದ್ದ ಹಣ, ಕೀರ್ತಿ, ತ್ಯಾಗರಾಜರ ಮಹಿಮೆಯಿಂದ ಬಂದವು, ಈ ಹಣ ನನ್ನ ಗುರುಸ್ವಾಮಿಯಾದ ತ್ಯಾಗರಾಜರಿಗೂ, ಅವರ ಇಷ್ಟದೈವ ಶ್ರೀರಾಮಚಂದ್ರನಿಗೂ ಸಮರ್ಪಿತವಾಗಬೇಕು ಎಂದು ನಿಶ್ಚಯಿಸಿ, ತಮ್ಮ ಸಮಸ್ತ ಗಳಿಕೆಯನ್ನು ತಿರುವಾಯೂರಿನ ತ್ಯಾಗರಾಜರ ಸಮಾಧಿಗೆ ಅರ್ಪಿಸಿದ ತ್ಯಾಗಶೀಲೆ. ಶಾಸ್ತ್ರೀಯ ಕರ್ನಾಟಕ ಸಂಗೀತದ ಉಚ್ಛ್ರಾಯಕ್ಕಾಗಿ ಅಹರ್ನಿಶಿ ದುಡಿದು ಅದರಲ್ಲೇ ಮಡಿದವರು. ಇವರು ಮದ್ರಾಸಿನಲ್ಲಿ ನಡೆದ ನನ್ನ ಸಂಗೀತ ಕಚೇರಿಗೆ - ನಾಟಕಕ್ಕೆ ದಯಮಾಡಿಸಿ, "ನಿನ್ನದು ಮನೋಜ್ಞ ರಾಗಾಭಿನಯ. ರಂಗಭೂಮಿಯಲ್ಲಿ ನಿನ್ನ ಕೀರ್ತಿ ಅಜರಾಮರ. ಅಸಂಖ್ಯಾತ ಪ್ರೇಕ್ಷಕ ಸಮೂಹವನ್ನು ಸಂತೋಷಪಡಿಸುತ್ತಿರುವ ನೀನೇ ಧನ್ಯಳು" ಎಂದು ತುಂಬಿ ಬಂದ ಹೃದಯದಿಂದ ನನ್ನ ರಾಗಶ್ರೀಯನ್ನು ಅಭಿನಯವನ್ನೂ ಮನಸಾರ ಪ್ರಶಂಸಿಸಿದರು. ನಾಟಕರತ್ನ ಜಿ. ಹೆಚ್. ವೀರಣ್ಣನವರು

ನನ್ನ ಪಾತ್ರವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವೀರಣ್ಣನವರು ಸ್ವತಃ ನಟರೂ, ಗುಬ್ಬಿ ಕಂಪನಿಯ ಮಾಲೀಕರು. ಒಂದು ಕಂಪನಿಯವರು ಇನ್ನೊಂದು ಕಂಪನಿಗೆ ಆಗಮಿಸಿ ನಾಟಕ ನೋಡಿ ಮೆಚ್ಚುಗೆ ವ್ಯಕ್ತ ಪಡಿಸುವುದು ಸಾಮಾನ್ಯವಾದ ಮಾತೇನಲ್ಲ. ತಮ್ಮ ಕಂಪನಿಯ ನಾಟಕಗಳನ್ನು ಬಿಟ್ಟು ನನ್ನ ಪಾತ್ರಗಳನ್ನು ವೀಕ್ಷಿಸುತ್ತಿದ್ದ ನಾಟಕರತ್ನರ ಈ ದೊಡ್ಡ ಗುಣ ನನಗೆ ಅತ್ಯಂತ ಮೆಚ್ಚುಗೆಯಾಯಿತು. ಎಷ್ಟೋಬಾರಿ ಅವರು ನನ್ನ ನಾಟಕ ನೋಡಿ ವಿರಾಮದ ವೇಳೆಯಲ್ಲಿ ಗ್ರೀನ್ ರೂಂಗೆ ಬಂದು 'ಸಂಗೀತಾಭಿನಯ ನಿನಗೆ ಎಷ್ಟು ಪಕ್ಕಾಗಿ ಒಲಿದಿದೆಯಮ್ಮ! ಸರಸ್ವತಿ ನಿನಗೆ ಪ್ರಸನ್ನಳಾಗಿದ್ದಾಳೆ , ನೀನು ಹಾಡುತ್ತಿದ್ದರೆ ಆ ಮಹಾತಾಯಿ ಸಂಗೀತ ಶಾರದೆಯೇ ಹಾಡುತ್ತಿದ್ದಾಳೇನೋ ಎಂಬ ಅನುಮಾನ ಬರುತ್ತಿದೆ ' ಎಂದೆನ್ನುತ್ತಿದ್ದರು.

ಕೀರ್ತಿದೇವತೆಯ ಕೃಪಾಕಟಾಕ್ಷಕ್ಕೆ ಪಾತ್ರವಾಗಿ ಕಂಪನಿ ದಿನೇದಿನೇ ಉತ್ತುಂಗ ಶಿಖರಕ್ಕೆ ಏರುತ್ತಿದ್ದರೂ ಕೂಡಾ ಹೆಚ್ಚು ಕಾಲ ಅದೇ ಸ್ಥಿತಿಯಲ್ಲಿರಲಾರದೆ ಕಲೆಕ್ಷನ್ ಕಡಿಮೆಯಾಗಿ ಕಂಪನಿಯನ್ನೇ ನಿಲ್ಲಿಸುವ ಸ್ಥಿತಿ ಬಂದಿತು. 800-900ರೂ ಸಂಗ್ರಹವಾಗುತ್ತಿದ್ದ ಕಡೆ 60-70 ಕಲೆಕ್ಷನ್ ಆಗತೊಡಗಿದಾಗ ಕಂಪನಿಯ ಆಡಳಿತ ಹೇಗೆ ಸಾಧ್ಯ? ಎಲ್ಲರೂ ವ್ಯಸನಾಕ್ರಾಂತರಾದೆವು. ನಷ್ಟದಲ್ಲಂತೂ ನಡೆಸುವುದು ಸಾಧ್ಯವಿರಲಿಲ್ಲ. ಕೆಲವರು ಸದ್ಯಕ್ಕೆ ನಿಲ್ಲಿಸಿಬಿಡಿ ಎಂದರು. ಮತ್ತೆ ಕೆಲವರು ವಿಖ್ಯಾತ ಕಂಪನಿಯನ್ನು ನಿಲ್ಲಿಸಬೇಡಿ, ಇಂದಲ್ಲಾ ನಾಳೆ ಪರಿಸ್ಥಿತಿ ಸರಿಹೋದೀತು ಎಂದರು. ಶ್ರೇಷ್ಠ ದರ್ಜೆಯ ನಾಟಕಗಳ ಮೂಲಕ ಕನ್ನಡ ನಾಡಿನಲ್ಲಿ ತನಗೆ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದ ಕಂಪನಿಯನ್ನು ಏಕಾಏಕಿ ನಿಲ್ಲಿಸಲು ನಮ್ಮ ತಂದೆಯವರಿಗೂ ಮನಸ್ಸು ಬರಲಿಲ್ಲ. ಹಾಗೂ ಹೀಗೂ ಎಳೆದಾಡಿ ಒಂದು ವರ್ಷ ನಡೆಸಿದರು. ಆದರೆ ಪರಿಸ್ಥಿತಿ ದಿನೇ ದಿನೇ ಹದಗೆಟ್ಟಾಗ ನಿಲ್ಲಿಸುವುದೇ ಒಳ್ಳೆಯದೆಂಬ ತೀರ್ಮಾನಕ್ಕೆ ಬರಲಾಯಿತು. ನಟನಟಿಯರಿಗೆಲ್ಲ ತಿಳಿಸಿ ಅವರ ಪ್ರಯಾಣದ ವ್ಯವಸ್ಥೆ ಮಾಡಿ ಕಂಪನಿ ಮುಚ್ಚಲಾಯಿತು.

ಕಂಪನಿ ನಿಂತ ಮೇಲೆ ಮನಸ್ಸಿಗೆ ಏನೂ ಬೇಡವಾಯಿತು. ಕೂತಲ್ಲಿ ನಿಂತಲ್ಲಿ ಕಂಪನಿಯದೇ ಚಿಂತೆ. ಭಾರವಾದ ಮನಸ್ಸಿನಿಂದ ಕೆಲವಾರು ತಿಂಗಳುಗಳನ್ನು ಕಳೆದೆ. ಒಂದು ದಿನ (1924) ಆಸ್ಥಾನವಿದ್ವಾನ್ ಹಾಗೂ ರಂಗನಟ ರಾಚಪ್ಪನವರು ನಮ್ಮ ಮನೆಗೆ ಬಂದರು. ಅವರೊಡನೆ ನಮಗೆ ಪರಿಚಯವಿಲ್ಲದ ಮತ್ತೋರ್ವರಿದ್ದರು. 'ನೋಡಿ! ನಾನು ಬಂದ ಉದ್ದೇಶವಿಷ್ಟೆ, ಮದ್ರಾಸಿನ ಹೆಸರಾಂತ ಧ್ವನಿಮುದ್ರಕ ಸಂಸ್ಥೆ ಓಡಿಯನ್ ಕಂಪನಿ ನಿಮಗೆ ಕೀರ್ತಿ ತಂದ ರಂಗಗೀತೆಗಳನ್ನು ಧ್ವನಿ ಮುದ್ರಿಸಿಕೊಳ್ಳಲು ಇಚ್ಛಿಸಿ ತನ್ನ ಪ್ರತಿನಿಧಿಯೋರ್ವರನ್ನು ಮದ್ರಾಸಿನಿಂದ ಕಳುಹಿಸಿಕೊಟ್ಟಿದೆ' ಎಂದು ಅವರ ಪರಿಚಯವನ್ನು ಮಾಡಿಕೊಟ್ಟರು. ಗರುಡನಗಿರಿ ನಾಗೇಶರಾಯರು ಸಹ ಮದ್ರಾಸಿಗೆ ಬರಲಿದ್ದಾರೆ ಎಂಬ ಸುದ್ದಿಯನ್ನು ತಿಳಿಸಿದರು. ಧ್ವನಿಮುದ್ರಿಕೆಗಾಗಿ ನಾನು ಮೊದಲು

ಒಪ್ಪಲಿಲ್ಲವಾದರೂ ನಟನಟಿಯರ ಕಲಾಸೇವೆಗೆ ಶಾಶ್ವತ ಪ್ರತಿನಿಧಿ ಧ್ವನಿಮುದ್ರಿಕೆಗಳು ಎಂಬುದನ್ನು ರಾಚಪ್ಪನವರು ಒತ್ತಿ ಹೇಳಿ ನನ್ನನ್ನು ಒಪ್ಪಿಸಿದರು. ಮಾರನೇ ದಿನ ನಾನು ನಾಗೇಶರಾಯರು ಓಡಿಯನ್ ಪ್ರತಿನಿಧಿಯೊಂದಿಗೆ ಮದ್ರಾಸಿಗೆ ಪ್ರಯಾಣ ಮಾಡಿದೆವು. 10 ದಿನಗಳಾದರೂ ನೀವು ಮದ್ರಾಸಿನಲ್ಲಿ ನಿಲ್ಲಬೇಕಾಗುತ್ತದೆಂದೂ ಪ್ರತಿನಿಧಿ ತಿಳಿಸಿ ಹೋಟೆಲ್ ಒಂದರಲ್ಲಿ ನಾಗೇಶರಾಯರಿಗೊಂದು ಕೊಠಡಿಯನ್ನು ನನಗೊಂದು ಕೊಠಡಿಯನ್ನು ಗೊತ್ತುಮಾಡಿಕೊಟ್ಟರು. ಮಾರನೆಯ ದಿನ ಧ್ವನಿಮುದ್ರಿಕೆ ಸಂಸ್ಥೆಯ ಮೇಲಾಧಿಕಾರಿಗಳು ನಮ್ಮನ್ನು ಸ್ವಾಗತಿಸಿದರು. ಹತ್ತು ದಿನಗಳಲ್ಲಿ ''ಸಖಿಯೇ ಲಾಲಿಸೀಗಲೆ'' (ಗುಲೇಬಕಾವಲಿ) ''ಮಾರನೋ ಈ ಮೋಹನಾಂಗ'' (ಕಾಳಿದಾಸ) ''ಪ್ರಾಣೇಶನೇ ಬೇಡಿಕೊಂಬೆನು ಪೋಗಬೇಡವೊ'' (ಮನ್ಮಥವಿಜಯ) ''ತಾಪವನಾಂತು'' (ಸುಭಧ್ರಾ) ''ಚಿತ್ತೇವಸಶ್ರೀ'' (ಸುಭದ್ರಾ) ''ನಡೆಯುತ್ತ್ತೋಡನೆ'' (ಶಾಕುಂತಲ) ''ಮನೋ ವಿನೋದಕ್ಕೀಗ'' (ಕಬೀರ್) ''ನಾಗವೇಣಿ ನಗರಿಗೆ ನಾಂ ಪೋಗಿ ಬರುವೆನೇ'' (ಶಾಕುಂತಲ) ''ಪ್ರಿಯ ಬಾರೋ, ಸುಂದರಾಂಗಿ ನೋಡಿದವನ'' . . . . . ಮೊದಲಾದ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡರು. ಇದೇ ಸಮಯದಲ್ಲೇ ಜಿ. ನಾಗೇಶರಾಯರು ಹಾಡಿದ ''ಭೀಷಣ ತಪೋ ಮಹಾಗ್ನಿ ವಿಶೋಷಿತ ಜಲಮಾಗೆ ಜಲಧಿ ಹಾ ಹಾ ಎಂಬೀ ಘೋಷವೆತುಂಬಿದರೆ ಯೋಗ ವಿಶೇಷದೆ ಹರನಿಹನು ಲೋಕ ಹರನೆನಿಸುತಂ'' (ಮನ್ಮಥ ವಿಜಯ) ''ಅಡಿಗಡಿ ಗಂಗುಳಿ'' ( ಶಾಕುಂತಲ) ''ಚೇತೋಜನ ಬಾಣ'' (ಕಬೀರ್) ''ಏಕೆ ಕೋಪಿಪೆ'' (ವಿರಾಟಪರ್ವ) ''ಪೋಗುವೆ ಎಲ್ಲಿಗೆ'' (ವಿರಾಟ ಪರ್ವ) ಮೊದಲಾದ ಹಾಡುಗಳನ್ನು ಧ್ವನಿಮುದ್ರಿಸಿಕೊಂಡರು. ಸ್ವಲ್ಪಕಾಲದಲ್ಲೇ ಧ್ವನಿಮುದ್ರಿಕೆಗಳನ್ನು ಕಂಪನಿಯವರು ಮಾರುಕಟ್ಟೆಗೆ ಬಿಡುಗಡೆ ಮಾಡಿದರು. ಮಾರಾಟದಲ್ಲಿ ಹೊಸ ವಿಕ್ರಮವನ್ನು ಈ ಧ್ವನಿಮುದ್ರಿಕೆಗಳು ಸ್ಥಾಪಿಸಿದುವು. ಮನೆಮನೆಗಳಲ್ಲೂ ಈ ರಿಕಾರ್ಡುಗಳ ಹಾಡುಗಳು ಪ್ರತಿಧ್ವನಿಸಿ ಅಪಾರ ಜನಪ್ರಿಯತೆಯನ್ನು ಗಳಿಸಿಕೊಟ್ಟವು. ಕಂಪನಿಯವರು ನನಗೆ 750ರೂ. ನಗದು ಹಣವನ್ನೂ, ಗ್ರಾಮಾಫೋನ್ ಒಂದನ್ನು ಬಹುಮಾನಿಸಿದರು.

ಮದರಾಸಿನಿಂದ ಮರಳಿದ ನಂತರ ಹಾಡುವುದನ್ನೇ ಮುಂದುವರಿಸಬೇಕೆಂಬ ನಿರ್ಧಾರ ಕೈಗೊಂಡೆ. ಶಾರೀರ ಕೆಡದಂತೆ ಎಚ್ಚರಿಕೆ ವಹಿಸಿದೆ. ತಂದೆಯವರು ಪ್ರಾರಂಭದಲ್ಲೇ ನನಗೆ ಆಕಾರ, ಸಾಧನೆ, ಸರಳೆ, ಜಂಟಿ ವರಸೆ, ಗೀತೆಗಳು, ಲಕ್ಷಣ ಗೀತೆಗಳು, ಕ್ಲಿಷ್ಟವಾದ ಅನೇಕ ನೂತನ ಕೀರ್ತನೆಗಳು ಆದರ ರಾಗ ಸ್ವರ ಸಂಪರ್ಕಗಳನ್ನು ಚೆನ್ನಾಗಿ ಹೇಳಿಕೊಟ್ಟು ಶಾಸ್ತ್ರೀಯ ಸಂಗೀತದಲ್ಲಿ ಭದ್ರವಾದ ಅಡಿಪಾಯ ಹಾಕಿಕೊಟ್ಟಿದ್ದರಿಂದ ಖಾಸಗಿ ಕಚೇರಿಗಳನ್ನು ಮಾಡಬಲ್ಲೆನೆಂಬ ಧೈರ್ಯವುಂಟಾಯಿತು. ◆

## ಸಂಗೀತಕ್ಕೆ ಶರಣು

ನನಗೆ ಜ್ಞಾಪಕವಿದ್ದಂತೆ 1926ರಲ್ಲಿ ಗಾಯನ ಸಮಾಜದಲ್ಲಿ ಜರುಗಿದುದೇ ನನ್ನ ಪ್ರಥಮ ಸಂಗೀತ ಕಛೇರಿ. ಮುಂದೆ ಮೈಸೂರಿನ ಬಿಡಾರಂ ಕೃಷ್ಣಪ್ಪ ಅವರ ಶ್ರೀರಾಮಮಂದಿರದಲ್ಲಿ ನಾನು ಮಾಡಿದ ಕಚೇರಿಯಂತೂ ಜೀವನಪರ್ಯಂತ ಮರೆಯುವಂತಹುದೇ ಅಲ್ಲ. ತಂದೆಯವರ ಪಿಟೀಲು. ಸುಬ್ಬಯ್ಯನವರ ತಬಲಾವಾದನ. ತ್ರಿಕಾಲದಲ್ಲಿ ವರ್ಣ ಹಾಡಿದೆ. ಸರಿ ಸುಮಾರು ಎರಡೂವರೆ ಗಂಟೆಗಳ ತನಕ ಕಚೇರಿಯಾಯಿತು. ನೆರೆದಿದ್ದ ಜನ ಕದಲದೆ ಮೈಮರೆತು ಕುಳಿತಿದ್ದರು. ಅಂದಿನ ಕಚೇರಿಗೆ ಸಂಗೀತಲೋಕದ ಘಟಾನುಘಟಿಗಳೆಲ್ಲಾ ಆಗಮಿಸಿದ್ದರು. ಪಿಟೀಲು ಚೌಡಯ್ಯನವರು ಅವರಲ್ಲೊಬ್ಬರು. ರಾಗ ಪಲ್ಲವಿಯಲ್ಲಿ ಹಾಡತೊಡಗಿದಾಗ ಚೌಡಯ್ಯನವರು ತಾಳ ಹಾಕುತ್ತಾ ಭೇಷ್ ...ಶಭಾಷ್ ಎನ್ನತೊಡಗಿದರು. ಸಭೆ ಕರತಾಡಣ ಮಾಡಿತು. ಕಛೇರಿಯ ನಂತರ ತಂದೆಯವರು ಗಾನಯೋಗಿ ವೀಣೆ ಶೇಷಣ್ಣನವರ ಮನೆಗೆ ನನ್ನನ್ನು ಕರೆದೊಯ್ದು ಅವರ ಸಮ್ಮುಖದಲ್ಲಿ ಹಾಡಿಸಿದರು. ಆ ಮಹಾ ವಿದ್ವಾಂಸರ ಮುಂದೆ ಹಾಡುವ ಯೋಗ ಲಭಿಸಿದುದಕ್ಕಾಗಿ ನನಗೆ ಅತ್ಯಾನಂದವಾಯಿತು. ಒಳ್ಳೆಯ ಮನೋಧರ್ಮದಲ್ಲಿ ಹಾಡಿದೆ. ಶೇಷಣ್ಣನವರು ಭೇಷ್, ಭೇಷ್ ಎಂದು ಹೊಗಳಿದ್ದು, ನನಗೆ ಎಲ್ಲಿಲ್ಲದ ಅಚ್ಚರಿಗೆ ಕಾರಣವಾಯಿತು. ಸಂಗೀತ ಲೋಕದ ದಿಗ್ಗಜವಾದ ಶೇಷಣ್ಣನವರು ತರುಣ ಸಂಗೀತಗಾರರಿಗೆ ಪ್ರೋತ್ಸಾಹ ಕೊಡುವುದರಲ್ಲೂ ಅಷ್ಟೇ ದೊಡ್ಡವರೆನಿಸಿತು. ಅವರ ಹಿರಿಮೆ ನನ್ನನ್ನು ಮೂಕ ವಿಸ್ಮಿತಳನ್ನಾಗಿ ಮಾಡಿತು. ಅವರ ಬಗ್ಗೆ ನನ್ನಲ್ಲಿದ್ದ ಪೂಜ್ಯ ಭಾವ ನೂರ್ಮಡಿಯಾಯಿತು.

ನನ್ನ ಸಂಗೀತದ ಖ್ಯಾತಿ ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ ತಮಿಳುನಾಡಿನಲ್ಲಿಯೂ ಹರಡಿತು. ಮದರಾಸಿನ ಸಂಗೀತ ಸಮಾಜದವರು (ಸೌಂದರ್ಯ ಮಹಲಿನಲ್ಲಿ ) ಕಚೇರಿ ಮಾಡಲು ಆಮಂತ್ರಣವಿತ್ತರು. ಮೂರು ಗಂಟೆಗಳ ಪರ್ಯಂತ ಜರುಗಿದ ಅಂದಿನ ನನ್ನ ಕಛೇರಿಗೆ ಸಂಗೀತ ಪ್ರೇಮಿಗಳು ಕಿಕ್ಕಿರಿದಿದ್ದರು. ವಿಶಾಲವಾಗಿ ನಿರ್ಮಿಸಲಾಗಿದ್ದ ವೇದಿಕೆಯ ಎದುರು ಭಾಗದಲ್ಲಿ ಹಾಕಿದ್ದ ಉನ್ನತಾಸನಗಳಲ್ಲಿ ಡಾ॥ಯು. ರಾಮರಾವ್, ದಿವಾನ್‌ಬಹದ್ದೂರ್ ಶೆಲ್ಲ ಗುರುಸ್ವಾಮಿ ಶೆಟ್ಟಿ, ಸಾಮಿ ವೆಂಕಟಾಚಲಶೆಟ್ಟಿ, ಎಸ್. ಸತ್ಯಮೂರ್ತಿ ಮುಂತಾದವರು ಮಂಡಿಸಿದ್ದರು.

ಮಾರನೆಯ ದಿನ ಮದರಾಸಿನ ಪ್ರಮುಖ ಪತ್ರಿಕೆಗಳಲ್ಲೆಲ್ಲಾ ನನ್ನ ಕಚೇರಿಯ ಸುದ್ದಿ ಪ್ರಕಟವಾಯಿತು. ಒಂದು ಪ್ರಮುಖ ದಿನಪತ್ರಿಕೆಯಂತೂ ಇಂತಹ ಸ್ತ್ರೀ ಸಂಗೀತಗಾರರನ್ನು ಪಡೆದಿರುವುದು ಬೆಂಗಳೂರಿನ ಪುಣ್ಯ ಎಂದು ಬರೆದಿತ್ತು. ಎಲ್ಲಕ್ಕೂ ಮಿಗಿಲಾಗಿ ನನ್ನ ಅಂದಿನ ಸಂಗೀತ ಕಚೇರಿಗೆ ಆಸ್ಥಾನ ವಿದ್ವಾನ್ ರಾಚಪ್ಪನವರೂ ಆಗಮಿಸಿ ಕಛೇರಿಯ ನಂತರ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದುದು ನನಗೆ ಅತೀವ ಸಂತೋಷವನ್ನುಂಟುಮಾಡಿತು. ಇಲ್ಲಿ ಇನ್ನೂ ಕೆಲವಾರು ಕಚೇರಿಗಳನ್ನು ಜರುಗಿಸಿ ತಮಿಳು ಜನತೆಯ ಆದರಾಭಿಮಾನಗಳೊಡನೆ ಬೆಂಗಳೂರಿಗೆ ಹಿಂತಿರುಗಿದೆ.

ಬೆಂಗಳೂರಿಗೆ ಹಿಂತಿರುಗಿದ ನಂತರ ನನಗೆ ಪಿಟೀಲು ವಾದನದಲ್ಲಿ ಖ್ಯಾತನಾಮರಾಗಿದ್ದ ಪಿಟೀಲು ತಾಯಪ್ಪನವರು ಹೇಳಿ ಕಳುಹಿಸಿದರು. ( ಇವರು ಹಾಡುಗಾರಿಕೆಯಲ್ಲೂ ಹೆಸರಾಗಿದ್ದರು) ಗುಡುಮಯ್ಯನಪೇಟೆಯಲ್ಲಿದ್ದ ಅವರ ಮನೆಗೆ ಹೋದೆ. ತಾಯಪ್ಪನವರು ಕೊಡುಗೈದೊರೆಗಳು ಮಾತ್ರವಾಗಿರದೆ ನಿಷ್ಕಪಟಿಗಳೂ, ವಿನಯಶೀಲರೂ ಆಗಿದ್ದರು. ದೈವಭಕ್ತರಾಗಿದ್ದ ಅವರು ಪ್ರತಿ ಶುಕ್ರವಾರವೂ ನಡೆಸುತ್ತಿದ್ದ ಭಜನೆಯ ಕಾರ್ಯಕ್ರಮಕ್ಕೆ ಜನ ಮುಕುರುತ್ತಿದ್ದರು. ನನ್ನನ್ನು ಕಂಡ ಕೂಡಲೇ ತಾಯಪ್ಪನವರು ಆತ್ಮೀಯವಾಗಿ ಬರಮಾಡಿಕೊಂಡು ''ನಾನು ಕಲಿತಿರುವ ಕೆಲವು ಅಪೂರ್ವ ಕೀರ್ತನೆಗಳನ್ನು ಹೇಳಿಕೊಡುವ ಉದ್ದೇಶದಿಂದ ಹೇಳಿಕಳಿಸಿದೆ'' ಎಂದರು. ಸಂಗೀತದಲ್ಲಿ ಸಿದ್ಧಿಯನ್ನು ಸಾಧಿಸಿದ್ದ ತಾಯಪ್ಪನವರ ಪಾದತಲದಲ್ಲಿ ಒಂದೆರಡು ವರ್ಷಗಳ ತನಕ ಶಿಕ್ಷಣ ಪಡೆದೆ. ನಂತರ ವಾಗ್ಗೇಯಕಾರ, ಸಂಗೀತಶಾಸ್ತ್ರ ವಿಶಾರದ ಮೈಸೂರು ವಾಸುದೇವಾಚಾರ್ಯ ಅವರ ಬಳಿ ಅಪರೂಪದ ಕೀರ್ತನೆಗಳನ್ನು ಹೇಳಿಸಿಕೊಂಡೆ. ಆಗ ವಾಸುದೇವಾಚಾರ್ಯರು ಬೆಂಗಳೂರಿನಲ್ಲಿಯೇ ನೆಲೆಸಿದ್ದರು. ಅವರ ಹಾಗೆ 'ಕಲ್ಯಾಣಿ'ಯನ್ನು ಹಾಡಿದವರನ್ನು ನಾನು ನೋಡಲಿಲ್ಲ. ನನಗೆ ಕೀರ್ತನೆಗಳನ್ನು ಹೇಳಿಕೊಡುತ್ತಿದ್ದ ಕಾಲದಲ್ಲೇ ಅವರು ತಂದೆಯವರಿಂದ ಶಬ್ದ ಪ್ರಕರಣಗಳನ್ನು ಹೇಳಿಸಿಕೊಂಡರು. ತಂದೆಯವರೂ, ಅವರೂ ಎಷ್ಟೋ ಬಾರಿ ಗಂಟೆಗಟ್ಟಲೆ ಸಂಗೀತಕ್ಕೆ ಸಂಬಂಧಿಸಿದಂತೆ ವಿಚಾರ ವಿನಿಮಯವನ್ನು ನಡೆಸುತ್ತಿದ್ದರು. ಆಚಾರ್ಯರ ಬಳಿ ಕೀರ್ತನೆಗಳನ್ನು ಕಲಿತನಂತರ ಪ್ರಖ್ಯಾತರಾಗಿದ್ದ ಸೇಲಂ ದೊರೆಸ್ವಾಮಿ ಅಯ್ಯಂಗಾರರ ಬಳಿ, ಆನಂತರ ಪುಟ್ಟಸ್ವಾಮಯ್ಯನವರಲ್ಲಿ ಸಂಗೀತಾಭ್ಯಾಸ ಮಾಡಿದೆ. ನನ್ನ ಶಾರೀರ ಸಂಪತ್ತನ್ನು ಮೆಚ್ಚಿಕೊಂಡ ಅಖಿಲ ಭಾರತ ಖ್ಯಾತಿಯ ಕೊಳಲು ವಾದನ ಪಟು ಶ್ರೀ ಪಲ್ಲಡಂ ಸಂಜೀವರಾವ್ ಅವರು ''ನಮ್ಮ ಊರಿಗೆ ಬರುವುದಾದರೆ ನನಗೆ ಗೊತ್ತಿರುವ ಸಂಗೀತವನ್ನೆಲ್ಲಾ ನಿಮಗೆ ಧಾರೆ ಎರೆಯುತ್ತಾನೆ'' ಎಂದರು. ಆದರೆ ಆ ವೇಳೆಗೆ ನನ್ನ ಆರೋಗ್ಯ ಹದಗೆಟ್ಟಿದ ಕಾರಣ ತಂದೆಯವರು ಒಪ್ಪಲಿಲ್ಲ. ವೈದ್ಯರ ಸಲಹೆಯಂತೆ ಮದರಾಸಿಗೆ ಹೋಗಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿತ್ತು. ಜೊತೆಗೆ ಏಳೆಂಟು ತಿಂಗಳ ಪರ್ಯಂತ ಸಮುದ್ರದ ಹವೆಯನ್ನು ಸೇವಿಸಬೇಕಿತ್ತು. ಇವೆಲ್ಲಾ

ಆದನಂತರ ತಂದೆಯವರೊಂದಿಗೆ ಬೆಂಗಳೂರಿಗೆ ಮರಳಿದೆ. ಮತ್ತೆ ಸ್ವಲ್ಪಕಾಲ ಸಂಗೀತ ಪಾಠ ಹೇಳಿಸಿಕೊಂಡು ಖಾಸಗಿಯಾಗಿ ಸಂಗೀತ ಕಛೇರಿ ಮಾಡತೊಡಗಿದೆ. ಜನಮನ್ನಣೆ ಬಹುಬೇಗ ಲಭ್ಯವಾಯಿತು. "ನಿಮ್ಮ ಅಸಾಧಾರಣ ಲಯ, ಜ್ಞಾನ, ರಾಗ, ವಿನ್ಯಾಸ,. ವೈಖರಿ, ತಾಳದ ಬಿಗಿ, ಸ್ವರಪ್ರಸ್ತಾರದ ರೀತಿ, ಗಮಕ ಧೋರಣೆ ನಿಜಕ್ಕೂ ಪ್ರಚಂಡವಾದವು" ಎಂದು ಅನೇಕ ವಿದ್ವಾಂಸರು ಹಾಡಿ ಹೊಗಳಿದರು.

ಕನ್ನಡ ನಾಡಿನ ಮಹಾನ್ ಸಾಹಿತಿಗಳಾದ ಡಿ.ವಿ.ಜಿ. ಅವರ ಸಮ್ಮುಖದಲ್ಲಿ ಹಾಡಿ ಮೆಚ್ಚಿಗೆ ಪಡೆದ ಭಾಗ್ಯವೂ ನನ್ನದಾಗಿದೆ. ಸುಮಾರು 30-40 ವರ್ಷಗಳ ಹಿಂದಿನ ಮಾತು ಅದು. ಗಣ್ಯ ನ್ಯಾಯವಾದಿಗಳೂ, ಶ್ರೀಮಂತರೂ ಆಗಿದ್ದ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಅವರ ಮಗಳ ಲಗ್ನದಲ್ಲಿ ಹಾಡಲು ಒಪ್ಪಿಕೊಂಡಿದ್ದೆ. ಸಂಗೀತಾಭಿಮಾನಿಗಳು ಕಿಕ್ಕಿರಿದು ನೆರೆದಿದ್ದರು. ಶ್ರೀನಿವಾಸ ಅಯ್ಯಂಗಾರರ ಪರಮ ಮಿತ್ರರಾದ ಡಿ.ವಿ.ಜಿ. ಅವರಲ್ಲೊಬ್ಬರು. ಹರಿಕಾಂಭೋಧಿ ರಾಗದ 'ದಿನಮಣಿ ವಂಶ' ಹಾಡತೊಡಗಿದಾಗ ಕಿಕ್ಕಿರಿದಿದ್ದ ಜನಸ್ತೋಮ ಸೂಜಿ ಬಿದ್ದರೂ ಕೇಳಿಸುವಂತೆ ಕುಳಿತು ಮೆಚ್ಚಿತು. ಈ ಹಾಡನ್ನು ಹಾಡಿದ ಅರ್ಧಗಂಟೆಯ ನಂತರ ಡಿ.ವಿ.ಜಿ. ಅವರ ಕಿವಿಯಲ್ಲಿ ಅವರ ಸ್ನೇಹಿತರು ಏನೋ ಹೇಳಿಹೋದರು. ಡಿ.ವಿ.ಜಿ. ಮತ್ತೆ 'ದಿನಮಣಿ ವಂಶ ಹಾಡಿ' ಎಂದರು. ಹಾಡಿದೆ. ಜನ ಪ್ರಚಂಡ ಕರತಾಡನಗೈದರು. ಇದಾದ ಮುಕ್ಕಾಲು ಗಂಟೆಯ ನಂತರ ಡಿ.ವಿ.ಜಿ. ಅವರ ಮತ್ತೊಬ್ಬರ್ವ ಸ್ನೇಹಿತರು 'ಇನ್ನೊಮ್ಮೆ ದಿನಮಣಿ ವಂಶ ಹಾಡಿಸಿ' ಎಂದು ಬಿನ್ನವಿಸಿಕೊಂಡರು. ಡಿ.ವಿ.ಜಿ. ಅವರು ಮತ್ತೆ ನನಗೆ 'ದಿನಮಣಿ ವಂಶ ಹಾಡಿ' ಎಂದರು. 'ಈಗಾಗಲೇ ಎರಡು ಬಾರಿ ಆಯಿತಲ್ಲ' ಎಂದೆ. 'ಕೇಳುವವರಿಗೆ ಬೇಸರವಿಲ್ಲದಿದ್ದರೆ ಹಾಡುವವರಿಗೆ ಏಕೆ ಬೇಸರವಾಗಬೇಕು?' ಎಂದರು. ನಾನು ನಸುನಕ್ಕು ಅದನ್ನೇ ಮೂರನೆಯ ಬಾರಿಗೆ ಹಾಡಿದೆ. ಹಿಂದೆ ಮದುವೆ ಮನೆ ಕಛೇರಿಗಳಲ್ಲಿ ದಿನಮಣಿವಂಶ ಹಾಡದಿದ್ದರೆ ಕಛೇರಿಯೇ ಕಳೆಗಟ್ಟುತ್ತಿರಲಿಲ್ಲ. ಆದರೆ ಈಚೀಚೆಗೆ ಅದು ಕೇಳಿ ಬರುತ್ತಲೇ ಇಲ್ಲ. ಹಾಗೆಯೇ ಅಂದು ಅತ್ಯಂತ ಜನಪ್ರಿಯವಾಗಿದ್ದ 'ಶಿವದೀಕ್ಷಾಪರು' ಎಂಬ ಕುರಂಜಿ ರಾಗದ ಪದ ಇಂದು ನಾಮಾವಶೇಷವಾಗಿದೆ. ◆

# ಕನ್ನಡರಂಗ ಕೈ ತಟ್ಟಿ ಕರೆಯಿತು

ಶಾಸ್ತ್ರೀಯ ಸಂಗೀತದ ಪ್ರಪಂಚದಲ್ಲಿ ಹೆಸರುಗೊಂಡು ಭವಿಷ್ಯ ನಿಶ್ಚಿತವಾಗಿದ್ದರೂ, ರಂಗಭೂಮಿಯ ಗೀಳು ಬೆಳೆದು ಕೈತಟ್ಟಿ ಕರೆಯಿತು. ಆ ಹೊತ್ತಿಗೆ ಸರಿಯಾಗಿ ಆಸ್ಥಾನ ವಿದ್ವಾನ್ ರಾಚೋಟಪ್ಪ, ಅಶ್ವತ್ಥಮ್ಮ, ಎಂ.ವಿ. ಸುಬ್ಬಯ್ಯನಾಯ್ಡು ಮೊದಲಾಗಿ ಅನೇಕ ಹೆಸರಾಂತ ನಟ-ನಟಿಯರಿದ್ದ ತ್ರಿಯಂಭಕ ಶಾಸ್ತ್ರಿಗಳವರ ಗುರಿಕಾರ ಕಂಪನಿಯ ಆಹ್ವಾನವೂ ಬಂದಿತು. ಇದು 1927. ಆಗ ಶಾಸ್ತ್ರಿಗಳ ಕಂಪನಿ ಬೆಂಗಳೂರಿನ ಕಲಾಸಿಪಾಳ್ಯದ ಥಿಯೇಟರಿನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದಿತು. ವಿರಾಟಪರ್ವ, ಗುಲೇಬಕಾವಲಿ, ಮನ್ಮಥ ವಿಜಯ ಕಂಪನಿಯ ಹೆಸರಾಂತ ನಾಟಕಗಳು. ಅಶ್ವತ್ಥಮ್ಮ ಅವರ 'ಹಾ ಪ್ರಿಯಾ ಪ್ರಶಾಂತ ಹೃದಯಾ, ಹಾನಿ ಪೊಂದಿದೆಯಾ' ಹಾಡು ಕಂಪನಿಯ ಗಲ್ಲಾ ಪೆಟ್ಟಿಗೆಯನ್ನು ತುಂಬಲು ವಿಶೇಷ ಆಕರ್ಷಣೆಯೆನಿಸಿತು. ನಾನು ಈ ಕಂಪನಿಯಲ್ಲಿ ಪಾರ್ವತಿ, ರತಿ, ದ್ರೌಪದಿ (ವಿರಾಟಪರ್ವ) ಮೊದಲಾದ ಪಾತ್ರಗಳನ್ನು ಐದಾರು ತಿಂಗಳ ಕಾಲ ವಹಿಸಿದೆ. ರಾಚೋಟಪ್ಪನವರು ಕೀಚಕನ ಪಾತ್ರವನ್ನೂ, ದಿವಂಗತ ಎಂ.ವಿ. ಸುಬ್ಬಯ್ಯನಾಯ್ಡು ಅವರು ಸುಧೇಷ್ಣೆಯ ಪಾತ್ರವನ್ನು ವಹಿಸುತ್ತಿದ್ದರು.

ಒಮ್ಮೆ ವಿರಾಟಪರ್ವಕ್ಕಾಗಿ ಎಂ.ವಿ. ಸುಬ್ಬಯ್ಯನಾಯ್ಡು ಅವರು ಸುಧೇಷ್ಣೆಯ ಪಾತ್ರಕ್ಕಾಗಿ ಸೀರೆಯುಟ್ಟು ನನ್ನ ಕಡೆ ತಿರುಗಿ 'ನಾನು ಈಗ ಹೇಗಿದ್ದೇನೆ ಸುಂದರಮ್ಮನವರೇ ?' ಎಂದು ಕೇಳಿದರು. ಗ್ರೀನ್‌ರೂಮ್‌ನಲ್ಲಿ ಎಲ್ಲರೂ ತಮ್ಮ ಪಾತ್ರದ ವೇಷ ವರ್ಣಿಕೆಯಲ್ಲಿ ತಲ್ಲೀನರಾಗಿದ್ದರು. 'ಮೈಸೂರಿನಲ್ಲಿ ವೀಳೆಯದೆಲೆ ಮಾರು ಆ ಭಾರಿ ಪಾರವ್ವ ಯಾಕೆ ನಿಮ್ಮ ಮುಂದೆ ' ಎಂದೆ ನಾನು. ನಂತರ ನಾನೇ ನಾಯ್ಡು ಅವರಿಗೆ ಬಹು ಬೆಲೆ ಬಾಳುವ ಸೀರೆಯನ್ನು ಸೊಗಸಾಗಿ ಉಡಿಸಿದೆ.

ಮುಂದೊಮ್ಮೆ ನಾಯ್ಡು ಅವರು ಬೆಂಗಳೂರಿನಲ್ಲಿ ತಮ್ಮ ಕಂಪನಿಯ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾಗ ನನಗೆ ಅವರ ಸಮ್ಮುಖದಲ್ಲಾದ ಸನ್ಮಾನದ ಸಂದರ್ಭದಲ್ಲಿ ಕಿಕ್ಕಿರಿದಿದ್ದ ಕಲಾಭಿಮಾನಿಗಳ ಎದುರಿನಲ್ಲಿ ನನಗೆ ಸೀರೆ ಉಡಿಸಿದವರೇ ಇವರು ಎಂದು ಬಹು ಸ್ವಾರಸ್ಯವಾಗಿ ಮೇಲಿನ ಪ್ರಸಂಗವನ್ನು ವರ್ಣಿಸಿದರು. ಇಂದು ನಾಯ್ಡು ಅವರು ನಮ್ಮ ಮಧ್ಯೆ ಇಲ್ಲ ; ಆದರೆ ಅವರು ರಂಗಭೂಮಿಯ ಮೇಲೆ ಭಕ್ತ ಅಂಬರೀಷನಾಗಿ ತೋರುತ್ತಿದ್ದ ಅಭಿನಯ ಪರಿಣತಿ, ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಗುರಿಕಾರ್ ಕಂಪನಿಯಲ್ಲಿ ನಾನು ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ 5 - 6 ತಿಂಗಳವರೆಗೆ ಕಲಾಸೇವೆಗೈದು ಹಲವಾರು ಕಾರಣಗಳಿಂದ ಕಂಪನಿಯಿಂದ ಹೊರಬಂದೆ. ಈ ವೇಳೆಗೆ ಬಣ್ಣದ ಬದುಕು ನನಗೆ ಬೇಸರ ತಂದಿತು. ಶರಣು ಹೊಡೆಯಲು ಮನಸ್ಸು ಹಾತೊರೆಯುತ್ತಿತ್ತು. ಆದರೆ ಬಣ್ಣದ ಬದುಕಿನಲ್ಲೇ ನಾನು ಇನ್ನೂ ತೇಲಿ-ಮುಳುಗಬೇಕೆಂಬುದು ವಿಧಿಯ ಸಂಕಲ್ಪವಾಗಿರುವಾಗ ನನ್ನ ಇಚ್ಛೆಯ ಪೂರೈಕೆ ಸಾಧ್ಯವೇ ?

ಕನ್ನಡದ ರಂಗಕಲೆಯನ್ನು ಬೆಳೆಸಿ ಪೋಷಿಸಿದ ನಾಟ್ಯಕಲಾ ಚತುರ ಎ.ವಿ. ವರದಾಚಾರ್ಯರು ವೈಕುಂಠವಾಸಿಗಳಾಗಿ ಕೆಲವೇ ವರ್ಷಗಳು ಸಂದಿದ್ದುವು. ತಮ್ಮ ಧೀರ, ಗಂಭೀರ, ಶೃಂಗಾರ ಮತ್ತು ರೌದ್ರ ಪಾತ್ರಗಳ ಅಭಿನಯದಿಂದ ಕನ್ನಡ ನಾಡಿನಲ್ಲೇ ಅಲ್ಲದೆ ತಮಿಳುನಾಡಿನಲ್ಲಿಯೂ ಜಯಭೇರಿ ಬಾರಿಸಿ ಕನ್ನಡ ನಾಟಕ ಕಲೆಯ ಕೀರ್ತಿಯನ್ನು ಹೆಚ್ಚಿಸಿದ ಈ ಧೀಮಂತರ ಭವ್ಯ ಸ್ಮಾರಕ ಮಂದಿರದ ನಿರ್ಮಾಣದ ಯೋಜನೆಯನ್ನು ತಲೆಯಲ್ಲಿ ತುಂಬಿಕೊಂಡು ಕಾರ್ಯರೂಪಕ್ಕೆ ತರಲು ಟೊಂಕಕಟ್ಟಿ ನಿಂತ ಅಭಿಮಾನಿಗಳಲ್ಲಿ ವಿದ್ಯಾ ಇಲಾಖೆಯಲ್ಲಿ ಉನ್ನತ ಅಧಿಕಾರಿಣಿಯಾಗಿದ್ದ ಶ್ರೀಮತಿ ಕನಕಲಕ್ಷ್ಮಮ್ಮನವರು ಪ್ರಮುಖರು. ಒಂದು ದಿನ ನಮ್ಮ ಮನೆಗೆ ಬಂದ ಅವರು, ಸ್ಮಾರಕ ಮಂದಿರ ವಿಚಾರವನ್ನು ವಿವರಿಸಿದರಲ್ಲದೆ ಈ ಸ್ಥಿತಿಯಲ್ಲಿ ನನ್ನ ಸಹಕಾರ ಕೋರಿದರು. ಈ ವೇಳೆಗಾಗಲೇ ಬಣ್ಣದ ಬದುಕಿನಲ್ಲಿ ನನ್ನ ಉತ್ಸಾಹ ಮೊದಲಿನಂತಿರಲಿಲ್ಲ. ಈ ಸಂಗತಿಯನ್ನು ಶ್ರೀಮತಿಯವರಿಗೆ ವಿವರಿಸಿದೆ. ಆಗ ಅವರು ಆಚಾರ್ಯರ ಕೀರ್ತಿಯ ಸ್ಮಾರಕ ರಂಗಮಂದಿರ ನಿರ್ಮಾಣಕ್ಕಾಗಿ ಆಚಾರ್ಯರ ಶಿಷ್ಯರೂ ಚಲನಚಿತ್ರ ನಿರ್ಮಾಪಕ - ನಿರ್ದೇಶಕರೂ ಆದ ಶ್ರೀ ನಾಗೇಂದ್ರರಾಯರು, ಅಭಿನಯ ವಿಶಾರದ ಜಿ. ನಾಗೇಶರಾಯರು, ಎಂ.ಜಿ. ಮರಿರಾಯರು, ಗಾನಕಲಾನಿಧಿ ಬಿ. ಎಸ್. ರಾಜಯ್ಯಂಗಾರರು, ಹರಿರಾಯರು, ಎಂ.ವಿ. ಶಿಂಗ ಅಯ್ಯಂಗಾರರು, ಸಿ. ಬಸವರಾಜಪ್ಪನವರು, ಕೃಷ್ಣಸ್ವಾಮಿ ಅಯ್ಯಂಗಾರರು, ವಿ.ಕೆ. ರಂಗನಾಥಶರ್ಮರು, ಗಂಗಾಧರರಾಯರು, ಲಕ್ಷ್ಮಣರಾಯರು, ಇನ್ನೂ ಕೆಲವು ಮಂದಿ ಕಲಾವಿದರು, ಕಲಾವಿದೆಯರು ಸಹಕರಿಸಲು ಮುಂದೆ ಬಂದಿದ್ದಾರೆ. ನಾಡಿನ ಪ್ರಮುಖ ಕೇಂದ್ರಗಳಲ್ಲೆಲ್ಲಾ ನಾಟಕಗಳನ್ನು ಪ್ರದರ್ಶಿಸಿ ನಾಟಕ ಕಲಾಶಾಲೆಯ ನಿರ್ಮಾಣಕ್ಕಾಗಿ ಹಣ ಸಂಗ್ರಹಿಸಲು ಮುಂದೆ ಬಂದಿದ್ದಾರೆ. ನಾಡಿನ ಪ್ರಸಿದ್ಧ ಅಭಿನೇತ್ರಿಯರೂ, ಗಾಯಕಿಯರೂ ಆದ ನೀವೇ ಸಂಘದ ನಾಟಕಗಳಲ್ಲೆಲ್ಲಾ ಪ್ರಮುಖ ಸ್ತ್ರೀ ಪಾತ್ರಗಳನ್ನು ನಿರ್ವಹಿಸಬೇಕೆಂದು ತೀರ್ಮಾನಿಸಿದ್ದೇವೆ. ನೀವು ಮತ್ತೆ ಉತ್ಸಾಹಿತರಾಗಿ ಬಣ್ಣದ ಬದುಕಿಗೆ ಪ್ರವೇಶಿಸಲೇಬೇಕು ಎಂದರು. ತಮ್ಮ ಅಸದೃಶ್ಯ ಕಲಾ ಪ್ರೌಢಿಮೆಯಿಂದ ಕನ್ನಡ ಕುಲಕೋಟಿಯ ಹೆಮ್ಮೆಯ ನಟರಾಗಿದ್ದ ಈ ಮಹಾನುಭಾವರ ಸ್ಮಾರಕ ಮಂದಿರಕ್ಕೆ ನನ್ನದೂ ಕಿಂಚಿತ್ ಕಾಣಿಕೆ ಸಲ್ಲಬೇಕೆಂಬ

ಭಗವಂತನ ಇಚ್ಛೆಯಾಗಿರುವಾಗ ಬಣ್ಣದ ಬದುಕಿಗೆ ಕೊನೇ ನಮಸ್ಕಾರ ಹೊಡೆಯಲು ನಾನಾರು? ತೀರ್ಮಾನಕ್ಕೆ ತಿಲಾಂಜಲಿಯಿತ್ತು ನನ್ನ ಒಪ್ಪಿಗೆಯನ್ನು ಕನಕಲಕ್ಷ್ಮಮ್ಮ ನವರಿಗೆ ತಿಳಿಸಿದಾಗ ಆಕೆಯ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು.

ಸಂಗೀತ, ಸಾಹಿತ್ಯ, ಅಭಿನಯ ಎಲ್ಲವೂ ಮೇಳೈಸಿದಂತಹ, ಹಾಗೂ ಸಂಗೀತ - ಸಾಹಿತ್ಯಕ್ಕೆ ಪ್ರಮುಖ ಸ್ಥಾನವಿದ್ದು ಪ್ರೇಕ್ಷಕವೃಂದದ ಮೇಲೆ ಪ್ರಭಾವ ಬೀರುವಂತಹ ನಾಟಕಗಳನ್ನೇ ಪ್ರದರ್ಶಿಸಬೇಕೆಂದು ಸ್ಮಾರಕ ಸಂಘದ ವ್ಯವಸ್ಥಾಪಕ ವರ್ಗದವರು ತೀರ್ಮಾನಿಸಿ ರತ್ನಾವಳಿ, ವಿರಾಟಪರ್ವ, ಮನ್ಮಥ ವಿಜಯ ನಿರುಪಮ, ಶಾಕುಂತಲಾ ಮೊದಲಾದ ನಾಟಕಗಳನ್ನು ಆಡುವ ನಿರ್ಣಯವಾಯಿತು. ಸ್ಮಾರಕ ಸಂಘದ ವತಿಯಿಂದ ಏರ್ಪಟ್ಟ ಮೊದಲಿನ ನಾಟಕದ ಅಧ್ಯಕ್ಷತೆಯನ್ನು ಯುವರಾಜರಾದ ಕಂಠೀರವ ನರಸಿಂಹರಾಜ ಒಡೆಯರ್ ಅವರು ವಹಿಸಿದ್ದರು. ನಾಟಕ ಆಚಾರ್ಯರಿಗೆ ಪ್ರೀತಿಪಾತ್ರವಾಗಿದ್ದ ರತ್ನಾವಳಿ. ನಟ-ನಟಿಯರ ಹಿತಮಿತವಾದ ಅಭಿನಯ, ಅರ್ಥಸ್ಫುಟವಾದ ಕಂದಪದ್ಯಗಳನ್ನು ಬಿಡಿಸಿ, ಬಿಡಿಸಿ ಹೇಳುತ್ತಿದ್ದ ರೀತಿ, ಬಲು ಸೊಗಸಾಗಿ ಮೂಡಿಬಂದಿತು. ಯುವರಾಜರು ನಾಟಕದಲ್ಲಿ ಆಸಕ್ತಿ ತೋರಿಸಿದ್ದರಿಂದ ನಮ್ಮ ಉತ್ಸಾಹ ಇಮ್ಮಡಿಸಿತು. ಎಲ್ಲಕ್ಕೂ ಮಿಗಿಲಾಗಿ ನನ್ನ ರಂಗಗೀತೆಗಳು ನಾಟಕದ ವಿಶೇಷ ಆಕರ್ಷಣೆ ಎನಿಸಿತು.

ಪ್ರೇಕ್ಷಕರಲ್ಲಿ ಆಚಾರ್ಯರ ನೆನಪನ್ನು ಉಳಿಸಿದಂತಹ ಮನ್ಮಥ ವಿಜಯ, ಶಾಕುಂತಲಾ, ನಿರುಪಮ ಮೊದಲಾದ ನಾಟಕಗಳನ್ನೂ ಸಂಘವು ಆಗಾಗ್ಗ ಪ್ರದರ್ಶಿಸುತ್ತಿತ್ತು. ನಾನೇ ಪ್ರಧಾನ ಪಾತ್ರಧಾರಿಣಿ. ಹೀಗೆ ಸಂಘದವರು ಪ್ರದರ್ಶಿಸುತ್ತಿದ್ದ ಹತ್ತಾರು ನಾಟಕಗಳಲ್ಲಿ ಭಾಗವಹಿಸಿ ಆಚಾರ್ಯರ ಸ್ಮಾರಕಕ್ಕೆ ಕಿಂಚಿತ್ ಸೇವೆಯನ್ನು ಸಲ್ಲಿಸುತ್ತಿದ್ದಾಗ ಮತ್ತೆ ವೃತ್ತಿ ನಾಟಕ ಮಂಡಳಿಗೆ ಪ್ರವೇಶಿಸುವಂತಾಯಿತು. ◆

## ಗುಬ್ಬಿ ಕಂಪನಿಯ ಭಾಗಸ್ಥಳಾಗಿ

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಭೆಯ ಪ್ರಮುಖ ಪಾತ್ರಧಾರಿಗಳಾಗಿದ್ದ ಬಿ.ವಿ. ಗುರುಮೂರ್ತಪ್ಪ ಮತ್ತು ಪಿಟೀಲು ಕೇಶವಮೂರ್ತಿಗಳು (ನನ್ನ ತಂದೆಯವರ ಶಿಷ್ಯರು) ಇದ್ದಕ್ಕಿದ್ದಂತೆ ಒಂದು ದಿನ ನನ್ನನ್ನು ಮನೆಯಲ್ಲಿ ಭೇಟಿ ಮಾಡಿ, ಗುಬ್ಬಿ ಕಂಪನಿಯ ಮಾಲೀಕರಾದ ನಾಟಕರತ್ನ ಜಿ. ಎಚ್. ವೀರಣ್ಣನವರಿಂದ ಸಂದೇಶವೊಂದನ್ನು ತಂದರು. ಗುಬ್ಬಿ ನಾಟಕ ಮಂಡಳಿಗೆ ನೀವು ಪ್ರಧಾನ ಪಾತ್ರಧಾರಿಣಿಯಾಗಿ ಪ್ರವೇಶಿಸಬೇಕೆಂದರು. "ನಾನು ಬಣ್ಣದ ಬದುಕಿನಲ್ಲೇ ಬೇಸರಗೊಂಡಿರುವಾಗ ನೀವು ಕಂಪನಿಗೆ ಪ್ರವೇಶಿಸಿ ಎಂದು ಹೇಳುತ್ತೀರಲ್ಲಾ ?" ಎಂದು ಖಡಾಖಂಡಿತವಾಗಿ ಆಹ್ವಾನವನ್ನು ನಿರಾಕರಿಸಿದೆ. ನಮ್ಮ ನಡುವೆ ಸ್ವಲ್ಪಕಾಲ ಮೌನ ಆವರಿಸಿತು. ಆನಂತರ ಗುರುಮೂರ್ತಪ್ಪನವರು ಮೌನ ಮುರಿದು "ನೋಡಿ, ನಿಮ್ಮ ಬರುವಿಕೆಯಿಂದ ಕಂಪನಿಯ ನಟ-ನಟಿಯರಿಗೆಲ್ಲಾ ಸಂತೋಷವಾಗುತ್ತದೆ. ನಾನು ನಿಮ್ಮನ್ನು ಕರೆದುಕೊಂಡೇ ಬರುತ್ತೇನೆಂದು ಯಜಮಾನರಿಗೆ ಮಾತು ಕೊಟ್ಟಿದ್ದೇನೆ. ದಯಮಾಡಿ ತಾವು ನನ್ನ ಮರ್ಯಾದೆ ಕಾಪಾಡಬೇಕು" ಎಂದು ಅತ್ಯಂತ ವಿನಯದಿಂದ ಒತ್ತಾಯಪಡಿಸಿದರು. ನಾನು ಎಷ್ಟಾದರೂ ಹೆಣ್ಣು. ಸೋತೆ. ಆದರೆ ಕೇವಲ ಪ್ರಧಾನ ಪಾತ್ರಧಾರಿಣಿಯಾಗಿ ಕಂಪನಿಯನ್ನು ಪ್ರವೇಶಿಸದೆ ಭಾಗಸ್ಥಳೂ ಆದೆ. ಆಗ ಕಂಪನಿ ಬೆಂಗಳೂರಿನಲ್ಲಿತ್ತು. ಆಚಾರ್ಯರ ಯುಗ ಕಳೆದು ವೀರಣ್ಣನವರ ಯುಗ ಪ್ರಾರಂಭವಾಗಿತ್ತು. ಗುಬ್ಬಿ ಕಂಪನಿಯಲ್ಲಿ ಸಂಗೀತ ಪ್ರಧಾನವಾದ ನಾಟಕಗಳ ಜೊತೆಗೆ ಗದ್ಯ ಪ್ರಧಾನವಾದ ನಾಟಕಗಳೂ ಪ್ರದರ್ಶಿಸಲ್ಪಡುತ್ತಿದ್ದುವು. ರಾಜಭಕ್ತಿ, ಕರ್ನಾಟಕ ಸಾಮ್ರಾಜ್ಯ, ಸುಭದ್ರಾ, ಕಾಳಿದಾಸ, ರಾಮಾಂಜನೇಯ ಯುದ್ಧ, ಸದಾರಮೆ, ಗುಲೇಬಕಾವಲಿ, ಪ್ರಭಾಮಣಿ ವಿಜಯ, ಲಂಕಾದಹನ ಮೊದಲಾದ ನಾಟಕಗಳು ಜನಪ್ರಿಯವಾಗಿ ಪ್ರದರ್ಶಿಸಲ್ಪಡುತ್ತಿದ್ದುವು. ಈ ನಾಟಕಗಳಲ್ಲಿ ಕೆಲವು ಮರಾಠಿಯಿಂದ ಅನುವಾದಿತವಾಗಿ ರೊಮ್ಯಾಂಟಿಕ್ ಸಂಪ್ರದಾಯಕ್ಕೆ ಸೇರಿದವುಗಳಾಗಿದ್ದುವು. ಆಗ ಕಂಪನಿಯಲ್ಲಿ ತ್ರಿಪುರಾಂಬ, ಅಶ್ವತ್ಥಮ್ಮ, ನಟಭಯಂಕರ ಎಂ. ಎನ್. ಗಂಗಾಧರರಾಯರು, ಬಿ.ವಿ. ಗುರುಮೂರ್ತಪ್ಪನವರು, ರಾಘವೇಂದ್ರರಾಯರು, ವ್ಯಾಸರಾಯರು, ಜಿ. ಸುಂದರಮ್ಮನವರು, ಬಿ. ಜಯಮ್ಮನವರು, ಜಿ.ವಿ. ಸ್ವರ್ಣಮ್ಮನವರು, ಸುಬ್ಬರಾಯರು, ಕೃಷ್ಣಮೂರ್ತಿರಾಯರು, ಶಕುನಿ

ಬಸವರಾಜಪ್ಪನವರು, ಮುರಾರಾಚಾರ್ ಮೊದಲಾದ ಪ್ರತಿಭಾನ್ವಿತ ಕಲಾವಿದರು ಮಂಡಳಿಯಲ್ಲಿದ್ದರು.

ಕಂಪನಿಯ ಗಲ್ಲಾಪೆಟ್ಟಿಗೆಯ ನಾಟಕಗಳಲ್ಲೊಂದೆನಿಸಿದ್ದ ರಾಮಾಂಜನೇಯ ಯುದ್ಧ ನಾಟಕದಲ್ಲಿ ನಾನು ಚಾರುಮತಿಯ ಪಾತ್ರ ನಿರ್ವಹಿಸತೊಡಗಿದೆ. ಸೀತೆಯಾಗಿ ಅಶ್ವತ್ಥಮ್ಮನವರು, ರಾಮನಾಗಿ ಎಂ. ಸುಬ್ಬರಾಯರು, ಆಂಜನೇಯನಾಗಿ ಗಂಗಾಧರರಾಯರು, ಚಂದ್ರಭಾನುವಾಗಿ ಬಿ.ವಿ. ಗುರುಮೂರ್ತಪ್ಪನವರು ಭಾಗವಹಿಸುತ್ತಿದ್ದರು. ನಟ-ನಟಿಯರ ಭಾವ ಪ್ರಧಾನವಾದ ಅಭಿನಯದಿಂದ, ಅದ್ದೂರಿಯ ರಂಗಸಜ್ಜಿಕೆಯಿಂದ ನಾಟಕ ಜನಪ್ರಿಯತೆ ಗಳಿಸಿತು.

ಬೆಂಗಳೂರಿನ ಯಶಸ್ವಿ ಮೊಕ್ಕಾಂ ನಂತರ ಕಂಪನಿ ಹಾಸನ ಮೊಕ್ಕಾಂ ಪ್ರಾರಂಭ ಮಾಡಿತು. ಇಲ್ಲಿ ಕೆಲವಾರು ದಿನಗಳಿದ್ದು ತುಮಕೂರಿನಲ್ಲಿ ನಾಟಕಗಳು ಯಶಸ್ವಿಯಾಗಿ ನಡೆದು ಮದರಾಸಿಗೆ ತೆರಳಿದೆವು. ಮಿಡ್‌ಲ್ಯಾಂಡ್ ಥಿಯೇಟರಿನಲ್ಲಿ ಪ್ರದರ್ಶನ ವೀಯುವುದರ ಮೂಲಕ ತಮಿಳುನಾಡಿನಲ್ಲಿ ಕನ್ನಡ ನಾಟಕಗಳನ್ನು ಆಡತೊಡಗಿದೆವು. ಸದಾರಮೆ, ಲಂಕಾದಹನ ಮೊದಲಾದ ನಾಟಕಗಳು ಯಶಸ್ವಿಯಾಗಿ ನಡೆದವು. 6-7 ತಿಂಗಳು ಇಲ್ಲಿದ್ದು ನಂತರ ಹುಬ್ಬಳ್ಳಿ, ರಬಕವಿ ಮೊದಲಾದೆಡೆಗಳಲ್ಲಿ ಮೊಕ್ಕಾಂ ಮಾಡಿದೆವು. (ರಬಕವಿಯಲ್ಲಿ ಸಿದ್ಧಾರೂಢ ಸ್ವಾಮಿಗಳು ಕಂಪನಿಯ ನಾಟಕಗಳನ್ನು ನೋಡಿ ತಮ್ಮ ಮೆಚ್ಚುಗೆಯನ್ನು ಸೂಚಿಸಿ ಆಶೀರ್ವದಿಸಿದರು.) ಈ ವೇಳೆಗೆ ದಸರಾ ಪ್ರಾರಂಭವಾಯಿತು. ಕಂಪನಿ ಮೈಸೂರು ಮೊಕ್ಕಾಂ ಮಾಡಿತು.

ಮೈಸೂರು ಮೊಕ್ಕಾಂನಲ್ಲಿ ನಾನು ಕಂಪನಿಯನ್ನು ಬಿಟ್ಟು ಹೊರಬಂದೆ. ಆನಂತರ ಕಂಪನಿ ಎರಡು - ಮೂರು ಮೊಕ್ಕಾಂಗಳನ್ನು ಮುಗಿಸಿ ಬೆಂಗಳೂರಿಗೆ ಬಂದು ಸ್ಥಗಿತಗೊಂಡಿತು. ಕೆಲವಾರು ತಿಂಗಳುಗಳ ನಂತರ ನಾಟಕರತ್ನರು ಕಂಪನಿಯನ್ನು ಮತ್ತೆ ಪ್ರಾರಂಭ ಮಾಡಲು ಸಿದ್ಧತೆಗೆ ತೊಡಗಿದರು. ಈ ಬಾರಿ ಅವರು ಲಕ್ಷಾಂತರ ರೂ. ವ್ಯಯಮಾಡಿ ಕನ್ನಡ ರಂಗಭೂಮಿಯಲ್ಲಿ 'ನಭೂತೋ ನ ಭವಿಷ್ಯತಿ' ಎಂಬಂತೆ ವೈಭವದ ರಂಗಸಜ್ಜಿಕೆಯ ನಿರ್ಮಾಣದಲ್ಲಿ ತೊಡಗಿದರು. ಪ್ರಯೋಗ ವಿಧಾನದಲ್ಲಿ ಮತ್ತು ಅಚ್ಚುಕಟ್ಟಿನಲ್ಲಿ ಉಳಿದ ನಾಟಕಗಳಿಗಿಂತ ಭಿನ್ನವಾದ ನಾಟಕವೊಂದನ್ನು ಹೆಸರಾಂತ ನಾಟಕಕಾರ ಶ್ರೀ ಬಿ. ಪುಟ್ಟಸ್ವಾಮಯ್ಯನವರಿಂದ ಬರೆಸತೊಡಗಿದರು. ರಂಗಭೂಮಿಯಲ್ಲೇ ಕ್ರಾಂತಿಯನ್ನುಂಟು ಮಾಡಿದ ಈ ನಾಟಕವೇ 'ಕುರುಕ್ಷೇತ್ರ'. ಶಿವಾನಂದ ಥಿಯೇಟರಿನಲ್ಲಿ (ಈಗಿನ ಮೂವಿಲ್ಯಾಂಡ್ ಚಿತ್ರಮಂದಿರವಿರುವ ಸ್ಥಳ) ನಾಟಕವನ್ನು ಪ್ರದರ್ಶಿಸಲಾಯಿತು. ಆಗಿನ ದಿವಾನರಾಗಿದ್ದ, ದಕ್ಷ ಆಡಳಿತಗಾರ ಸರ್. ಎಂ. ಮಿರ್ಜಾ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ನಾನು ಸುಭದ್ರಳ ಪಾತ್ರವನ್ನೂ, ತ್ರಿಪುರಾಂಬ ದ್ರೌಪದಿಯ ಪಾತ್ರವನ್ನೂ, ಮುರಾರಾಚಾರ್ ರುಕ್ಮಿಣಿಯ ಪಾತ್ರವನ್ನೂ, 'ನಾಟಕರತ್ನರು' ಧುರ್ಯೋಧನನ ಪಾತ್ರವನ್ನೂ, ಗಂಗಾಧರರಾಯರು ಭೀಮನ

ಪಾತ್ರವನ್ನು ನಿರ್ವಹಿಸುತ್ತಿದ್ದರು. ರಂಗಮಂದಿರ, ವೇಳೆಗೆ ಮೊದಲೆ ತುಂಬಿ ಹೋಗುತ್ತಿತ್ತು. ಕೃಷ್ಣ ರಾಯಭಾರ, ಅರ್ಜುನ-ಕುಂತಿ, ಗೀತಾಬೋಧೆ, ಅರ್ಜುನ ಶಪಥ ಮೊದಲಾದವು ಪ್ರೇಕ್ಷಕರ ಮನಸ್ಸಿನ ಮೇಲೆ ಮಹತ್ತರ ಪರಿಣಾಮವನ್ನು ಉಂಟುಮಾಡಿತು. ಪಾತ್ರಕ್ಕೆ ಅನುಗುಣವಾದ ನನ್ನ ಅಭಿನಯ, ಲೀಲಾಜಾಲವಾದ ಹಾಡುಗಾರಿಕೆಯಿಂದ ಈ ನಾಟಕದಲ್ಲೂ ಒನ್ಸ್‌ಮೋರ್‌ಗೆ ಪಾತ್ರಳಾದೆ. ಈ ನಾಟಕದಲ್ಲಿ ನಾನು ಹಾಡುತ್ತಿದ್ದ 'ಜನನಿಯ ದಾಸ್ಯವನು ಹರಿಸೆ, ಸುರರಂ ಗೆಲ್ದು, ಅಮೃತವನು ತರಲೆಸಿ, ತಾಯಿಗೆ ನಮಿಸಿ' ಎಂಬ ಸೀಸಪದ್ಯ ನಾಗರಿಕ ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿಕೊಟ್ಟಿತು. ಪ್ರತಿಯೊಂದು ನಾಟಕದಲ್ಲಿಯೂ ಈ ಹಾಡನ್ನು ನಾನು ಒಂದಲ್ಲ ಎರಡು ಬಾರಿ ಹಾಡಿದರೇ ಪ್ರೇಕ್ಷಕರಿಗೆ ತೃಪ್ತಿ. ಒಂದು ಬಾರಿ ಹಾಡಿ ನಿಲ್ಲಿಸಿದರಂತೂ 'ಒನ್ಸ್‌ಮೋರ್' ಎಂಬ ಧ್ವನಿ ರಂಗಮಂದಿರದ ಮೇಲ್ಛಾವಣಿಯನ್ನು ಹಾರಿಹೋಗುವಂತೆ ಮಾಡುತ್ತಿತ್ತು. ದಿವಾನರು ನನ್ನ ಶಾರೀರ ಸಂಪತ್ತು, ಅಭಿನಯ ಕೌಶಲ್ಯವನ್ನು ಮೆಚ್ಚಿಕೊಂಡರು.

ಐದಾರು ತಿಂಗಳುಗಳ ಪರ್ಯಂತ ಗುಬ್ಬಿ ಕಂಪನಿಯಲ್ಲಿ ಉಳಿದಿದ್ದು ಅನಂತರ ಹೊರಬಂದೆ. ನಾಟಕ ಶಿರೋಮಣಿ ವರದಾಚಾರ್ಯರನ್ನು ಅನುಸರಿಸಿ ಹಾಡುತ್ತಿದ್ದ ಜಿ. ನಾಗೇಶರಾಯರು ಈ ವೇಳೆಗಾಗಲೇ ತಮ್ಮ ಸ್ವಂತ ನಾಟಕ ಮಂಡಳಿಯನ್ನು ಸ್ಥಾಪಿಸಿದ್ದರು. ''ಜೀವಾನಂದ ರತ್ನಾವಳಿ ನಾಟಕ ಸಭಾ'' ಲಾಂಛನವನ್ನು ಹೊತ್ತ ಈ ಸಂಸ್ಥೆ ಆಚಾರ್ಯರು ಅಭಿನಯಿಸುತ್ತಿದ್ದ ಎಲ್ಲ ನಾಟಕಗಳನ್ನೂ ಪ್ರದರ್ಶಿಸುತ್ತಿತ್ತು.

ನಾನು ಗುಬ್ಬಿ ಕಂಪನಿ ಬಿಟ್ಟು ಬಂದ ವಿಚಾರ ಅವರಿಗೆ ತಿಳಿದು ತಮ್ಮ ಕಂಪನಿಗೆ ಆಹ್ವಾನಿಸಿದರು. ಮೊದಮೊದಲು ನಿರಾಕರಿಸಿದರೂ ಹೆಸರಾಂತ ನಟರುಗಳಾದ ಮರಿರಾಯರು ಮತ್ತು ಪಾರ್ಥಸಾರಥಿ ಅವರ ಒತ್ತಾಯಕ್ಕೆ ಮಣಿದು ಭಾಗಸ್ಥಳಾಗಿ ಒಪ್ಪಿಕೊಂಡೆ. ಈ ಮಂಡಳಿಯಲ್ಲೂ ಹತ್ತೆಂಟು ತಿಂಗಳುಗಳ ಕಾಲ ಕಲಾಸೇವೆಗೈದು ಹೊರಬಂದೆ. ಆಚಾರ್ಯರ ನಾಟಕ ಮಂಡಳಿಯ ಪ್ರಮುಖ ನಟರಲ್ಲೊಬ್ಬರಾದ ಎಂ.ಜಿ. ಮರಿರಾಯರು ಸ್ವಂತ ನಾಟಕ ಮಂಡಳಿಯ ತರಾತುರಿಯಲ್ಲಿದ್ದರು. ಅವರು ನನ್ನ ಸೇವೆಯನ್ನು ಅಪೇಕ್ಷಿಸಿದರು. ಇಲ್ಲೂ ಕೆಲವಾರು ತಿಂಗಳುಗಳಿದ್ದು ಹೊರಬಂದೆ. ಕ್ರಮೇಣ ಕಂಪನಿಯು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಮಂಗಳ ಹಾಡಿತು. ಈ ಕಂಪನಿಯಲ್ಲಿ ಹೆಸರಾಂತ ಗಾಯಕ ನಟರಾದ ಹೊಳಲಿ ಸುಬ್ರಮಣ್ಯ ಶಾಸ್ತ್ರಿಗಳೂ, ಇಂದು ಸ್ತ್ರೀ ನಾಟಕ ಮಂಡಳಿಯ ಪ್ರಧಾನ ಸಂಚಾಲಕರೂ, ಹಾರ್ಮೋನಿಯಂ ವಾದನ ಪಟುಗಳೂ ಆದ ಶ್ರೀ ಪರಮಶಿವನ್ ಅವರೂ ಇದ್ದರು. ಇವರು ನಿರ್ವಹಿಸುತ್ತಿದ್ದ ಪ್ರಹ್ಲಾದನ ಪಾತ್ರ ಕನ್ನಡ ಕಲಾಭಿಮಾನಿಗಳ ಪೂರ್ಣ ಮೆಚ್ಚುಗೆಗೆ ಪಾತ್ರವಾಗಿತ್ತು. ◆

# ಇಷ್ಟವಾಗದ ಚಿತ್ರರಂಗ

ಪೂಜ್ಯ ದೇವುಡು ಅವರ ಹೆಸರನ್ನು ಕೇಳದ ಕನ್ನಡಿಗರೇ ಇಲ್ಲ. ಅವರ ಹೆಸರು ಹೇಳಿದ ಕೂಡಲೇ ಅವರ ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಗ್ರಂಥಗಳು ನೆನಪಿಗೆ ಬರುತ್ತವೆ. ಕನ್ನಡ ಸಾಹಿತ್ಯರಂಗದಲ್ಲಿ ಒಂದು ರತ್ನ ಎಂದು ಖ್ಯಾತರಾಗಿದ್ದ ದೇವುಡು ಅವರು ರಂಗಭೂಮಿಯಲ್ಲಿಯೂ ಅಮರತೆ ಗಳಿಸಿದ್ದರು. ಚಲನಚಿತ್ರ ರಂಗ ಕೇವಲ ಅವಿದ್ಯಾವಂತರ ಕ್ಷೇತ್ರವಲ್ಲ, ವಿದ್ಯಾವಂತರ, ಕಲಾಭಿಮಾನಿಗಳ ಕ್ಷೇತ್ರವೂ ಹೌದು ಎಂಬುದನ್ನು ತೋರಿಸಲು ಶ್ರಮಿಸಿದವರಲ್ಲಿ ಶಾಸ್ತ್ರಿಗಳಿಗೆ ಗಣ್ಯಸ್ಥಾನವಿದೆ.

ಶ್ರೀಯುತರಾದ ಜಿ.ಎಚ್. ವೀರಣ್ಣ, ಕೆ. ಶ್ರೀನಿವಾಸಮೂರ್ತಿ, ನಿರ್ದೇಶಕ ಭವನಾನಿ, ಟಿ.ಪಿ. ಕೈಲಾಸಂ, ಎಚ್.ಕೆ. ವೀರಣ್ಣಗೌಡ, ಕಮಲಾದೇವಿ ಚಟ್ಟೋಪಾಧ್ಯಾಯ, ಏಣಾಕ್ಷಿ ರಾಮರಾವ್ ಮುಂತಾದ ವಿದ್ಯಾಭಿಮಾನಿಗಳ ಜೊತೆಯಲ್ಲಿ ಕನ್ನಡ ಚಲನಚಿತ್ರ ರಂಗಕ್ಕೆ ಕಾಲಿಟ್ಟು ಅದರ ಅಸ್ತಿಭಾರ ಶಿಲೆಯನ್ನು ಕನ್ನಡ ನಾಡಿನಲ್ಲಿ ಸ್ಥಾಪಿಸಲು ಶ್ರಮಿಸಿದವರಲ್ಲಿ ದೇವುಡು ಪ್ರಮುಖರು.

ಇವರು ಸಾಹಿತಿ, ಸಂಗೀತಗಾರರನ್ನೆಲ್ಲಾ ಒಂದೆಡೆ ಕಲೆಹಾಕಿ ಕನ್ನಡ ಚಲನಚಿತ್ರ ನಿರ್ಮಾಣದ ಸಾಹಸಕ್ಕಿಳಿದರು. ಅವರ ಈ ಸಾಹಸದ ಫಲವೇ ದಿ ಕರ್ನಾಟಕ ಟಾಕೀಚ್ ಲಿ., (ಧಾರವಾಡ) ಲಾಂಛನದಡಿಯಲ್ಲಿ ನಿರ್ಮಾಣವಾದ ಭಕ್ತಿರಸ ಪ್ರಧಾನವಾದ ಕನ್ನಡ ವಾಕ್ಚಿತ್ರ ಚಿರಂಜೀವಿ ಅಥವಾ ಮಾರ್ಕಂಡೇಯ - ದೇವುಡು ಅವರಿಗೆ ನನ್ನ ತಂದೆಯವರೆಂದರೆ ಎಲ್ಲಿಲ್ಲದ ಗೌರವ. ಇಬ್ಬರೂ ಒಂದೆಡೆ ಕಲೆತರೆ ಸಾಕು, ಸಂಗೀತ, ಸಾಹಿತ್ಯದ ಅನೇಕ ವಿಷಯಗಳ ಚರ್ಚೆಯಲ್ಲಿ ಮಗ್ನರಾಗಿಬಿಡುತ್ತಿದ್ದರು. ದೇವುಡು ಎಂದರೆ ನನಗೂ ತಂದೆಯವರಲ್ಲಿದ್ದಷ್ಟೇ ಭಕ್ತಿ. ಎಂದೂ ಅವರ ಮಾತಿಗೆ ಬದಲು ಹೇಳಿದವಳಲ್ಲ.

ಚಲನಚಿತ್ರರಂಗದ ಪ್ರವೇಶ ನನಗೆ ಖಂಡಿತ ಇಷ್ಟವಿರಲಿಲ್ಲ. ಆದರೆ ದೇವುಡು ಅವರ ಮಾತಿಗೆ ಬದಲು ಹೇಳಲು ಸಾಧ್ಯವೇ ? ಈ ಚಿತ್ರದ ನಿರ್ಮಾಣ ಕಛೇರಿ ಧಾರವಾಡದಲ್ಲಿದ್ದುದರಿಂದ ಅವರ ಜೊತೆಯಲ್ಲಿ ಅಲ್ಲಿಗೆ ತೆರಳಿದೆ. ಚಿತ್ರಕಥಾ ಲೇಖಕರಾದ ದೇವುಡು, ಚಿತ್ರದ ಸಂಭಾಷಣೆ - ಗೀತೆಗಳ ಬಗ್ಗೆ ನನಗೆ ಶಿಕ್ಷಣ ಕೊಟ್ಟರು. ಚಿತ್ರದ ಚಿರಂಜೀವಿಯ ತಾಯಿ ಮರುದ್ವತಿಯ ಪಾತ್ರಕ್ಕೆ ಆಯ್ಕೆಯಾಗಿದ್ದೆ. ಈಗಿನಂತೆ ಹಿನ್ನೆಲೆ ಗಾಯನ ಪದ್ಧತಿ ಇರಲಿಲ್ಲವಾದ್ದರಿಂದ ಕಲಾವಿದರೇ ಸ್ವತಃ ಹಾಡಬೇಕಾಗಿತ್ತು.

ಶಾಸ್ತ್ರೀಯ ಸಂಗೀತ ಜ್ಞಾನವಿದ್ದವರಂತೂ ಚಲನಚಿತ್ರ ಸಂಗೀತವೆಂದರೆ ಮೂಗು ಮುರಿಯುತ್ತಿದ್ದ ಕಾಲ ಅದು. ಸರಿ, ಸಂಗೀತ ಮತ್ತು ಸಂಭಾಷಣೆಯ ಅಭ್ಯಾಸ ಮುಕ್ತಾಯವಾದ ನಂತರ ಪೂನಾಕ್ಕೆ ತೆರಳಿದೆ. ಹಿಂದೂಸ್ಥಾನಿ ಸಂಗೀತದ ಅಪೂರ್ವ ನಿಧಿ ಎಂದು ಖ್ಯಾತರಾಗಿರುವ ಶ್ರೀ ಮಲ್ಲಿಕಾರ್ಜುನ ಮನ್ಸೂರ ಅವರ ಅಣ್ಣಂದಿರಾದ ಶ್ರೀ ಬಸವರಾಜ ಮನ್ಸೂರ ಅವರು ನಾರದನ ಪಾತ್ರ ವಹಿಸಲು ಬಂದಿದ್ದರು. ಅಂದು ಕರ್ನಾಟಕದ ಕೋಗಿಲೆ ಎಂದು ಹೆಸರಾಗಿದ್ದ ಅಮೀರ್ ಜಾನ್ ಕರ್ನಾಟಕಿ ಅವರಿಗೂ ಪ್ರಮುಖ ಪಾತ್ರವನ್ನು ಕೊಡಲಾಗಿತ್ತು.

ನನ್ನ ಅಕ್ಕ ಪಾರ್ವತಮ್ಮಳೂ ಪಾತ್ರವನ್ನು ನಿರ್ವಹಿಸಲು ನನ್ನ ಜೊತೆಯಲ್ಲಿಯೇ ಬಂದಿದ್ದಳು. ಆರ್. ಎಸ್. ಮೂರ್ತಿ, ಶಾರದಾ ಮೊದಲಾದವರೂ ಇತರ ಪ್ರಮುಖ ಪಾತ್ರಗಳಿಗೆ ಗೊತ್ತಾಗಿದ್ದರು. ಸಂಗೀತ ನಿರ್ದೇಶನದ ಹೊಣೆಯನ್ನು ಶ್ರೀ ಎಚ್.ಕೆ. ಶೇಷಗಿರಿರಾಯರು ಹೊತ್ತಿದ್ದರು. ಪುರೋಹಿತ್ ಎಂಬುವರು ಛಾಯಾಗ್ರಾಹಕರು. ಚಿತ್ರದ ಸೂತ್ರಧಾರರು ಕೆ.ಪಿ. ಭಾವೆ ಎಂಬುವರು. ಪುಣೆಯ ಸರಸ್ವತಿ ಸಿನಿಟೋನ್‌ನಲ್ಲಿ ಚಿತ್ರೀಕರಣವನ್ನು ನಡೆಸಲಾಯಿತು. ಯಾವ ತಂಟೆ ತಕರಾರು ಇಲ್ಲದೆ ಮೂರು - ನಾಲ್ಕು ತಿಂಗಳ ಅವಧಿಯಲ್ಲಿ ಚಿತ್ರ ನಿರ್ಮಾಣವಾಗಿ ಧಾರವಾಡದ ಬ್ಯಾಂಕ್ ಬೀದಿಯಲ್ಲಿದ್ದ ಮೋಹನ್ ಮತ್ತು ಕಂಪನಿಯ ಮುಖಾಂತರ ಬಿಡುಗಡೆಯಾಯಿತು. ಬೆಂಗಳೂರಿನ ಮೆಜೆಸ್ಟಿಕ್ ಚಿತ್ರಮಂದಿರದಲ್ಲಿ ಚಿತ್ರ ತೆರೆಕಂಡಿತು. (೧೯೩೭ರ ಜೂನ್ ತಿಂಗಳಿನಲ್ಲಿ ಎಂದು ನನಗೆ ಜ್ಞಾಪಕ) ಚಿತ್ರವನ್ನು ಕನ್ನಡ ಕಲಾಭಿಮಾನಿಗಳು ಅಧಿಕ ಸಂಖ್ಯೆಯಲ್ಲಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಚಿತ್ರವನ್ನು ಸರ್ ಸಿ.ವಿ. ರಾಮನ್, ಸರ್ ಪುಟ್ಟಣ್ಣಶೆಟ್ಟಿ, ಶ್ರೀ ಕೆ. ಶಂಕರನಾರಾಯಣರಾವ್, ಶ್ರೀ ಸುಬ್ಬರಾಮಶೆಟ್ಟಿ, ಪ್ರೊ. ಬಿ. ಎಂ. ಶ್ರೀ, ಲೇಡಿ ಮಿರ್ಜಾ ಇಸ್ಮಾಯಿಲ್, ಲೇಡಿ ರಾಮನ್, ಲೇಡಿ ಪುಟ್ಟಣ್ಣಚೆಟ್ಟಿ ಮೊದಲಾದವರು ನೋಡಿ ನನ್ನ ಪಾತ್ರವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಈ ಚಿತ್ರ ಪ್ರದರ್ಶನವಾಗುತ್ತಿದ್ದಾಗ ಮಧ್ಯೆ ವಿರಾಮಕಾಲದಲ್ಲಿ ಪ್ರೇಕ್ಷಕರ ಇಚ್ಛೆಯಂತೆ ಮರುದ್ವತಿ ಪಾತ್ರದ ಒಂದೆರಡು ಗೀತೆಗಳನ್ನು ಕೆಲವು ಭಜನೆ ಗೀತೆಗಳನ್ನು ಹಾಡಿದೆ. ನೆರೆದಿದ್ದ ಪ್ರೇಕ್ಷಕ ಸಮುದಾಯ ಆನಂದ ತುಂದಿಲವಾಯಿತು. ಬೊಂಬಾಯಿಯ ವಿ.ವಿ. ಪಂಡಿತ್ ಎಂಬುವರು ಕರ್ನಾಟಕ ಟಾಕೀಜ್‌ನ ಪರವಾಗಿ ಒಂದು ಸ್ವರ್ಣಪದಕವನ್ನು ಕನ್ನಡದ ಕಣ್ವ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಅಮೃತ ಹಸ್ತದಿಂದ ನನಗೆ ಕೊಡಿಸಿದರು. ಅರಮನೆ-ಗುರುಮನೆಗಳು ವಿಶೇಷವಾಗಿ ನನ್ನನ್ನು ಸನ್ಮಾನಿಸಿದಾಗಲೂ ನನಗೆ ಇಷ್ಟು ಆನಂದವಾಗಿರಲಿಲ್ಲ. ಈ ಚಿತ್ರದಿಂದ ನನಗೆ ಸಾಕಷ್ಟು ಹೆಸರು ಬಂದಿತು. ಅನೇಕ ಮಂದಿ ಚಿತ್ರ ನಿರ್ಮಾಪಕರ ಕರೆಯೂ ಬಂದಿತು. ಆದರೆ ರಂಗ ಕಲೆಯ ಗೀಳು ನನಗೆ ಹುಟ್ಟಿನ ಜೊತೆಗೆ ಬಂದಿದ್ದರಿಂದ ಚಿತ್ರರಂಗದ ಆಕರ್ಷಣೆ ನನ್ನನ್ನು ಸೆರೆಹಿಡಿಯಲಿಲ್ಲ. ತಿಂಗಳಪರ್ಯಂತ

ಸುಮ್ಮನಿದ್ದು ರಂಗಕಲೆಯನ್ನೇ ಜೀವನದ ಊರುಗೋಲನ್ನಾಗಿ ಮಾಡಿಕೊಳ್ಳಲು ದೃಢ ಮನಸ್ಸು ಮಾಡಿದೆ.

ಅಭಿಜಾತ ರಂಗಭೂಮಿಯಿಂದ ಸ್ಫೂರ್ತಿ ಪಡೆದು ಮೈಸೂರಿನಲ್ಲಿ ಪ್ರಾರಂಭವಾದ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭೆ ಜನಪ್ರಿಯತೆ ಗಳಿಸಿತ್ತು. ಮೈಸೂರು ಶಿವರಾಂ ಪೇಟೆಯಲ್ಲಿದ್ದ ಸಾವುಕಾರ್, ರಾವ್ ಬಹದ್ದೂರ್, ಧರ್ಮಪ್ರಕಾಶ ದಿವಂಗತ ಬನುಮಯ್ಯನವರ ಮಕ್ಕಳಾದ ಸಾಹುಕಾರ್ ಡಿ.ಟಿ. ಕೃಷ್ಣಪ್ಪನವರ ರತ್ನಾವಳಿ ಥಿಯೇಟರಿನಲ್ಲಿ, ಕಂಪನಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಆಗ ಚಾಮುಂಡೇಶ್ವರಿ ನಾಟಕ ಸಭಾದ ಆಡಳಿತ ಸಾಹುಕಾರ್ ನಂದಿಬಸಪ್ಪ ಅವರದು. ಭುಜಬಲಯ್ಯ ಎಂಬುವರು ಕಂಪನಿಯ ಮೇಲ್ವಿಚಾರಕರು. ನಮ್ಮ ಮನೆಗೆ ಇವರು ಆಗಮಿಸಿ ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸುತ್ತಿದ್ದ ಮಂಡಳಿಗೆ ಒತ್ತಾಸೆ ನೀಡಬೇಕೆಂದು ಬೇಡಿದರು. ಸರ್ವಶ್ರೀ ಕೊಟ್ಟೂರಪ್ಪ, ಜಿ.ವಿ. ಕೃಷ್ಣಮೂರ್ತಿ, ವಾಸುದೇವರಾವ್, ಬಸವರಾಜ ಸೋದರರು, ಗುಂಡೂರಾವ್, ಜಿ.ಜಿ. ರುದ್ರಪ್ಪ, ಶಾಮರಾವ್, ವೆಂಕಟೇಶಯ್ಯ, ಎಚ್.ವಿ. ಲಕ್ಷ್ಮಣರಾವ್, ಸಾಗರದ ಲಕ್ಷ್ಮೀಬಾಯಿ, ನಾಗರತ್ನಮ್ಮ (ಸ್ತ್ರೀ ನಾಟಕ ಮಂಡಳಿ) ಇವರು ಪ್ರಮುಖ ನಟ-ನಟಿಯರಾಗಿದ್ದ ಈ ಸಂಸ್ಥೆಗೆ ಪ್ರವೇಶಿಸಲು ಒಪ್ಪಿಗೆಯನ್ನು ಕೊಟ್ಟಿದ್ದಾಯಿತು.

ದಾನಶೂರ ಕರ್ಣ, ರಾಜಸೂಯ ಯಾಗ, ಭೀಷ್ಮ ಪ್ರತಿಜ್ಞೆ, ವೀರ ಅಭಿಮನ್ಯು, ತಿಲೋತ್ತಮೆ, ವಸಂತಸೇನಾ ಮೊದಲಾದವು ಹೆಸರಾಂತ ನಾಟಕಗಳೆನಿಸಿದ್ದವು. ಪಾತ್ರ ಪರಿಚಯ ನನಗೆ ಅಷ್ಟಾಗಿ ಇರಲಿಲ್ಲವಾದ್ದರಿಂದ ಪಾತ್ರಗಳನ್ನು ನಿರ್ವಹಿಸಿ ಕನ್ನಡಿಗರ ಪ್ರೀತಿ, ಗೌರವ, ವಿಶ್ವಾಸಗಳಿಗೆ ಪಾತ್ರವಾಗಲು ಸಾಧ್ಯವಾಗುತ್ತದೆಯೇ ಎಂಬ ಸಂದೇಹಕ್ಕೆ ಒಳಗಾದೆ. ಆದರೆ ಕನ್ನಡ ರಂಗಭೂಮಿಯ ಕರ್ಣ ಎಂದು ಹೆಸರಾಗಿರುವ ಕೊಟ್ಟೂರಪ್ಪನವರು ನಾಟಕಗಳ ಪರಿಚಯವನ್ನೆಲ್ಲಾ ಮಾಡಿಕೊಟ್ಟರಲ್ಲದೆ ಕಂದಪದ್ಯಗಳನ್ನೂ, ಗೀತೆಗಳನ್ನೂ, ರಸಭಾವಯುಕ್ತವಾಗಿ ಹಾಡುವಲ್ಲಿ ಶಿಕ್ಷಣ ಕೊಟ್ಟರು. 'ದಾನಶೂರ ಕರ್ಣ' ದಲ್ಲಿ ಸೋಮಪ್ರಭೆ, 'ತಿಲೋತ್ತಮೆ' ಯಲ್ಲಿ ತಿಲೋತ್ತಮೆ, 'ವಸಂತಸೇನಾ' ದಲ್ಲಿ ವಸಂತಸೇನಾ, ಸುಭದ್ರಾಕಲ್ಯಾಣದಲ್ಲಿ 'ಸುಭದ್ರಾ', ರಾಜಸೂಯ ಯಾಗದಲ್ಲಿ 'ದ್ರೌಪದಿ' - ಮೊದಲಾದ ಪಾತ್ರಗಳು ನನಗೆ ಮೀಸಲಾದವು.

ಆಗ ಚಾಮುಂಡೇಶ್ವರಿ ನಾಟಕ ಸಭೆಗೆ ಏಳಿಗೆಯ ಕಾಲ. ಶ್ರೀಮಂತ ವರ್ತಕರಾದ ನಂದಿಬಸಪ್ಪನವರ ಸಹಾಯ - ಸಹಕಾರದಿಂದ ಕಂಪನಿಯಲ್ಲಿ ಹೊಸ ಬದಲಾವಣೆಗಳಾದವು. ಭವ್ಯವಾದ ಪರದೆಗಳು, ವೇಷ ಭೂಷಣಗಳು ಸಿದ್ಧವಾದವು. ಪ್ರತಿಭಾವಂತ ನಟ - ನಟಿಯರ ಮನೋಜ್ಞ ಅಭಿನಯವೂ ಕಂಪನಿಯ ಏಳಿಗೆಗೆ ಸಹಕಾರಿಯೆನಿಸಿತು. ಮುಡುಕುತೊರೆ, ಹೇಮಗಿರಿ, ದಾವಣಗೆರೆ, ಹುಬ್ಬಳ್ಳಿ, ಗದಗ ಮೊದಲಾದ ಕಡೆಗಳಲ್ಲೆಲ್ಲಾ ಮೊಕ್ಕಾಂ ಮಾಡಲು ಕಂಪನಿ ಮೈಸೂರಿನಿಂದ ಹೊರಟಿತು. ◆

## ನಾಟಕ ಕಂಪನಿ ವ್ಯವಸ್ಥಾಪಕಿಯಾಗಿ

ಪ್ರವಾಸ ನಂತರ ಹಿಂದಿರುಗಿದಾಗ ವ್ಯಾನೇಜಿಂಗ್ ಕಮಿಟಿಯ ಚೇರ್‌ಮನ್‌ರಾದ ಶ್ರೀ ನಂದಿಬಸಪ್ಪನವರು, 'ಇನ್ನು ಮುಂದೆ ನೀವೇ ಕಂಪನಿ ನೋಡಿಕೊಳ್ಳಬೇಕು; ಇದಕ್ಕೆ ನಿಮಗೆ ಒಪ್ಪಿಗೆ ಇದೆಯೇ ?' ಎಂದು ಪ್ರಶ್ನಿಸಿದರು. ಅಂತಹ ಹೆಸರಾಂತ ಮಂಡಳಿಯ ಮೇಲ್ವಿಚಾರಣೆಯ ಕಾರ್ಯ ನಿರ್ವಹಿಸುವುದು ಸುಲಭ ಸಾಧ್ಯವಲ್ಲವೆಂಬುದು ತಿಳಿದಿದ್ದರೂ ಒಪ್ಪಿಕೊಂಡೆ. ಕಂಪನಿಯನ್ನು ಪುನರ್ ವ್ಯವಸ್ಥೆಗೊಳಿಸಿ ಹೊಸ ಚೇತನವನ್ನು ತುಂಬಿ ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ ದಕ್ಷಿಣ ಭಾರತದಲ್ಲೂ ಕನ್ನಡ ರಂಗದ ವಿಜಯಭೇರಿ ಮೊಳಗಿಸಬೇಕೆಂದು ನಿಶ್ಚಯಿಸಿದೆ. ಈ ಕಂಪನಿಯ ಪ್ರಮುಖರ ನೆರವನ್ನು ಕೋರಿದೆ. ಕೊಟ್ಟೂರಪ್ಪ ಅವರನ್ನುಳಿದು ಉಳಿದವರೆಲ್ಲಾ ನನಗೆ ನೆರವು ನೀಡಲು ಹಿಂತೆಗೆದರು. ಪ್ರಗತಿಪಥ ದಲ್ಲಿ ಹೆಜ್ಜೆಯಿಡಲು ನಿಶ್ಚಯಿಸಿದ್ದ ನನಗೆ ಕಂಪನಿಯ ನಟರ ಅಸಹಕಾರದಿಂದ ದಿಕ್ಕೇ ತೋಚದಂತಾಯಿತು. ನಟರ ಈ ಅಸಹಕಾರದ ದಾಳಿಯನ್ನು ತಡೆಗಟ್ಟಲೇಬೇಕು. ಕಂಪನಿಯನ್ನು ಯಾರೇ ತ್ಯಜಿಸಿದರೂ ನಡೆಸಲೇಬೇಕು ಎಂಬ ಛಲವೂ ನನ್ನಲ್ಲಿ ಉದ್ಭವಿಸಿತು. ಈ ಛಲದೊಂದಿಗೆ ಮಂಡ್ಯ ಮೊಕ್ಕಾಂಗೆ ಹೋದೆ. ಕೊಟ್ಟೂರಪ್ಪನವರು, ಲಕ್ಷ್ಮೀಬಾಯಿಯವರು ಮಾತ್ರ ಮೊಕ್ಕಾಂಗೆ ಬಂದಿದ್ದರು. ಬಾಕಿ ನಟರಾರೂ ಬಂದಿಲ್ಲವೆಂಬುದು ಕಂಪನಿಯ ನಟರೇ ಆದ ಟಿ. ಸುಜೇಂದ್ರರಾಯರಿಂದ ತಿಳಿದು ಬಂದಿತು. ಸಂಗೀತ ಪ್ರಧಾನವಾದ ನಾಟಕಗಳಲ್ಲಿ ನುರಿತ ಕಲಾವಿದರಿಲ್ಲದೆ ನಾಟಕ ನಡೆಯುವುದಾದರೂ ಹೇಗೆ ? ಸಾಮಾಜಿಕ ನಾಟಕವಾಗಿದ್ದರೆ ಹೇಗಾದರೂ ತೂಗಿಸ ಬಹುದಾಗಿತ್ತು. 'ರಾಜಸೂಯ ಯಾಗ'ವೆಂದು ಮಂಡ್ಯ ಮತ್ತು ಸುತ್ತಮುತ್ತಲೆಲ್ಲಾ ಪ್ರಚಾರವನ್ನು ಮಾಡಿಬಿಟ್ಟಿದ್ದೆವು. ಏನು ಮಾಡುವುದು ಎಂಬುದು ತೋಚದೆ ಕುಳಿತಿದ್ದಾಗ ಹೆಸರಾಂತ ನಟರಾಗಿದ್ದು ಇತ್ತೀಚೆಗೆ ಕಾಲವಾದ ಸುರೇಂದ್ರ ಪಂಡಿತ್ ಎಂಬುವರು ಬಸವರಾಜು ಸೋದರರನ್ನು ಕರೆಸಿಕೊಂಡು ಎಲ್ಲ ನಟರನ್ನು ಮೈಸೂರಿನ ನಿಶಾದಬಾಗ್‌ನಲ್ಲಿ ಕೂಡಿಸಿ ಅಂದಿನ ನಾಟಕಕ್ಕೆ ಒಪ್ಪಿಸಿ ಕರೆತಂದರು. ನಿಂತೇ ಹೋಗಬೇಕಾಗಿದ್ದ ರಾಜಸೂಯ ಯಾಗ ನಾಟಕ ಪ್ರದರ್ಶನ ಕೊನೆಗೂ ನಡೆಯಿತು.

ನಾಟಕ ಇನ್ನೊಂದು ದೃಶ್ಯದೊಡನೆ ಮುಕ್ತಾಯವಾಗಬೇಕು ಎನ್ನುವಾಗ ಮಾರನೆ ದಿನ ನಾಟಕದ ಬಗೆಗೆ ಮುನ್ಸೂಚನೆ ಕೊಡುವುದು ವೃತ್ತಿ ನಾಟಕದ

ಕಂಪನಿಗಳಲ್ಲಿ ಮಾಮೂಲಾಗಿ ನಡೆದು ಬಂದಿರುವ ಪದ್ಧತಿ. ಅಂತೆಯೇ ಅಂದಿನ ನಾಟಕದ ಕೊನೆಯ ದೃಶ್ಯದಲ್ಲಿ ಕೃಷ್ಣನ ಪಾತ್ರದಲ್ಲಿ ಸಾಕಷ್ಟು ಹೆಸರು ಗಳಿಸಿದ್ದ ಚಿಕ್ಕಬಸವರಾಜು ಅವರು ನಾಳೆಯ ದಿನ ನಾವು 'ದಾನಶೂರ ಕರ್ಣ' ಆಡಲಿದ್ದೇವೆ. ಕನ್ನಡ ಕಲಾಭಿಮಾನಿಗಳು ಹೆಚ್ಚು ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹಿಸಬೇಕು ಎಂದು ಪ್ರೇಕ್ಷಕರನ್ನು ಕೇಳಿಕೊಂಡರು. ಇದು ಕಂಪನಿಯ ಪ್ರಮುಖ ಕಲಾವಿದರ ಮುನಿಸಿಗೆ ಕಾರಣವಾಯಿತು. ನಮ್ಮ ಅನುಮತಿಯಿಲ್ಲದೆ ಮಾರನೆಯ ದಿನ ದಾನಶೂರ ಕರ್ಣ ಎಂದು ಏಕೆ ಪ್ರಕಟಿಸಿದಿರಿ ಎಂದು ಒಬ್ಬೊಬ್ಬರು ಒಂದೊಂದು ಮಾತನಾಡ ತೊಡಗಿದರು. ಎಷ್ಟು ಸಮಾಧಾನ ಮಾಡಿದರೂ ಶಾಂತಚಿತ್ತರಾಗಲಿಲ್ಲ. ಇವೆಲ್ಲಕ್ಕೂ ಮೂಲಕಾರಣ ಹೆಂಗಸೊಬ್ಬಳಿಗೆ ಮಂಡಳಿಯ ಮೇಲ್ವಿಚಾರಿಕೆಯ ಪಟ್ಟ ಕಟ್ಟಿದರಲ್ಲಾ ಎಂಬುದೇ ಆಗಿತ್ತು. ಎಲ್ಲ ನಟರೂ ಬಂದಿದ್ದ ವ್ಯಾನಿನಲ್ಲೇ ಮತ್ತೆ ಮೈಸೂರಿಗೆ ಹೊರಟು ಹೋದರು. ಈ ಬಾರಿಯೂ ಚಿಕ್ಕ ಬಸವರಾಜು ಅವರು ಧೈರ್ಯ ವಹಿಸಿ ಮತ್ತೆ ಎಲ್ಲ ನಟರನ್ನೂ ಒಂದೆಡೆ ಅತಿ ಪ್ರಯಾಸದಿಂದ ಕಲೆ ಹಾಕಿ ಎರಡನೇ ನಾಟಕಕ್ಕೆ ಮಂಡ್ಯಕ್ಕೆ ಕರೆತಂದರು. ಕರ್ಣನ ಪಾತ್ರ ಶ್ರೀಯುತ ಕೊಟ್ಟೂರಪ್ಪ ಅವರದು. ಪ್ರಚಾರ ಅದ್ದೂರಿಯಿಂದ ಸಾಗಿತು. ನಾಟಕಕ್ಕೆ ಜನ ತಂಡೋಪತಂಡವಾಗಿ ಆಗಮಿಸಿ ಪ್ರೋತ್ಸಾಹಿಸಿದರು. ಎಲ್ಲ ನಟರೂ ಭಿನ್ನಾಭಿಪ್ರಾಯ ಮರೆತು ಕಂಪನಿಯ ಉತ್ಕರ್ಷಕ್ಕೆ ಶ್ರಮಿಸಬೇಕೆಂದು ಮಾರನೆಯ ದಿನ ನಾನೂ, ಚಿಕ್ಕಬಸವರಾಜು ಅವರೂ ವಿನಂತಿಸಿಕೊಂಡು ಗಂಡಾಂತರದಿಂದ ಪಾರಾದೆವು.

ಮಂಡ್ಯ ಮೊಕ್ಕಾಂ ಮುಗಿಸಿ ದಾವಣಗೆರೆ ಮೊಕ್ಕಾಂ ಪ್ರಾರಂಭಿಸಿದೆ. ಈ ಬಾರಿ ಕಂಟ್ರಾಕ್ಟ್ ನಾಟಕಗಳು. ಕಂಟ್ರಾಕ್ಟ್‌ದಾರರು ತಮ್ಮ ಮಾತಿನಂತೆ ನಡೆಯದೆ ಕೈಕೊಟ್ಟ ಕಾರಣ ವಿಪರೀತ ತೊಂದರೆಗೆ ಒಳಗಾದೆ. ಆದರೆ ದಾವಣಗೆರೆಯ ಆಗರ್ಭ ಶ್ರೀಮಂತರೂ, ಕಲಾಭಿಮಾನಿಗಳೂ ಆದ ಶ್ರೀ ರಾಜನಹಳ್ಳಿ ಹನುಮಂತಪ್ಪನವರು ನಮ್ಮ ಕಷ್ಟನಷ್ಟಗಳಲ್ಲಿ ಭಾಗಿಗಳಾದರಲ್ಲದೆ ಕಂಪನಿಯ ಪ್ರತಿಯೊಬ್ಬ ಕಲಾವಿದರಿಗೂ ರಜತ ಕರಂಡಗಳನ್ನಿತ್ತು ಪ್ರೋತ್ಸಾಹಿಸಿದರು. ಈ ಮೊಕ್ಕಾಂ, ಕೀರ್ತಿಯನ್ನು ತಂದಿತಾದರೂ ಗಲ್ಲಾ ಪೆಟ್ಟಿಗೆಯನ್ನು ತುಂಬಲಿಲ್ಲ. ದಾವಣಗೆರೆಯಲ್ಲಾದ ನಷ್ಟವನ್ನು ಸರಿದೂಗಿಸಲು ಹುಬ್ಬಳ್ಳಿ, ಗದಗ್ ನಗರಗಳಲ್ಲಿ ಮೊಕ್ಕಾಂ ಮಾಡಿ ಮತ್ತೂ ಶೋಚನೀಯ ಸ್ಥಿತಿಗೆ ಇಳಿದೆವು. ಹುಬ್ಬಳ್ಳಿ ಮೊಕ್ಕಾಂ ಅನ್ನು 'ದಾನಶೂರ ಕರ್ಣ' ನಾಟಕದಿಂದ ಆರಂಭಿಸಿದೆ. ಕೊಟ್ಟೂರಪ್ಪನವರು ಕರ್ಣ ; ನಾನು ಕರ್ಣನ ಹೆಂಡತಿ ಸೋಮಪ್ರಭೆ. ಸಾಮಾನ್ಯವಾಗಿ ಹುಬ್ಬಳ್ಳಿಯಲ್ಲಿ ಮೊಕ್ಕಾಂ ಮಾಡಿದ ನಾಟಕಗಳು ನಷ್ಟಕ್ಕೆ ಗುರಿಯಾಗುವುದೇ ಇಲ್ಲ. ನಮ್ಮ ದುರಾದೃಷ್ಟವೋ ಏನೋ, ಹುಬ್ಬಳ್ಳಿಯ ರಸಿಕರಿಗೆ ನಮ್ಮ ಕಂಪನಿಯ ಸಂಗೀತಮಯ ನಾಟಕಗಳು ಹಿಡಿಸದೇ ಹೋದವು. ಹುಬ್ಬಳ್ಳಿಯಲ್ಲಾದ ಈ ನಷ್ಟದಿಂದ ತತ್ತರಿಸಿ ಗದಗಿಗೆ ಕ್ಯಾಂಪ್ ಹಾಕಿದೆವು. ಆರು

ನಾಟಕಗಳನ್ನೊಳಗೊಂಡ 'ಮಹಾಭಾರತ' ನಾಟಕವನ್ನು ಅಭಿನಯಿಸಿದೆವು. ಪ್ರವೇಶ ದರ ಒಂದಾಣೆ. ಹಣದ ಹೊಳೆಯನ್ನೇ ಹರಿಸಬಹುದು ಎಂಬ ನಮ್ಮ ಅಂದಾಜು ಅಲ್ಲಿ ತಲೆಕೆಳಗಾಯಿತು. ದಿನಕ್ಕೆ 500-600 ರೂ. ಕಲೆಕ್ಷನ್ ನಿರೀಕ್ಷಿಸಿದ್ದ ಸಂದರ್ಭದಲ್ಲಿ ಕೇವಲ 10-15 ರೂ.ಗಳು ಕಲೆಕ್ಷನ್ ಆಗಿ ಕಂಪನಿ ತೀರ ಶೋಚನೀಯ ಸ್ಥಿತಿಗೆ ಇಳಿಯಿತು. ಮುಳುಗಿ ಹೋಗಬೇಕಾಗಿದ್ದ ಕಂಪನಿಗೆ ಆಪದ್ಬಾಂಧವರಾಗಿ ಆಗಮಿಸಿದ ಗದಗಿನ ಸಾಹುಕಾರ ತುಪ್ಪದ ಚನ್ನಬಸಪ್ಪನವರು ಸಕಾಲಕ್ಕೆ ಆಗಮಿಸಿ ಕಂಪನಿಯ ನಟ-ನಟಿಯರಿಗೆಲ್ಲಾ ಊಟದ ವ್ಯವಸ್ಥೆಯನ್ನು ಮಾಡಿದ್ದರಿಂದ ಮುಳುಗಿ ಹೋಗಲಿಲ್ಲ. ಕಂಪನಿಯವರೆಲ್ಲಾ ಬೆಟಗೇರಿ ಎಂಬಲ್ಲಿ ಇಳಿದುಕೊಳ್ಳುವ ವ್ಯವಸ್ಥೆಯನ್ನೂ ಅವರೇ ಮಾಡಿದ್ದರಿಂದ ವಸತಿ ಸಮಸ್ಯೆಯೂ ನಮಗಾಗಲಿಲ್ಲ.

ಈ ಮೊಕ್ಕಾಂನಲ್ಲೇ ಮರೆಯಲಾಗದಂತಹ ಘಟನೆಯೊಂದು ನಡೆಯಿತು. ನಾನು ನಾಟಕಕ್ಕೆ ಹೋಗಿದ್ದ ಸಮಯ. ಅದನ್ನೇ ನನಗಾಗದವರು ಕಾಯುತ್ತಿದ್ದರು. ನನ್ನ ಹತ್ತಿರ ಒಬ್ಬ ಹುಡುಗ ಕೆಲಸ ಮಾಡಿಕೊಂಡಿದ್ದ. ಒಳ್ಳೆಯ ಹುಡುಗನೇನೋ ನಿಜ ಆ ಗೋವರ್ಧನ. ಆದರೆ ಅವನಿಗೆ ಆಗದವರು ಚಿತಾವಣೆ ಮಾಡಿದ್ದರು. ಅವರ ಮಾತಿಗೆ ಮಾರುಹೋದ ಗೋವರ್ಧನ ನನಗೆ ಕೈಕೊಟ್ಟ. ನಾನು ಇಳಿದಿದ್ದ ಮನೆಯ ಬೀಗ ಮುರಿದು ನನ್ನ ಸೂಟ್‌ಕೇಸ್‌ನಲ್ಲಿದ್ದ ಬೆಲೆಬಾಳುವ ಸೀರೆಗಳು, ನಗದು, ಆಭರಣ - ಎಲ್ಲವನ್ನೂ ಅಪಹರಿಸಿಕೊಂಡು ಹೋಗಿದ್ದ. ನಾಟಕ ಮುಗಿಸಿಕೊಂಡು ನಾನು ಮನೆಗೆ ಬಂದಾಗ ಮನೆ ಬಾಗಿಲು ತೆರೆದಿತ್ತು. ಸೂಟ್‌ಕೇಸ್ ತಲೆಕೆಳಗಾಗಿ ಬಿದ್ದಿತ್ತು. ಆ ದೃಶ್ಯ ಕಂಡು ದಿಗ್ಭ್ರಾಂತಳಾದೆ. ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು. ತಲೆಯ ಮೇಲೆ ಕೈ ಹೊತ್ತಾಗ ಕಂಪನಿಯ ಇತರ ನಟರು ಬಂದು ನನಗೆ ಸಮಾಧಾನ ಹೇಳಿದರು. ಕಳೆದು ಹೋಗಿದ್ದಕ್ಕೆ ಚಿಂತಿಸಿ ಫಲವಿಲ್ಲವೆಂದು ಎಲ್ಲವನ್ನೂ ಮರೆತು ಮತ್ತೆ ಕಾರ್ಯಮಗ್ನಳಾದೆ. ಈ ಮೊಕ್ಕಾಂನಲ್ಲಿ ನಾವು ಆರ್ಥಿಕವಾಗಿ ಚೇತರಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು ಖಾತ್ರಿಯಾದ ನಂತರ ಕಂಪನಿಯ ಜನರೊಂದಿಗೆ ವಿಚಾರ ವಿನಿಮಯ ನಡೆಸಿ ಕ್ಯಾಂಪ್ ಬದಲಾಯಿಸಲು ನಿಶ್ಚಯಿಸಿ ಕಾರ್ಯನಿಮಿತ್ತಳಾಗಿ ಬೆಂಗಳೂರಿಗೆ ಬಂದೆ. ನಂದಿಬಸಪ್ಪನವರ ಸಲಹೆ ಹಾಗೂ ನೆರವಿನಿಂದ ಶಿವಮೊಗ್ಗ ಮೊಕ್ಕಾಂ ಪ್ರಾರಂಭಿಸಿದೆ.

ಈ ಮೊಕ್ಕಾಂನಲ್ಲಿ ನಾಟಕಗಳಿಗೆ ಹೇಳಿಕೊಳ್ಳುವಂತಹ ಕಲೆಕ್ಷನ್ ಆಗದಿದ್ದರೂ ಕೈ ಕಚ್ಚಲಿಲ್ಲ. ನಮ್ಮ ಮುಂದಿನ ಕ್ಯಾಂಪ್ ಅನ್ನು ಎಳ್ಳಮಾವಾಸ್ಯೆ ಜಾತ್ರೆಯ ಪ್ರಯುಕ್ತ ತೀರ್ಥಹಳ್ಳಿಯಲ್ಲಿ ಪ್ರಾರಂಭಿಸುವುದೆಂದು ನಿಶ್ಚಯಿಸಿದೆ. ಇಲ್ಲಿ ನಮ್ಮ ನಿರೀಕ್ಷೆಗೂ ಮೀರಿ ಕಲೆಕ್ಷನ್ ಆಗುತ್ತಿದ್ದುದರಿಂದ ಕಂಪನಿಯ ಜನರೆಲ್ಲರೂ ಉತ್ಸಾಹ ತಾಳಿದರು. ಸಂತೋಷದ ದಿನವೇ ದುಃಖದ ಸಿಡಿಲು ಹೊಡೆಯುವುದಂತೆ. ಹಾಗೆಯೇ ಆಯಿತು. ಕಂಪನಿಯ ಪ್ರಮುಖ ನಟರೂ, ಕೃಷ್ಣನ ಪಾತ್ರದಲ್ಲಿ ಪ್ರೇಕ್ಷಕರ ಮೆಚ್ಚುಗೆಗೆ

ಪಾತ್ರರಾಗಿದ್ದವರೂ ಆದ ಶ್ರೀ ಚಿಕ್ಕಬಸವರಾಜು ಅವರು ಹಲವಾರು ತಿಂಗಳುಗಳಿಂದ ಬಾಕಿ ನಿಂತಿದ್ದ ತಮ್ಮ ಹಣಕ್ಕಾಗಿ ಒತ್ತಾಯ ಮಾಡತೊಡಗಿದರು. ಹಣ ಕೊಡದಿದ್ದರೆ ಬಣ್ಣವನ್ನೇ ಬಳಿದುಕೊಳ್ಳುವುದಿಲ್ಲ ಎಂದು ಪಟ್ಟು ಹಿಡಿದರು. ಕಂಪನಿಯ ಉಳಿದ ನಟರೆಲ್ಲ ಸಮಾಧಾನ ಹೇಳಿದರೂ ತಮ್ಮ ಹಠ ಬಿಡಲಿಲ್ಲ. ಅಂತಹ ಹೊತ್ತಿನಲ್ಲಿ ಕಾರ್ಯದರ್ಶಿ ದೇವಣ್ಣನವರು ಆ ಪಾತ್ರಕ್ಕೆ ಬೇರೆಯವರನ್ನು ಗೊತ್ತು ಮಾಡಿ ಎಂದು ಸಲಹೆ ಇತ್ತರು. ಕಂಪನಿಯ ಇತರ ನಟರಾರೂ ಇದಕ್ಕೆ ಒಪ್ಪಲಿಲ್ಲ. ಆಗ ನಾನು ಮಧ್ಯೆ ಪ್ರವೇಶಿಸಿ, 'ನಿಮ್ಮ ಹಣಕ್ಕೆ ನಾನು ಜವಾಬ್ದಾರಳಾಗಿ ನಿಲ್ಲುತ್ತೇನೆ. ನನ್ನ ಚಿನ್ನದ ಆಭರಣಗಳನ್ನು ಮಾರಿಯಾದರೂ ನಿಮ್ಮ ಹಣ ಕೊಡುತ್ತೇನೆ' ಎಂದು ಹೇಳಿ ಮೈಮೇಲಿದ್ದ ಅಭರಣಗಳನ್ನು ಕಳಚಿ ಅವರ ಕೈಗಿತ್ತೆ. ಆಗ ಅವರು ಆಭರಣಗಳನ್ನು ಹಿಂತಿರುಗಿಸಿ, 'ನಿಮ್ಮ ಮೇಲೆ ನನಗೆ ನಂಬಿಕೆಯಿದೆ. ಪಾತ್ರ ನಿರ್ವಹಿಸುತ್ತೇನೆ' ಎಂದರು. ಈ ಮೊಕ್ಕಾಂನಲ್ಲಿಯೇ ಕನ್ನಡ ರಂಗಭೂಮಿಯ ಖ್ಯಾತ ಕಲಾವಿದರಲ್ಲೋರ್ವರೂ, **ಅಭಿನವ ಕರ್ಣ** ಎಂಬ ಬಿರುದಿಗೆ ಪಾತ್ರರಾಗಿರುವವರೂ ಆದ **ಶ್ರೀ ಕೊಟ್ಟೂರಪ್ಪ**ನವರಿಗೆ ತೀರ್ಥಹಳ್ಳಿಯ ಕಲಾರಸಿಕರು ಸಾರ್ವಜನಿಕ ಸಮಾರಂಭವನ್ನೇರ್ಪಡಿಸಿ **ಕಲಾ ವಿಶಾರದ** ಬಿರುದನ್ನಿತ್ತು ಸನ್ಮಾನಿಸಿದರು. ಅತ್ಯಂತ ಭಾವುಕ ನಿರೂಪಣೆ, ಮೋಹಕ ಕಂಠಶ್ರೀ, ಸಜೀವ ಪಾತ್ರಾಭಿನಯ, ಉತ್ಸಾಹಪೂರ್ಣ ಕಲಾಶ್ರದ್ಧೆ - ಇವುಗಳಿಂದ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವ ಅವರನ್ನು ಸನ್ಮಾನಿಸಿದ್ದು ಕಂಪನಿಯ ವ್ಯವಸ್ಥಾಪಕಿಯಾಗಿದ್ದ ನನಗೆ ಅತ್ಯಂತ ಸಂತೋಷವನ್ನುಂಟು ಮಾಡಿತು.

ಈ ಮೊಕ್ಕಾಂನಲ್ಲಿ ನಾವು ಪ್ರದರ್ಶಿಸುತ್ತಿದ್ದ ದಾನಶೂರ ಕರ್ಣ, ಕವಿರತ್ನ ಕಾಳಿದಾಸ, ಸುಭದ್ರ ಮೊದಲಾದ ನಾಟಕಗಳು ಕಂಪನಿಯ ಕೀರ್ತಿಯನ್ನು ಹೆಚ್ಚಿಸಿದುವು. ನಾನು ಹಾಡುತ್ತಿದ್ದ 'ಮೋಹನ ಪ್ರಿಯ ಬಾರೋ, ದಯವಾ ತೋರೋ, ನೀರಜ ನೇತ್ರತೋರೆಲೋ ನಿನ್ನ ಮೋಹವೆನ್ನೊಳು, ಮಾನ್ಯನೇ ನೀನಭಯವೇಯೆ, ಏತಕೆ ಏನು ಗಾತೆಪ್ಪೆ ಕೊಂಡುಕೊಂಬುದೆನ್ನ ಮುನ್ನ, ದಾಳವಾಡೋ ಸುಂದರಾಂಗ, ಪ್ರಾಣೇಶನೇ ಪೋಗಬೇಡವೋ' . . . . ಮುಂತಾದ ಗೀತೆಗಳನ್ನು ಕೇಳಲು ಜನರು ಹಾತೊರೆಯುತ್ತಿದ್ದರು. ತೀರ್ಥಹಳ್ಳಿಯ ಯಶಸ್ವಿ ಮೊಕ್ಕಾಂ ಮುಗಿಸಿ ಶಿವಮೊಗ್ಗ ಮೊಕ್ಕಾಂ ಪ್ರಾರಂಭಿಸಿದೆ. ಇಲ್ಲಿ ಕೆಲವು ನಾಟಕಗಳನ್ನು ಮಾತ್ರ ಪ್ರದರ್ಶಿಸಿ ಹೊನ್ನಾಳಿ ಬಳಿ ಇರುವ ರಾಂಪುರಕ್ಕೆ ಬಂದೆವು. ಆಗ ರಾಂಪುರದಲ್ಲಿ ಜಾತ್ರೆ ನಡೆಯುತ್ತಿತ್ತು. ಹದಿನೈದು ದಿನ ಇಲ್ಲಿದ್ದು ಮುಂದಿನ ಮೊಕ್ಕಾಂ ಅನ್ನು ದಾವಣಗೆರೆಯಲ್ಲಿ ಪ್ರಾರಂಭಿಸಿದೆವು. ಈ ಬಾರಿ ಕಾಂಟ್ರಾಕ್ಟ್ ನಾಟಕಗಳು. ಮಾನ್ವಿ ಉಜ್ಜಪ್ಪ ಎಂಬುವರು ನಾಟಕದ ಕಂಟ್ರಾಕ್ಟುದಾರರು. ಈ ಮೊಕ್ಕಾಂ ನಂತರ ಚಿತ್ರದುರ್ಗಕ್ಕೆ ನಡೆದೆವು.

ಇಲ್ಲಿ ನಾವು ಪ್ರದರ್ಶಿಸುತ್ತಿದ್ದ ಸುಭದ್ರಾ ಪರಿಣಯ, ಕವಿರತ್ನ ಕಾಳಿದಾಸ, ಭೀಷ್ಮ ಪ್ರತಿಜ್ಞೆ, ರಾಜಸೂಯ ಯಾಗ, ದಾನಶೂರ ಕರ್ಣ, ಮಹಾಭಾರತ, ಮನ್ಮಥ ವಿಜಯ, ನಿರುಪಮ . . . . ಮೊದಲಾದ ನಾಟಕಗಳು ಕಲಾರಸಿಕರನ್ನು ತಣಿಸಿದುವು. ರಂಗಮಂದಿರ ನಿಯಮಿತ ಕಾಲಕ್ಕಿಂತಲೂ ಮುಂಚೆಯೇ ತುಂಬಿಹೋಗುತ್ತಿತ್ತು. ಸುಭದ್ರಾ ಕಲ್ಯಾಣ ಅವರಿಗೆ ಮೆಚ್ಚಿನ ನಾಟಕವಾಗಿದ್ದು, ಪೂಜೆಯ ಸಮಯದಲ್ಲಿ ಹಾಗೂ ಅರ್ಜುನ - ಸುಭದ್ರ ಸಂಗೀತ ಸಂಭಾಷಣೆಯ ಸಮದಲ್ಲಿ ಕಿವಿಗಡಚಿಕ್ಕುವಂತೆ ಕರತಾಡನಗೈಯ್ಯುತ್ತಿದ್ದರು.

ಚಿತ್ರದುರ್ಗ ಕ್ಯಾಂಪ್ ಸಮಯದಲ್ಲೇ ಕ್ವಿಟ್ ಇಂಡಿಯಾ (ಬಿಳಿಯರೇ ಭಾರತದಿಂದ ತೊಲಗಿ) ಚಳವಳಿ ಉಗ್ರ ಸ್ವರೂಪವನ್ನು ತಾಳಿದ್ದರಿಂದ ಚಳವಳಿಯ ಪ್ರಭಾವಕ್ಕೆ ಬಿದ್ದ ಕಂಪನಿಯು ಅನೇಕ ಕಷ್ಟ ನಷ್ಟಗಳನ್ನು ಎದುರಿಸಬೇಕಾಯಿತು. ಚಳವಳಿಯ ಹೆಸರಿನಲ್ಲಿ ಹಿಂಸಾಕೃತ್ಯಗಳೂ ನಡೆಯತೊಡಗಿದೆವು. ಇಂತಹ ವಾತಾವರಣದಲ್ಲಿ ನಾವು ನಾಟಕಗಳನ್ನು ಆಡಲು ಹೇಗೆ ಸಾಧ್ಯ ? ಆಡಿದರೂ ನೋಡುವವರು ಯಾರು ? ಇದರ ಬಗ್ಗೆ ಕಂಪನಿಯ ಪ್ರಮುಖ ನಟರ ಅಭಿಪ್ರಾಯ ವನ್ನು ಕೇಳಿದೆ. ಸದ್ಯಕ್ಕೆ ಕಂಪನಿಯನ್ನು ನಿಲ್ಲಿಸುವುದೇ ಒಳಿತೆಂದು ಎಲ್ಲರೂ ಅಭಿಪ್ರಾಯಪಟ್ಟಿದ್ದರಿಂದ ಚಿತ್ರದುರ್ಗ ಮೊಕ್ಕಾಂನಲ್ಲಿ ಕಂಪನಿಯನ್ನು ನಿಲ್ಲಿಸಿದೆ. ಸ್ವಾತಂತ್ರ್ಯ ಹೋರಾಟದ ಕಾವು ಸ್ವಲ್ಪ ಆರಿದ ನಂತರ ಮಂಡಳಿಯ ಆಡಳಿತಗಾರರಾಗಿದ್ದ ನಂದಿಬಸಪ್ಪನವರು ಚಿತ್ರದುರ್ಗದಿಂದ ನಾಟಕದ ಸಾಮಾನುಗಳನ್ನೆಲ್ಲಾ - ಅಂದರೆ ಪರದೆ, ಕುರ್ಚಿ, ಮೈಕ್, ಸೀನರಿಗಳು ಎಲ್ಲವನ್ನೂ ತಮ್ಮ ಕಡೆಯವರಿಂದ ಮೈಸೂರಿಗೆ ತರಿಸಿಕೊಂಡು ಗೋಡಾನ್‌ನಲ್ಲಿ ಹಾಕಿ ಭದ್ರಪಡಿಸಿದರು. ಕಂಪನಿ ನಿಂತೇ ಹೋದಂತಾಯಿತು. ಕಂಪನಿಯನ್ನೇ ಆಶ್ರಯಿಸಿದ್ದ ಬಹುಮಂದಿ ನಟರು ಮುಂದೇನು ಎಂದು ಚಿಂತಿಸಿದರು. ಗತಿಕಾಣದೆ ಒಂದು ದಿನ ಎಲ್ಲರೂ ಕೂಡಿಕೊಂಡು ನಂದಿಬಸಪ್ಪನವರನ್ನು ಕಂಡು 'ನೀವು ಕಂಪನಿಯನ್ನೇ ನಿಲ್ಲಿಸಿಬಿಟ್ಟರೆ ಇದನ್ನೇ ನಂಬಿ ಕೊಂಡಿರುವ ನಮ್ಮ ಗತಿಯೇನು ? ತಾವು ದಯವಿಟ್ಟು ಮತ್ತೆ ಕಂಪನಿ ನಡೆಸಿ ದಿಕ್ಕು ಕಾಣದಂತಾಗಿರುವ ನಮಗೆ ದಾರಿ ತೋರಬೇಕು ' ಎಂದು ಬಿನ್ನವಿಸಿಕೊಂಡರು. ನಂದಿಬಸಪ್ಪನವರು ಸ್ವಲ್ಪ ಮುನಿಸಿನಿಂದಲೇ 'ಹೋಗ್ರಯ್ಯಾ, ಇದರ ಮೇಲೆ ಹಣ ಹಾಕುವ ಬದಲು ಇನ್ಯಾವ ವ್ಯಾಪಾರಕ್ಕಾದರೂ ಹಣ ಹಾಕಿದರೆ ಒಂದಕ್ಕೆ ಎರಡರಂತೆ ಲಾಭ ಬರುತ್ತದೆ. ಕೊನೆಗೆ ನಾನು ಬೀದಿಯಿಂದ ಸ್ವಲ್ಪ ಮರಳು ತಂದು ಜೇಬಿನಲ್ಲಿ ಹಾಕಿಕೊಂಡರೂ ಅದು ಸ್ವಲ್ಪ ಕಾಲಾನಂತರ ಮುತ್ತು, ಕೆಂಪು ವಜ್ರಗಳಾಗಿರುತ್ತವೆ. ಹಾಳು ಈ ನಾಟಕ ಕಂಪನಿಗೆ ಹತ್ತು ಹನ್ನೆರಡು ಸಾವಿರ ಹಣ ತೊಡಗಿಸಿದರೂ ಒಂದು ರೂಪಾಯಿ ಕೂಡ ಹಿಂತಿರುಗಿ ಬರಲಿಲ್ಲ. ಇಂತಹ ವ್ಯಾಪಾರವನ್ನು ನಾನು ಏಕಾದರೂ ಮಾಡಬೇಕು ? ಜೊತೆಗೆ ನಿಮ್ಮನ್ನೆಲ್ಲಾ ಆಶ್ರಯ ಮಾಡಿ ಕಂಪನಿಯನ್ನು ನಡೆಸುವ

ಗೀಳು ನನಗ್ಯಾತಕ್ಕೆ ?' ಎಂದು ಖಂಡತುಂಡಾಗಿ ಉತ್ತರಿಸಿದರು. ಮುಂದೇನು ಮಾಡಬೇಕೆಂಬುದು ತಿಳಿಯದೆ ಎರಡು ವರ್ಷಗಳ ಕಾಲ ಕಂಪನಿಯ ನಟರೆಲ್ಲಾ ನಿರುದ್ಯೋಗಿಗಳಾಗಿಯೇ ಇದ್ದರು.

ಶ್ರೀ ಶ್ರೀಕಂಠೇಶ್ವರ ನಾಟಕ ಮಂಡಳಿಯ ಮಾಲೀಕರೂ, ಪ್ರಸಿದ್ಧ ಗಾಯಕ - ನಟರೂ ಆಗಿದ್ದು ಇತ್ತೀಚೆಗೆ ದಿವಂಗತರಾದ ಸಂಗೀತ ವಿದ್ವಾನ್ ಶ್ರೀಕಂಠಮೂರ್ತಿಗಳು ಅಂದು ಅತ್ಯಂತ ದಾರುಣ ಸ್ಥಿತಿಯಲ್ಲಿದ್ದರು. ಅವರು ನಂದಿಬಸಪ್ಪನವರನ್ನು ಭೇಟಿ ಮಾಡಿ 'ಸ್ವಾಮಿ, ಇಂದು ನಾನು ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದ್ದೇನೆ. ತಮ್ಮಿಂದ ಒಂದು ಮಹೋಪಕಾರವಾಗಬೇಕಾಗಿದೆ. ನನ್ನ ಮದುವೆಗೆ ಸಕಲಸಿದ್ಧತೆಗಳೂ ನಡೆದಿವೆ. ಆದರೆ ಹದಗೆಟ್ಟಿರುವ ನನ್ನ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಲು ತಾವು ಸಹಾಯಾರ್ಥ ನಾಟಕವೊಂದನ್ನು ಆಡಿಸಿಕೊಡಬೇಕು' ಎಂದು ಮನವಿ ಮಾಡಿಕೊಂಡರಂತೆ.

'ನನಗೆ ಅದೆಲ್ಲಾ ಗೊತ್ತಿಲ್ಲಾ. ಸೀನ್ಸ್, ಡ್ರೆಸ್ಸು, ಮೈಕು, ಕುರ್ಚಿ ಇತರ ಎಲ್ಲಾ ಸೌಲಭ್ಯಗಳನ್ನೂ ಮುಫತ್ತಾಗಿ ಕೊಡುತ್ತೇನೆ. ನೀನು ಎಲ್ಲಾ ಕಲಾವಿದರನ್ನೂ ಕಲೆಹಾಕಿ ನಾಟಕದ ನಂತರ ಎಲ್ಲಾ ಸಾಮಾನುಗಳನ್ನು ಜೋಪಾನವಾಗಿ ತಂದಿರಿಸುವ ಜವಾಬ್ದಾರಿ ಹೊರಬೇಕು. ಇದಕ್ಕೆ ಒಪ್ಪುವ ಹಾಗಿದ್ದರೆ ಸಾಮಾನು ತೆಗೆದುಕೊಂಡುಹೋಗು. ನಿನ್ನ ಮದುವೆಗೆ ನನ್ನದೂ ಕಾಣಿಕೆ ಸಲ್ಲಲಿ. ನೂರು ರೂ. ಟಿಕೆಟ್‌ಗಳನ್ನು ನನಗೂ ಕೊಡು' ಎಂದು ಉತ್ತರಿಸಿದರಂತೆ. ◆

# ಒಡೆತನದ ಸ್ವರ್ಣಪಾಶ

ನಂದಿಬಸಪ್ಪನವರ ಉತ್ತರದಿಂದ ಸಂತೃಪ್ತರಾದ ಶ್ರೀಕಂಠಮೂರ್ತಿಗಳು ನೇರವಾಗಿ ನಮ್ಮಲ್ಲಿಗೆ ಬಂದರು. ನಮ್ಮ ನೆರವನ್ನು ಅಪೇಕ್ಷಿಸಿ ಬಂದ ಅವರಿಗೆ ನಾವು ಏನಾದರೂ ಸಾಹಸಮಾಡಿ ಸಹಾಯ ಮಾಡಲೇಬೇಕಾಗಿತ್ತು. ಕೊಟ್ಟೂರಪ್ಪನವರೂ, ಬಸವರಾಜು ಸಹೋದರರು, ನಾನು ಈ ವಿಷಯವಾಗಿ ಬಹು ಹೊತ್ತು ಚರ್ಚಿಸಿದೆವು. ತಾಯಿ ಚಾಮುಂಡೇಶ್ವರಿಯ ಮೇಲೆ ಭಾರಹಾಕಿ ಮೈಸೂರು ಪುರಭವನದಲ್ಲಿ ಕಂಪನಿಯ ಹೆಸರಾಂತ ನಾಟಕ 'ದಾನಶೂರ ಕರ್ಣ' ನಾಟಕವನ್ನು ಪ್ರದರ್ಶಿಸುವುದೆಂದೂ, ಅದರಿಂದ ಬರುವ ಹಣವನ್ನು ಅವರಿಗೆ ಕೊಡುವುದೆಂದೂ ತೀರ್ಮಾನಿಸಿದೆವು. ಈ ವೇಳೆಗಾಗಲೇ 'ದಾನಶೂರ ಕರ್ಣ' ನಾಟಕವನ್ನು ನಾವು ಲೆಕ್ಕವಿಲ್ಲದಷ್ಟು ಬಾರಿ ಮೈಸೂರಿನಲ್ಲಿ ಪ್ರದರ್ಶಿಸಿದ್ದರಿಂದ ನಾಟಕಕ್ಕೆ ಕಲೆಕ್ಷನ್ ಆಗುತ್ತದೆಯೋ ಇಲ್ಲವೋ ಎಂದು ಹೆದರಿ ನಾಲ್ಕು ನೂರು ರೂಪಾಯಿಗಳಷ್ಟು ಟಿಕೇಟ್‌ಗಳನ್ನು ಮೊದಲೆ ಮಾರಿಬಿಟ್ಟಿದ್ದರು. ಕೊಟ್ಟೂರಪ್ಪನವರೇ ಕರ್ಣ, ಶ್ರೀಕಂಠಮೂರ್ತಿಗಳೇ ಸೋಮಪ್ರಭೆ. ಕಲೆಕ್ಷನ್ ಆಗುವುದಿಲ್ಲವೆಂದು ಹೆದರಿದ್ದ ಶ್ರೀಕಂಠಮೂರ್ತಿಯವರನ್ನು ಭಾಗ್ಯಲಕ್ಷ್ಮಿ ಕೈಬಿಡಲಿಲ್ಲ. ನಿರೀಕ್ಷೆಗೂ ಮೀರಿ ಕಲೆಕ್ಷನ್ ಆಯಿತು. ಒಂದು ಸಾವಿರದ ಇನ್ನೂರು ರೂಪಾಯಿಗಳು ಬುಕ್ಕಿಂಗ್ ಆಫೀಸಿನಲ್ಲಿಯೇ ಸಂಗ್ರಹವಾಯಿತು. ಲೆಕ್ಕವಿಲ್ಲದಷ್ಟು ಮಂದಿ ಪ್ರೇಕ್ಷಕರು ಸ್ಥಳ ದೊರೆಯದೆ ನಿರಾಶರಾಗಿ ಹಿಂತಿರುಗಿದರು.

ಎರಡು ವರ್ಷಗಳ ಕಾಲ ಕಂಪನಿ ನಿಂತಿದ್ದರೂ ಕನ್ನಡ ಕಲಾಭಿಮಾನಿಗಳು ತಂಡೋಪತಂಡವಾಗಿ ನಾಟಕಕ್ಕೆ ಆಗಮಿಸಿದುದರಿಂದ ಅಂದು ಬಣ್ಣ ಹಚ್ಚಿ ಪಾತ್ರಗಳನ್ನು ನಿರ್ವಹಿಸಿದ ನಟ-ನಟಿಯರಿಗೆ ಒಂದು ರೀತಿಯ ಆವೇಶವೇ ಬಂದಂತಾಗಿತ್ತು. ಅಂದು ಮೈಸೂರಿನ ಜನತೆ ಇತ್ತ ಪ್ರೋತ್ಸಾಹವನ್ನು ಕಂಡ ಚಿಕ್ಕಬಸವರಾಜು ಅವರು ನಾಟಕ ಮುಕ್ತಾಯವಾದ ನಂತರ ಏನೇ ಆಗಲಿ, ಕಂಪನಿಯನ್ನು ಮತ್ತೆ ಪ್ರಾರಂಭಿಸಲೇಬೇಕು ಎಂಬ ತೀರ್ಮಾನಕ್ಕೆ ಬಂದರು.

ಬರೀ ತೀರ್ಮಾನದಿಂದೇನು ಪ್ರಯೋಜನ? ಕೊಟ್ಟೂರಪ್ಪನವರಲ್ಲಿ ಸಾಕಷ್ಟು ಹಣವಿದ್ದರೂ ಅವರು ಅದನ್ನು ಕಂಪನಿಗಾಗಿ ಹಾಕಲು ಸಿದ್ಧರಿರಲಿಲ್ಲ. ಚಿಕ್ಕಬಸವರಾಜು ಅವರಿಗೆ ಹಣ ಹಾಕುವ ಶಕ್ತಿ ಇರಲಿಲ್ಲ. ಹೀಗಾಗಿ ವಿಷಯವನ್ನು ಅನೇಕ ದಿನಗಳ ಕಾಲ ಅವರು ಜಿಜ್ಞಾಸೆ ಮಾಡಿ, ಅರಮನೆ ಕಛೇರಿಯ ಎಂ.ಎಸ್. ಶೇಷಾಚಾರ್ಯರಲ್ಲಿ

ಭವಿಷ್ಯ ಕೇಳಿ, ಬಂದ ಉತ್ತರದಿಂದ ಸಂತುಷ್ಟರಾಗಿ, ಬೆಂಗಳೂರಿನಲ್ಲಿ ನಿಶ್ಚಿಂತಳಾಗಿದ್ದ ನನ್ನಲ್ಲಿಗೆ ಬಂದರು. ಚಿಕ್ಕಬಸವರಾಜು ಅವರು ಮಂಡಳಿಯನ್ನು ನಡೆಸಬೇಕೆಂಬ ಸಲಹೆಯನ್ನು ಮುಂದಿಟ್ಟರು. ಅಭಿನಯ ಗಂಧವಿಲ್ಲದವರೂ ಸಹ ನಾಟಕ ಮಂಡಳಿಗಳನ್ನು ನಡೆಸುತ್ತಿರುವಾಗ, ನಾಟಕ ಸಂಸ್ಥೆಯ ಆಡಳಿತದಲ್ಲಿ ದೀರ್ಘ ಅನುಭವ, ವ್ಯವಹಾರ ಕುಶಲತೆ ಮತ್ತು ಅನೇಕ ಶ್ರೇಷ್ಠ ನಟ - ನಟಿಯರ ಸಹಕಾರ ಹಸ್ತವನ್ನು ಹೊಂದಿರುವ ನಾವೇಕೆ ಸುಮ್ಮನೆ ಕೂರಬೇಕು ಎಂದು ವಾದಿಸಿದರು. ಶ್ರೀಕಂಠಮೂರ್ತಿಗಳ ಮದುವೆಗಾಗಿ ಹಾಕಿದ ಸಹಾಯಾರ್ಥ ನಾಟಕದಲ್ಲಿ ನಿರೀಕ್ಷೆಗೂ ಮೀರಿ ಆದ ಕಲೆಕ್ಷನ್ ಅನ್ನು ಪ್ರಸ್ತಾಪಿಸಿ, ಶ್ರೀ ಚಾಮುಂಡೇಶ್ವರಿ ನಾಟಕ ಸಭಾದ ಮೇಲೆ ಕಲಾಭಿಮಾನಿಗಳಿಟ್ಟಿರುವ ಪ್ರೀತಿ - ವಿಶ್ವಾಸ ಇನ್ನೂ ಹೋಗಿಲ್ಲ ಎಂಬುದು ಇನ್ನೂ ಸ್ಪಷ್ಟವಾಗುತ್ತದೆ. ಈಗ ಸುಮ್ಮನೆ ಕೈಕಟ್ಟಿ ಕೂಡಬಾರದು. ದಯವಿಟ್ಟು ನೀವು ಬಂದು ನಂದಿಬಸಪ್ಪನವರನ್ನು ಕಾಣಬೇಕು. ಕಂಪನಿಯನ್ನು ನಾನೇ ಸ್ವಂತವಾಗಿ ನಡೆಸುತ್ತೇನೆ, ನನಗೆ ವಹಿಸಿಕೊಡಿ ಎಂದು ಕೇಳಿದರೆ ನಂದಿಬಸಪ್ಪನವರಾಗಲಿ, ಮ್ಯಾನೇಜಿಂಗ್ ಡೈರೆಕ್ಟರ್‌ಗಳಾದ ಡಿ. ಸುಬ್ಬಣ್ಣ, ಪಿ. ನರಸಿಂಹಯ್ಯ, ರಂಗಯ್ಯನವರುಗಳಾಗಲಿ ಇಲ್ಲ ಎಂದೆನ್ನಲಾರರು. ದಯವಿಟ್ಟು ನೀವೀಗ ಮೈಸೂರಿಗೆ ಹೊರಡಲೇಬೇಕು ಎಂದು ಪಟ್ಟು ಹಿಡಿದು ಕುಳಿತರು. ಮೈಸೂರು ನಿವಾಸಿಗಳಾದ ನಿಮ್ಮಗಳ ಮಾತಿಗಿಂತಲೂ ನನ್ನ ಮಾತಿನಲ್ಲಿ ನಂದಿಬಸಪ್ಪನವರಿಗೆ ಬೆಲೆಯಿದೆಯೇ ? ಎಂದು ನಾನು ಕೇಳಿದರೂ ಸಹ ಬಸವರಾಜು ಅವರು ತಮ್ಮ ಹಠವನ್ನು ಬಿಡಲೇ ಇಲ್ಲ. ಕೊನೆಗೆ ವಿಧಿಯಿಲ್ಲದೆ ನಾನು ಒಪ್ಪಿಕೊಂಡೆ.

ಮಾರನೆಯ ದಿನ ನಾನು ಮೈಸೂರಿಗೆ ಹೊರಟು ಹೊಟೇಲಿನಲ್ಲಿ ತಂಗಿ ನಂದಿಬಸಪ್ಪನವರಿಗೆ ಹೇಳಿಕಳಿಸಿದೆ. ಅವರು ಬಂದನಂತರ ನೇರವಾಗಿ ಕಂಪನಿ ವಿಷಯವನ್ನೇ ಮಾತನಾಡತೊಡಗಿದೆ. ಅವರು ಸಿಟ್ಟಿನಿಂದ ಕಂಪನಿ ಮತ್ತೆ ಪ್ರಾರಂಭಿಸುವ ವಿಷಯ ಬಿಟ್ಟು ಬೇರೆನಾದರೂ ಮಾತನಾಡಿ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು. ಹಲವಾರು ನಿಮಿಷಗಳು ಮೌನವ್ರತವನ್ನಾಚರಿಸಿ ಕನ್ನಡ ನಾಡಿನ ಪ್ರಸಿದ್ಧ ನಾಟಕ ಸಂಸ್ಥೆಗಳಲ್ಲೊಂದು ಎಂದು ಹೆಸರಾಗಿರುವ ನಾಟಕ ಮಂಡಳಿ ತಮ್ಮ ಕಾಲದಲ್ಲಿ ನಿಂತುಹೋಯಿತು ಎಂಬ ಅಪವಾದ ಬರುವುದು ನನಗಿಷ್ಟವಿಲ್ಲ. ತಾವು ದೊಡ್ಡಮನಸ್ಸು ಮಾಡಿ ಕಂಪನಿಯನ್ನು ಮತ್ತೆ ಪ್ರಾರಂಭಿಸಬೇಕು ಎಂದುತ್ತರಿಸಿದೆ.

ನನ್ನ ಮಾತಿಗೆ ನಂದಿಬಸಪ್ಪನವರು ತಟಕ್ಕನೇ ಉತ್ತರಿಸಿ ನಾನು ಕಂಪನಿ ನಡೆಸುವ ಮಾತು ಬಿಟ್ಟುಬಿಡಿ ಎಂದರು. ಆಗ ನಾನು ಧೈರ್ಯವಾಗಿ ''ಹಾಗಾದರೆ ಕಂಪನಿಯನ್ನು ನನಗೇ ವಹಿಸಿಕೊಡಿ. ನಾನು ತಾಯಿ ಚಾಮುಂಡೇಶ್ವರಿಯ ಮೇಲೆ ಭಾರ ಹಾಕಿ ನಡೆಸುತ್ತೇನೆ'' ಎಂದೆ. ನನ್ನನ್ನು ಮೂರೂಕಾಸೂ ಕೇಳದಿದ್ದರೆ ನಾನು ಕಂಪನಿಯನ್ನು ವಹಿಸಿಕೊಡಲು ಸಿದ್ಧ ಎಂದರು. ಅಲ್ಲೇ ಇದ್ದ ಕಂಪನಿಯ ಮತ್ತೊಬ್ಬ ಡೈರೆಕ್ಟರ್

ಸುಬ್ಬಣ್ಣನವರನ್ನೂ ಸಹ ನಾನು "ಕಂಪನಿ ನಡೆಸುವುದರ ಬಗ್ಗೆ ತಮ್ಮ ಅಭಿಪ್ರಾಯ ವೇನು" ಎಂದು ಕೇಳಿದೆ. ನೀವೇ ಖುದ್ದು ನಿಂತು ಕಂಪನಿ ನಡೆಸುವುದಾದರೆ ನನಗೆ ತುಂಬಾ ಸಂತೋಷ ಎಂದರು.

ಬಂದ ಕೆಲಸವಾದುದರ ಬಗ್ಗೆ ನನಗೂ, ಚಿಕ್ಕಬಸವರಾಜು ಅವರಿಗೂ ಎಲ್ಲಿಲ್ಲದ ಸಂತೋಷವಾದರೂ, ಥಿಯೇಟರಿನ ಸಮಸ್ಯೆ ಎದುರಾಯಿತು. ಮೈಸೂರಿನಲ್ಲಿ ಇಂದು ರಾಜಕಮಲ್ ಟಾಕೀಸ್ ಇರುವ ಜಾಗದಲ್ಲಿ ಅಂದು ರತ್ನಾವಳಿ ಥಿಯೇಟರ್ ಇದ್ದಿತು. ಜಿ.ಕೆ.ಡಿ. ಭರ್ಮಯ್ಯನವರು ಮಾಲೀಕರು. ಭರ್ಮಯ್ಯನವರೊಡನೆ ಮಾತನಾಡಿದೆ. "ಮತ್ತೆ ಚಾಮುಂಡೇಶ್ವರಿ ನಾಟಕ ಸಭಾ ಆರಂಭವಾಗಲಿದೆ. ಈ ಬಾರಿ ನಾನೇ ಕಂಪನಿಯ ಆಡಳಿತವನ್ನು ವಹಿಸಿಕೊಂಡಿದ್ದೇನೆ. ನಿಮ್ಮ ಪ್ರೋತ್ಸಾಹ, ಬೆಂಬಲ ಇಂದು ನನಗೆ ಅತ್ಯಾವಶ್ಯಕ. ವೃತ್ತಿನಾಟಕ ಸಂಸ್ಥೆಗಳ ಕಾಲವೇ ಮುಕ್ತಾಯವಾಗುವಂತಹ ಇಂದಿನ ಪರಿಸ್ಥಿತಿಯಲ್ಲಿ ಹೆಣ್ಣಾದ ನಾನು ಯಾವುದೋ ಒಂದು ಧೈರ್ಯದಿಂದ ಕಂಪನಿಯ ಆಡಳಿತವನ್ನು ವಹಿಸಿಕೊಂಡಿದ್ದೇನೆ. ಕಂಪನಿಯ ಆಡಳಿತ ನಿರ್ವಾಹಕಿಯಾಗಿ ಕನ್ನಡ ರಂಗಕಲೆಗೆ ಸೇವೆ ಸಲ್ಲಿಸುವುದೇ ನನ್ನ ಜೀವನದ ಗುರಿಯಾಗಿದೆ. ನಿಮ್ಮ ಸಹಕಾರ, ಬೆಂಬಲವಿದ್ದಲ್ಲಿ ನನ್ನ ಆಕಾಂಕ್ಷೆ ನೆರವೇರುವುದರಲ್ಲಿ ಯಾವ ಸಂಶಯವೂ ಇಲ್ಲ" ಎಂದೆ. "ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಚಿರವಾಗಿ ಉಳಿಯುವಂತಹ ಕೆಲಸವನ್ನು ದಿಟ್ಟತನದಿಂದ ಕೈಗೊಂಡಿರುವ ನಿಮಗೆ ನಮ್ಮ ಸಹಕಾರ ಹಸ್ತ ಸದಾ ಸಿದ್ಧ" ಎಂದು ಭರ್ಮಯ್ಯನವರು ಕಳಕಳಿಯಿಂದ ಮಾತನಾಡಿದರು. ಥಿಯೇಟರಿನ ಸಮಸ್ಯೆಯೂ ಬಗೆಹರಿದಂತಾದುದರಿಂದ ನಾನೂ, ಚಿಕ್ಕಬಸವರಾಜು ಅವರೂ ಹಿರಿಹಿರಿ ಹಿಗ್ಗಿದೆವು. ಇನ್ನು ಕಂಪನಿಯ ಪ್ರಾರಂಭಕ್ಕೆ ಉಳಿದದ್ದು ಒಂದೇ ಒಂದು ಕೆಲಸ - ಒಳ್ಳೆಯ ದಿನ, ಒಳ್ಳೆಯ ಮುಹೂರ್ತ. ಮತ್ತೆ ಶೇಷಾಚಾರ್ಯರಲ್ಲಿ ಮುಹೂರ್ತ ಕೇಳಿ 1943ರ ಮೇ ತಿಂಗಳಿನಲ್ಲಿ ಒಂದು ಶುಭ ದಿನದಲ್ಲಿ ಎರಡು ವರ್ಷಗಳಿಗೂ ಮಿಗಿಲಾಗಿ ನಿಂತುಹೋಗಿದ್ದ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾವನ್ನು ಮತ್ತೆ ಪ್ರಾರಂಭಿಸಿದೆವು. ನಿಲ್ಲಿಸಿದ ಕಂಪನಿ ಮತ್ತೆ ಪ್ರಾರಂಭವಾಗಿದ್ದು ಕಂಪನಿಯ ನಟ-ನಟಿಯರಿಗೆಲ್ಲರಿಗೂ ಅಪಾರ ಸಂತೋಷವನ್ನು ಉಂಟು ಮಾಡಿತು.

ಮೊದಲ ನಾಟಕವನ್ನಾಗಿ 'ದಾನಶೂರ ಕರ್ಣ' ವನ್ನು ಆಯ್ಕೆ ಮಾಡಿಕೊಂಡೆವು. ಕಲಿಯುಗದ ಕರ್ಣ ಎಂದು ಖ್ಯಾತನಾಮರಾಗಿದ್ದ ಕೊಟ್ಟೂರಪ್ಪನವರು ಕರ್ಣನ ಪಾತ್ರವನ್ನು ನಿರ್ವಹಿಸಿದರು. ಸೋಮಪ್ರಭೆಯ ಪಾತ್ರ ನನ್ನದಾಗಿತ್ತು. ಕೃಷ್ಣನ ಪಾತ್ರ ಚಿಕ್ಕಬಸವರಾಜು ಅವರದು. ಜಿ. ವಿ. ಕೃಷ್ಣಮೂರ್ತಿಯವರು ಭೀಮ, ಎಂ.ಬಿ. ಬಸವರಾಜು ಅವರು ಅರ್ಜುನ. ನಾಗವರ್ಮ ಪಂಡಿತರು, ಸುರೇಂದ್ರನಾಥ ಪಂಡಿತರು, ಜಿ.ವಿ. ರುದ್ರಪ್ಪನವರು, ವೆಂಕಟೇಶಯ್ಯನವರು, ಕೇಶವಯ್ಯನವರು,

ಎಂ.ಪಿ. ರಾಮರಾಯರು. ಶ್ರೀಕಂಠಮೂರ್ತಿಗಳು, ಸಂಗೀತ ವಿದುಷಿ ಸೋನೂಬಾಯಿ, ಲಕ್ಷ್ಮೀಬಾಯಿ, ನಾಗರತ್ನಮ್ಮ (ಸ್ತ್ರೀ ನಾಟಕ ಮಂಡಲಿ) ಸರೋಜಾ ಮೊದಲಾದ ಹೆಸರಾಂತ ಕಲಾವಿದರೂ-ಕಲಾವಿದೆಯರೂ ಪ್ರಮುಖ ಪಾತ್ರಗಳನ್ನು ನಿರ್ವಹಿಸತೊಡಗಿದರು. ಮೈಸೂರಿನಲ್ಲಿದ್ದ ಆಕಾಶವಾಣಿಯ ವಾದ್ಯವೃಂದದವರು ಸ್ವಯಂಪ್ರೇರಿತರಾಗಿ ನಾಟಕಗಳಲ್ಲಿ ಭಾಗವಹಿಸತೊಡಗಿದರು.

ನಾಟಕಗಳಿಗೆ ಒಳ್ಳೆಯ ಕಲೆಕ್ಷನ್ ಆಗತೊಡಗಿತು. ದಾನಶೂರಕರ್ಣ ದಿನೇ ದಿನೇ ಜನಪ್ರಿಯತೆಯ ಹಾದಿಯಲ್ಲಿ ನಡೆದು, ಮಂಡಳಿಯ ಕೀರ್ತಿಯನ್ನು ಹೆಚ್ಚಿಸಿತು. ಈ ಒಂದೇ ನಾಟಕ ಕೆಲವಾರು ತಿಂಗಳುಗಳಪರ್ಯಂತ ಏಕಸಮನಾಗಿ ಪ್ರದರ್ಶಿತವಾಯಿತು. ನಂತರ ವೀರ ಅಭಿಮನ್ಯು, ಮಹಾಭಾರತ, ಭೀಷ್ಮ ಪ್ರತಿಜ್ಞೆ, ಸಂತ ತುಕಾರಾಂ ಮೊದಲಾದ ನಾಟಕಗಳನ್ನೂ ಅಭಿನಯಿಸತೊಡಗಿದೆವು.

ಪ್ರಾರಂಭದಲ್ಲೇ ಕಂಪನಿಯವರಿಗೆಲ್ಲಾ ಸಂಬಳ ಸಾರಿಗೆ, ಎಲ್ಲಾ ಕೊಟ್ಟಿದ್ದರಿಂದ ಕಂಪನಿ ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸಿತು. ಆದರೆ ಎರಡು ತಿಂಗಳು ಕಳೆದ ನಂತರ ಕಂಪನಿ ಚೇತರಿಸಿಕೊಂಡಿತು. ಕಂಪನಿಯಿಂದ ಹೊರಗುಳಿದಿದ್ದ ಒಳ್ಳೊಳ್ಳೆಯ ನಟ-ನಟಿಯರನ್ನೂ ಬರಮಾಡಿಕೊಂಡು ಕನ್ನಡ ಕಲಾರಸಿಕರ ಹೃದಯದಲ್ಲಿ ಹಚ್ಚ ಹಸಿರಾಗಿ ಉಳಿಯುವಂತಹ ಶ್ರೇಷ್ಠ ನಾಟಕಗಳನ್ನು ಪ್ರಯೋಗ ಮಾಡಲೇಬೇಕೆಂಬ ಛಲದಿಂದ, ಶೃಂಗಾರ ನವರಸ ಭರಿತವಾದ ಕಥಾವಸ್ತುಗಳನ್ನೊಳಗೊಂಡ ಶಾಕುಂತಲಾ, ಕವಿರತ್ನ ಕಾಳಿದಾಸ, ವಿರಾಟಪರ್ವ, ಮನ್ಮಥ ವಿಜಯ, ತಿಲೋತ್ತಮೆ, ಪ್ರಹ್ಲಾದ ಚರಿತ್ರೆ, ನಿರುಪಮ, ಗುಲೇಬಕಾವಲಿ, ರತ್ನಾವಳಿ-ಮೊದಲಾದ ನಾಟಕಗಳನ್ನು ಆರಿಸಿಕೊಂಡೆ. ಈ ನಾಟಕಗಳಿಗೆ ಉತ್ತಮ ಸಂಗೀತವೇ ಮೂಲವಸ್ತುವಾದದ್ದರಿಂದ ಅಭಿನಯ ಹಾಗೂ ಸಂಗೀತ ಕಲೆಯಲ್ಲಿ ವಿಶೇಷ ಪ್ರತಿಭೆಯನ್ನು ಹೊಂದಿದ್ದ ಜಿ. ನಾಗೇಶರಾಯರನ್ನೂ, ಹೊಳಲಿ ಸುಬ್ರಮಣ್ಯ ಶಾಸ್ತ್ರಿಗಳನ್ನೂ, ರಾಮರಾಜೇ ಅರಸರನ್ನೂ, ಎಂ.ಜಿ. ಮರಿರಾವ್, ದಿವಂಗತ ರಂಗನಾಥಶರ್ಮ ಮೊದಲಾದವರನ್ನೂ ಕಂಪನಿಗೆ ಆಹ್ವಾನಿಸಿದೆ. ವರದಾಚಾರ್ಯರ ಶಿಷ್ಯರೂ, ಅವರನ್ನು ಅನುಕರಿಸಿ ಪದ್ಯಗೀತೆಗಳನ್ನು ಹಾಡುತ್ತಿದ್ದ ಹೆಸರಾಂತ ಗಾಯಕ ನಟರಾದ ಜಿ. ನಾಗೇಶರಾಯರಿಗೆ ಈ ಎಲ್ಲಾ ನಾಟಕಗಳಲ್ಲೂ ಪ್ರಮುಖ ಪಾತ್ರಗಳನ್ನು ಕೊಡಲಾಯಿತು. ಮೈಸೂರಿನ ನಾಗರಿಕ ಪ್ರೇಕ್ಷಕರು ದಿನವಹಿ ತಂಡೋಪತಂಡವಾಗಿ ಬಂದು ನಾಟಕಗಳನ್ನು ವೀಕ್ಷಿಸಿ ಮೆಚ್ಚುಗೆ ಸೂಚಿಸತೊಡಗಿದರು. ನಾಗೇಶರಾಯರು ಮತ್ತು ನಾನು ಹಾಡುತ್ತಿದ್ದ ಹಾಡುಗಳು ಪ್ರಧಾನ ಆಕರ್ಷಣೆಯಾಗಿದ್ದವು. ನಾಗೇಶರಾಯರು ಸಂಗತಿಗಳನ್ನು ಸೇರಿಸುತ್ತಾ 15-20 ನಿಮಿಷಗಳ ಕಾಲ ಹಾಡುತ್ತಿದ್ದಾಗ ಪ್ರೇಕ್ಷಕ ವೃಂದ ಅತ್ಯಂತ ಆಸಕ್ತಿಯಿಂದ ಗಾನಮಗ್ನರಾಗಿ ಬಿಡುತ್ತಿದ್ದರು.

ಕವಿರತ್ನ ಕಾಳಿದಾಸವಂತೂ ಪ್ರೇಕ್ಷಕರ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು. ಈ ನಾಟಕದಲ್ಲಿ ನಾನು ಚೂಡಾಮಣಿ, ನಾಗೇಶರಾಯರು ಕುರುಬ ಮತ್ತು ಕಾಳಿದಾಸ. ಅನೇಕ ಸಾರಿ ಅಭಿನಯಿಸಲ್ಪಟ್ಟರೂ ಈ ನಾಟಕದ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಲೇ ಹೋಯಿತು. ಗಲ್ಲಾಪೆಟ್ಟಿಗೆ ದೃಷ್ಟಿಯಿಂದಲೂ ಈ ನಾಟಕ ಗಮನಾರ್ಹವೆನಿಸಿತು. ಪ್ರೇಕ್ಷಕರನ್ನು ತಲ್ಲೀನರನ್ನಾಗಿಸಿ ಪುನಃ ಪುನಃ ಆಕರ್ಷಿಸುವಷ್ಟು ಉನ್ನತ ಮಟ್ಟದ ಅಭಿನಯದಿಂದಾಗಿ ನಾವು ಮೈಸೂರಿನಲ್ಲಿಯೇ ಎಂಟು ತಿಂಗಳಪರ್ಯಂತ ನಿಲ್ಲಲು ಸಾಧ್ಯವಾಯಿತು.

ಕನ್ನಡ ರಂಗಭೂಮಿಯ ಅಪೂರ್ವ ನಿಧಿ ಎನಿಸಿದ್ದ ಹಾಸ್ಯ ಚಕ್ರವರ್ತಿ ಹಿರಣ್ಣಯ್ಯನವರು ಮೈಸೂರಿನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದಾಗ ನನ್ನನ್ನೂ ಚಿಕ್ಕಬಸವರಾಜು ಅವರನ್ನೂ ಭೇಟಿಮಾಡಿ ಹೇಳಿದ ಮಾತು ಇಂದಿಗೂ ನೆನಪಾಗುತ್ತಿದೆ. ನಾವು ಟೌನ್‌ಹಾಲ್‌ನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿರುವ ವೇಳೆಯಲ್ಲೇ ಅವರೂ ತಮ್ಮ ನಾಟಕ ಮಂಡಳಿಯೊಡನೆ ಮೈಸೂರಿಗೆ ಬರಲು ಸಿದ್ಧತೆ ನಡೆಸಿದ್ದರು. ಒಂದು ನಾಟಕ ಮಂಡಳಿ ಮೊಕ್ಕಾಂ ಮಾಡಿರುವಾಗ ಮತ್ತೊಂದು ನಾಟಕ ಮಂಡಳಿ ಅದೇ ಸ್ಥಳದಲ್ಲಿ ಮೊಕ್ಕಾಂ ಮಾಡುವುದು ಸಮಂಜಸವಲ್ಲವೆಂದು ಬಗೆದ ಅವರು 'ಏನಮ್ಮ, ನಾನು ಮೈಸೂರಿಗೆ ಬಂದು ನಾಟಕಗಳನ್ನು ಪ್ರದರ್ಶಿಸಬೇಕೆಂದು ಇಚ್ಛಿಸಿದ್ದೇನೆ. ನಾವು ಮೊಕ್ಕಾಂ ಮಾಡಿರುವ ವೇಳೆಯಲ್ಲೇ ಇವನು ಉದ್ದೇಶಪೂರ್ವಕವಾಗಿ ಇಲ್ಲಿಗೆ ಬಂದು ನಾಟಕಗಳನ್ನು ಪ್ರದರ್ಶಿಸುತ್ತಿದ್ದಾನೆ ಎಂದು ನೀವು ಭಾವಿಸಬಾರದು. ನಿಮ್ಮ ಅಭ್ಯಂತರವಿಲ್ಲದಿದ್ದರೆ ಮಾತ್ರ ನಾಟಕ ಮಂಡಳಿಯನ್ನು ಕರೆದುಕೊಂಡು ಬರುತ್ತೇನೆ. ಇದರ ಬಗ್ಗೆ ನೀವು ಸ್ಪಷ್ಟವಾಗಿ ಹೇಳಿ. ದಾಕ್ಷಿಣ್ಯಕ್ಕೆ ಮಾತನಾಡಬೇಡಿ' ಎಂದರು. ಅದಕ್ಕೆ ನಾನು 'ಸ್ವಾಮಿ, ಒಂದೇ ಊರಿನಲ್ಲಿ ಹತ್ತಾರು ಚಿತ್ರಮಂದಿರಗಳಿದ್ದರೂ ಅದರದರ ಯೋಗ್ಯತೆಗೆ ತಕ್ಕಂತೆ ಕಲೆಕ್ಷನ್ ಆಗುವಂತೆ ನಮಗೆ ಎಷ್ಟು ಪ್ರಾಪ್ತಿಯಿದೆಯೋ ಅಷ್ಟೇ ಕಲೆಕ್ಷನ್ ಆಗುತ್ತದೆ. ಅದಕ್ಕೆ ನಾವು ಏತಕ್ಕೆ ಭಯಪಡಬೇಕು. ಇಂದು ನನಗೆ ಎಲ್ಲಕ್ಕೂ ಮಿಗಿಲಾಗಿ ನಿಮ್ಮ ವಿಷಯದಲ್ಲಿ ಅತ್ಯಂತ ಗೌರವ, ಸಂತೋಷ ಅಚ್ಚರಿ ಎಲ್ಲ ಏಕಕಾಲದಲ್ಲಿ ಉಂಟಾಯಿತು. ಕಾರಣ : ಕನ್ನಡ ನಾಡಿನ ಹೆಸರಾಂತ ಹಾಸ್ಯನಟರೂ, ನಾಟಕಕಾರರೂ ಕಂಪನಿಯ ಒಡೆಯರೂ ಆದ ತಾವು ಈ ಮಾತುಗಳನ್ನಾಡಿದುದು ತಮ್ಮ ದೊಡ್ಡತನವನ್ನು ತೋರುತ್ತದೆ. ನೀವು ನಾಟಕ ಮಂಡಲಿಯೊಡನೆ ಮೈಸೂರಿಗೆ ಬಂದು ಮೊಕ್ಕಾಂ ಮಾಡಲು ನನ್ನ ಅಭ್ಯಂತರವೇನೂ ಇಲ್ಲ' ಎಂದು ಹೇಳಿದೆ. ಅವರು ತಮ್ಮ ಮಂಡಲಿಯೊಡನೆ ಮೈಸೂರು ಮೊಕ್ಕಾಂ ಪ್ರಾರಂಭಿಸಿ ದೇವದಾಸಿ, ಎಚ್ಚಮ ನಾಯಕ ಮತ್ತು ಸದಾರಮೆ ನಾಟಕಗಳನ್ನು ಪ್ರದರ್ಶಿಸತೊಡಗಿದರು. ಅವರ ಮಂಡಲಿಯಲ್ಲಿ ಆಗ್ಗೆ ಬಳ್ಳಾರಿ ಲಲಿತಾ, ರತ್ನಮಾಲಾ, ಟಿ. ನರಸೀಪುರ ಚಂದ್ರಮ್ಮ, ಕೆ. ಅಚ್ಯುತರಾವ್ ಮೊದಲಾದವರಿದ್ದರು.

ಎರಡು ಮಂಡಲಿಗಳಿಗೂ ಕಲಾರಸಿಕರು ಪ್ರೋತ್ಸಾಹವೀಯತೊಡಗಿದರು. ನಮ್ಮ ನಾಟಕಕ್ಕೆ ಆ ಕಂಪನಿಯ ನಟರೂ, ಅವರ ನಾಟಕಕ್ಕೆ ನಮ್ಮ ಮಂಡಲಿಯ ನಟರೂ ಹೋಗಿ ಬರುತ್ತಿದ್ದರು. ಎರಡು ನಾಟಕ ಮಂಡಲಿಗಳೂ ಅನ್ಯೋನ್ಯವಾಗಿದ್ದುದು ಮೈಸೂರಿನ ಕಲಾರಸಿಕರ ಮನೆಮಾತಾಯಿತು.

ಮೈಸೂರಿನ ಯಶಸ್ವಿ ಮೊಕ್ಕಾಂ ಮುಗಿಸಿದ ನಂತರ ನಾವು ಆರಸೀಕೆರೆ ಮೊಕ್ಕಾಂ ಪ್ರಾರಂಭಿಸಿದೆವು. ಇಲ್ಲಿ ಕಂಟ್ರಾಕ್ಟ್ ನಾಟಕ. 3-4 ನಾಟಕಗಳನ್ನಾಡಿರಬಹುದು. ನಾನು ಇದ್ದಕ್ಕಿದ್ದಂತೆ ಮಲೇರಿಯಾ ರೋಗಕ್ಕೆ ತುತ್ತಾಗಿ ಪಾತ್ರ ವಹಿಸುವ ಸ್ಥಿತಿಯಲ್ಲಿ ಇರದಿದ್ದುದರಿಂದ ಬೆಂಗಳೂರಿಗೆ ಹೊರಟು ಬಂದು ಆಸ್ಪತ್ರೆ ಸೇರಿದೆ. ಕಂಪನಿಯ ಜವಾಬ್ದಾರಿ ಬಸವರಾಜು ಸೋದರರ ಮೇಲೆ ಬಿದ್ದಿತು. ನಾನು ಬೆಂಗಳೂರಿಗೆ ಬಂದನಂತರ ಕಂಪನಿಯ ಪ್ರಮುಖ ಪಾತ್ರಧಾರಿಣಿ ಸೋನೂಬಾಯಿ ಅವರು, ಇತರ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಶ್ರೀಕಂಠಮೂರ್ತಿಗಳೂ ಕಂಪನಿಯಿಂದ ನಿರ್ಗಮಿಸಿದರು. ಇದರಿಂದಾಗಿ ಕಂಪನಿಯ ಪ್ರಮುಖ ನಾಯಕ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಜಿ. ನಾಗೇಶರಾಯರ ಜೊತೆಯಲ್ಲಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸುವವರೇ ಇಲ್ಲದಂತಾಯಿತು. ಕಂಪನಿಯ ಗಲ್ಲಾಪೆಟ್ಟಿಗೆಯ ನಾಟಕಗಳಲ್ಲೊಂದೆನಿಸಿದ್ದ ಕಾಳಿದಾಸ ನಾಟಕದ ದಿನವಂತೂ ಸ್ತ್ರೀ ಪಾತ್ರಧಾರಿಣಿಯೋರ್ವಳನ್ನು ಕರೆತರಲು ಚಿಕ್ಕಬಸವರಾಜು ಅವರು ಬೆಂಗಳೂರಿಗೆ ಬಂದರು. ಆದರೆ ಸರಿಯಾದವರು ದೊರಕದುದರಿಂದ ಅರಸೀಕೆರೆಗೆ ಮರಳಬೇಕಾಯಿತು. ರಾತ್ರಿ ನಾಟಕ ಜರುಗಲೇ ಬೇಕು. ಕಂಪನಿಯ ಇತರ ನಟರೆಲ್ಲಾ ನಾಯಕಿಯ ಪಾತ್ರ ವಹಿಸುವವರು ಯಾರು ಎಂದು ಯೋಚಿಸತೊಡಗಿದರು. ಇನ್ನೇನು ನಾಗೇಶರಾಯರ ಜೊತೆ ಅಭಿನಯಿಸುವ ಸ್ತ್ರೀ ಪಾತ್ರಧಾರಿಣಿ ರಂಗಮಂಚಕ್ಕೆ ತೆರಳಬೇಕು ಎಂಬುವ ವೇಳೆಗೆ ಚಿಕ್ಕಬಸವರಾಜು ಅವರೇ ಪ್ರಮುಖ ಸ್ತ್ರೀಪಾತ್ರ ಚೂಡಾಮಣಿಯ ಪಾತ್ರಕ್ಕೆ ಸಜ್ಜಾಗಿ ರಂಗಮಂಚಕ್ಕೆ ಧಾವಿಸಿದರು. ನಾಗೇಶರಾಯರು ತಮ್ಮ ಪಾತ್ರದಲ್ಲಿ ತನ್ಮಯರಾಗಿದ್ದರು. ಬಸವರಾಜು ಅವರು ರಂಗಮಂದಿರಕ್ಕೆ ಪ್ರವೇಶಿಸಿದ ಕೂಡಲೇ ನಾಗೇಶರಾಯರು 'ಮನೋಹರೆ, ವಿಕಹಾನಲನ ದುರಿಕಾಶಮನ, ಮನೋಹರೆ ' ಎಂದು ಹಾಡನ್ನು ಹೇಳಿಕೊಂಡು ಚೂಡಾಮಣಿಯ ಕೈಹಿಡಿದಾಗಲೇ ಗೊತ್ತಾದುದು ಆಕೆ ಚಿಕ್ಕಬಸವರಾಜು ಎಂದು. ಸ್ತ್ರೀ ಪಾತ್ರಗಳನ್ನು ಅಷ್ಟು ನೈಜವಾಗಿ ಅಭಿಯಿಸುವ ಚಾತುರ್ಯ ಬಸವರಾಜು ಅವರಿಗಿದ್ದಿತು. ನನ್ನ ಗೈರುಹಾಜರಿಯಲ್ಲಿ ಸದಾರಮೆ, ಮನ್ಮಥ ವಿಜಯ, ಬಕಾವಲಿ - ಈ ನಾಟಕಗಳಲ್ಲೂ ಚಿಕ್ಕಬಸವರಾಜು ಅವರು ಸ್ತ್ರೀ ಪಾತ್ರಗಳನ್ನು ವಹಿಸಿ ಪ್ರಮುಖ ಸ್ತ್ರೀ ಪಾತ್ರಧಾರಿಣಿಯ ಕೊರತೆಯನ್ನು ತುಂಬಿದರು. ಅಷ್ಟರಲ್ಲಿ ನನ್ನ ಆರೋಗ್ಯ ಸುಧಾರಿಸಿ ಮತ್ತೆ ಮಂಡಳಿಗೆ ಬಂದೆ. ಈ ಮೊಕ್ಕಾಂನಲ್ಲೇ ಈಗ ಚಿತ್ರರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಗುಬ್ಬಿ ಕಂಪನಿಯಲ್ಲಿದ್ದ ನಟ ಬಿ. ರಾಘವೇಂದ್ರರಾಯರು ಬಂದು

ಸೇರಿದರು. ನಾನು ಪಾತ್ರ ವಹಿಸಲಿಲ್ಲವೆಂಬ ಕಾರಣಕ್ಕಾಗಿ ಕಂಟ್ರಾಕ್ಟ್‌ದಾರರಿಗೆ ಅಸಮಾಧಾನವಾದರೂ ಅರಸೀಕರೆಯ ಸಾಹುಕಾರು ನರಸಿಂಹಶೆಟ್ಟರ ಸಮಾಧಾನದ ಮಾತುಗಳಿಂದ ಸುಮ್ಮನಾದರು. ಅರಸೀಕೆರೆ ಮೊಕ್ಕಾಂ ಮುಕ್ತಾಯ ಮಾಡಿ ನಮ್ಮ ಕಂಪನಿ ಬೇಲೂರಿಗೆ ಬಂದನಂತರ ಕೆ. ಹಿರಣ್ಣಯ್ಯನವರು ಅಲ್ಲಿ ಮೊಕ್ಕಾಂ ಪ್ರಾರಂಭಿಸಿ ನಮ್ಮ ಥಿಯೇಟರಿನಲ್ಲಿ ನಾಟಕಗಳನ್ನು ಪ್ರದರ್ಶಿಸತೊಡಗಿದರು. ಬೇಲೂರಿನಲ್ಲಿಯೂ ಕಂಟ್ರಾಕ್ಟ್ ನಾಟಕ. ಇಪ್ಪತ್ತು ನಾಟಕಗಳನ್ನು ಮಾತ್ರ ಕಂಟ್ರಾಕ್ಟ್ ತೆಗೆದುಕೊಂಡಿದ್ದರು. ಪ್ರಥಮ ನಾಟಕ ದಾನಶೂರ ಕರ್ಣ. ಕಂಟ್ರಾಕ್ಟ್‌ದಾರರು ಆರು ಆಣೆ ಇದ್ದ ನೆಲಕ್ಕೆ ಹನ್ನೆರಡಾಣೆ ಮಾಡಿದರು. ನಾಟಕ ನೋಡಲು ಹಾತೊರೆಯುತ್ತಿದ್ದ ಪ್ರೇಕ್ಷಕರು ಇದರಿಂದ ರೊಚ್ಚಿಗೆದ್ದರು. ಹೆಚ್ಚಿರುವ ಹಣವನ್ನು ಇಳಿಸದ ಹೊರತು ನಾಟಕಕ್ಕೆ ಬರುವುದಿಲ್ಲವೆಂದು ನಿರ್ಧಾರ ಕೈಗೊಂಡರು. ಕಂಟ್ರಾಕ್ಟ್‌ದಾರರು ಮಾತ್ರ ನಮಗೆ ನಷ್ಟವಾದರೂ ಚಿಂತೆಯಿಲ್ಲ, ನಾಟಕದ ಬೆಲೆಯನ್ನು ಇಳಿಸುವುದಿಲ್ಲವೆಂದರು. ದಾನಶೂರ ಕರ್ಣ ನಾಟಕದಲ್ಲಿ ಬರುವ ದರ್ಬಾರ್ ಸೀನ್ ಒಂದಕ್ಕೆ ಹನ್ನೆರಡಾಣೆ ಕೊಡಬೇಕು ಎಂಬುದು ಅವರ ತೀರ್ಮಾನವಾಗಿತ್ತು. ಸರಿ, ಕಂಟ್ರಾಕ್ಟ್‌ದಾರರ ಸೂಚನೆಯಂತೆ ಬರಿದಾದ ರಂಗಮಂದಿರದಲ್ಲಿಯೇ ನಾಟಕ ಪ್ರಾರಂಭವಾಯಿತು. ಆದರೆ ನಾಟಕ ಪ್ರಾರಂಭವಾದ ಸ್ವಲ್ಪ ಹೊತ್ತಿನಲ್ಲಿಯೇ ಪ್ರೇಕ್ಷಕ ವೃಂದ ತಮ್ಮ ಹಟ ಮರೆತು ನಾಟಕಕ್ಕೆ ಧಾವಿಸಿದರು. 800 ರೂ.ಗಳಿಗೂ ಮಿಗಿಲಾಗಿ ಹಣ ಸಂಗ್ರಹವಾಯಿತು. ಕಂಟ್ರಾಕ್ಟ್‌ದಾರರು ಸಿಮೆಂಟ್ ಚೀಲಕ್ಕೆ ಹಣ ತುಂಬಿದರು.

ಈ ವೇಳೆಗೆ ನನ್ನ ಆರೋಗ್ಯಭಾಗ್ಯ ಸುಧಾರಿಸಿದ್ದರಿಂದ ನಗರದ (ಚಾಮರಾಜನಗರ) ಕ್ಯಾಂಪ್ ಮಾಡಲು ಚಿಕ್ಕಬಸವರಾಜು ಅವರು ಕಾರ್ಯೋನ್ಮುಖರಾದರು. ಅಭಿನಯ ಭಕ್ತ ಶಿರೋಮಣಿ ಸಿ.ಬಿ. ಮಲ್ಲಪ್ಪನವರ ಕಂಪನಿಯಲ್ಲಿದ್ದ ನಟಿ ಕಮಲಮ್ಮನವರನ್ನು ಈ ಮೊಕ್ಕಾಂನಲ್ಲಿ ನಾಟಕಗಳಲ್ಲಿ ಪಾತ್ರ ವಹಿಸಲು ಬರಮಾಡಿಕೊಂಡೆವು.

ಇದು 1944ನೇ ಇಸವಿಯ ಮಾತು. ಎರಡನೇ ಮಹಾಯುದ್ಧದ ವೇಳೆ. ಆಗ ಶಿವನಸಮುದ್ರದ ವಿದ್ಯುದ್ಗಾರದ ಮೇಲೆ ಬಾಂಬ್ ಬೀಳಬಹುದೆಂಬ ಸುದ್ದಿ ಇದ್ದುದರಿಂದ ವಿದ್ಯುತ್ ಸರಬರಾಜೇ ಸಮರ್ಪಕವಾಗಿ ನಡೆಯುತ್ತಿರಲಿಲ್ಲ. ಅಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲೇ ಚಾಮರಾಜನಗರದಲ್ಲಿ ಬೀಡುಬಿಟ್ಟೆವು. ನನಗೆ ತಂಗಲು ಟ್ರಾವಲರ್ಸ್ ಬಂಗಲೊವಿನಲ್ಲಿ ವ್ಯವಸ್ಥೆಯಾಗಿದ್ದಿತು. ಪ್ರತಿದಿನವೂ ರಾತ್ರಿ ಹತ್ತೂವರೆ ಗಂಟೆಗೆ ನಾಟಕ ಪ್ರಾರಂಭ. ಯಾವ ಒಂದು ಶುಭ ಮುಹೂರ್ತದಲ್ಲಿ ನಾವು ಅಲ್ಲಿ ಕ್ಯಾಂಪ್ ಪ್ರಾರಂಭಿಸಿದೆವೋ ಏನೋ, ರಾತ್ರಿ ಹತ್ತೂವರೆಗೆ ಪ್ರಾರಂಭವಾಗುವ ನಾಟಕಕ್ಕೆ ಪ್ರೇಕ್ಷಕರು ಎಂಟೂವರೆಗೇ ಸ್ಥಳ ಕಾಯ್ದಿರಿಸಿಕೊಳ್ಳುತ್ತಿದ್ದರು. ನಾಟಕ ಪ್ರಾರಂಭವಾಗುವುದಕ್ಕೆ ಮೊದಲೇ ಥಿಯೇಟರ್ ಭರ್ತಿಯಾಗಿರುತ್ತಿತ್ತು. ಸುಭದ್ರಾ,

ದಾನಶೂರ ಕರ್ಣ, ಭಕ್ತ ವಿಜಯ, ಕವಿರತ್ನ ಕಾಳಿದಾಸ, ರಾಜಸೂಯ ಯಾಗ, ಮಹಾಭಾರತ, ಭೀಷ್ಮ ಪ್ರತಿಜ್ಞೆ, ಮನ್ಮಥ ವಿಜಯ, ನಿರುಪಮ - ಇನ್ನೂ ಅನೇಕ ನಾಟಕಗಳನ್ನು ಪ್ರದರ್ಶಿಸತೊಡಗಿದೆವು.

ಆರು ತಿಂಗಳ ಕಾಲ ಚಾಮರಾಜನಗರದಲ್ಲಿ ಬೀಡುಬಿಟ್ಟೆವು. ನಮ್ಮ ನಾಟಕಗಳಿಗೆ ಒಳ್ಳೆಯ ಕಲೆಕ್ಷನ್ ಆಗತೊಡಗಿತು. ನಾಲ್ಕು, ಐದು, ಆರು ನೂರು ರೂ. ಗಳಿಂದ ಹಿಡಿದು ಒಮ್ಮೊಮ್ಮೆ ಸಾವಿರದವರೆಗೂ ಕಲೆಕ್ಷನ್ ಆಗುತ್ತಿತ್ತು. ಆಗಿನ ಕಾಲದಲ್ಲಿ ಈಗಿನಷ್ಟು ಖರ್ಚು ಇರಲಿಲ್ಲವಾದ್ದರಿಂದ ಕಂಪನಿಯ ತಿಜೋರಿಯೂ ತುಂಬತೊಡಗಿತು. ಅನೇಕ ಬಡ ವಿದ್ಯಾಸಂಸ್ಥೆಗಳಿಗೆ ಸಹಾಯಾರ್ಥ ನಾಟಕ ಕೊಟ್ಟೆವು. ಈ ಸಂದರ್ಭದಲ್ಲೇ ಮೈಸೂರಿಗೆ ದಸರಾ ಪ್ರಯುಕ್ತ ಹೋಗಿ ಹತ್ತು ನಾಟಕ ಆಡಿ ಬಂದೆವು.

ನಮ್ಮ ಮುಂದಿನ ಕ್ಯಾಂಪ್ ಟಿ. ನರಸೀಪುರದಲ್ಲಿ. ಇಲ್ಲಿ ಸ್ವಂತವಾಗಿ ನಾಟಕ ವಾಡುವ ಉದ್ದೇಶವಿದ್ದರೂ ಕಂಟ್ರಾಕ್ಟ್ ಕೊಟ್ಟೆವು. ಇಲ್ಲಿದ್ದ ಒಂದೂವರೆ ತಿಂಗಳು ಒಳ್ಳೆಯ ಕಲೆಕ್ಷನ್ ಆಯಿತು.

ಚಾಮರಾಜನಗರ ಮತ್ತು ಟಿ. ನರಸೀಪುರಗಳಲ್ಲಿ ಕೀರ್ತಿ - ಲಾಭ ಗಳಿಸಿದ ನಂತರ ಎಡತೊರೆಯಲ್ಲಿ ಕ್ಯಾಂಪ್ ಮಾಡಿದೆವು. ಇಲ್ಲಿ ನಾಟಕಗಳು ಯಶಸ್ವಿಯಾಗಿ ನಡೆದರೂ ನಮಗೆ ತಿಳಿಯದೇ ನಡೆಯುತ್ತಿದ್ದ ಮೋಸದ ವ್ಯಾಪಾರದಿಂದಾಗಿ ನಾವು ಗಂಡಾಂತರಕ್ಕೆ ಒಳಗಾಗಬೇಕಿತ್ತು. ನಾಟಕದ ಕಂಟ್ರಾಕ್ಟರುಗಳು, ಅಂದು ವಿಪರೀತ ಬೇಡಿಕೆಯಿದ್ದು ಅಭಾವಕ್ಕೆ ಒಳಗಾಗಿದ್ದ ರೇಷ್ಮೆ ಲಡಿಗಳನ್ನು ಕಳ್ಳಪೇಟೆ ವ್ಯವಹಾರಕ್ಕೋಸ್ಕರ ನಮ್ಮ ನಾಟಕದ ಸೀನ್ಸ್, ಡ್ರೆಸ್, ಮೊದಲಾದವುಗಳೊಂದಿಗಿಟ್ಟು ಬೇರೆ ಊರುಗಳಿಗೆ ಸಾಗಿಸುತ್ತಿದ್ದರು.

ಚಿಕ್ಕಬಸವರಾಜು ಅವರ ಸ್ನೇಹಿತರಾಗಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ರಾಮಸ್ವಾಮಿಯವರು ಈ ವಿಚಾರವನ್ನು ತಿಳಿಸಿದರಲ್ಲದೆ ಕಳ್ಳಸಾಗಣೆಯ ಮಾಲು ಪೊಲೀಸರಿಗೆ ಸಿಕ್ಕಿಬಿದ್ದರೆ ಕಂಪನಿಯವರೂ ಸಹಭಾಗಿಗಳಾಗಿ ಈ ಕೆಲಸ ಮಾಡುತ್ತಿದ್ದಾರೆ ಎಂಬ ಆಪಾದನೆಗೆ ಗುರಿಯಾಗಿ ಮೊಕದ್ದಮೆಗೆ ಸಿಕ್ಕಿ ಹೇಗೆ ನರಳಬೇಕಾಗಿದ್ದಿತೆಂಬುದನ್ನು ವಿವರಿಸಿದರು. ಅನಿರೀಕ್ಷಿತವಾಗಿ ಒದಗಲಿದ್ದ ಗಂಡಾಂತರವನ್ನು ತಪ್ಪಿಸಿದುದಕ್ಕಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಿದೆ.

ಎರಡು ತಿಂಗಳಿಗೂ ಮಿಗಿಲಾಗಿ ಬೀಡುಬಿಟ್ಟಿದ್ದ ನಾವು ಇಲ್ಲಿನ ಕಲಾಭಿಮಾನಿಗಳ ಅಪಾರ ಪ್ರಶಂಸೆಗೆ ಒಳಗಾದೆವು. ಉಂಗುರ, ಚಿನ್ನದ ಮೆಡಲ್ ಮೊದಲಾದ ಬಹುಮಾನಗಳು ನನಗೆ ಲಭಿಸಿದವು.

ಮೈಸೂರಿನಲ್ಲಿ ನಮ್ಮ ನಾಟಕಗಳಿಗೆ ಅಪಾರ ಪ್ರೋತ್ಸಾಹವಿದ್ದುದರಿಂದ ನಾವು ಮತ್ತೆ ಮೈಸೂರಿನ ಮೊಕ್ಕಾಂ ಪ್ರಾರಂಭಿಸಿದೆವು. ಈ ಬಾರಿಯೂ ನಾಲ್ಕು ತಿಂಗಳುಗಳ ಕಾಲವಿದ್ದೆವು. ಕಲಾರಸಿಕರಿಂದ ಅಭೂತಪೂರ್ವ ಸ್ವಾಗತ ದೊರೆಯಿತು.

ಮೈಸೂರು ಮೊಕ್ಕಾಂ ಮುಕ್ತಾಯವಾಗುವ ಸಮಯದಲ್ಲಿ ಕನ್ನಡ ಥಿಯೇಟರ್ಸ್‌ನ ಮಾಲೀಕರೂ, ವ್ಯವಹಾರ ಚತುರರೂ, ಸ್ವಯಂ ನಟರಲ್ಲದಿದ್ದರೂ ಆಡಳಿತ ದಕ್ಷರೂ ಆಗಿದ್ದ ದಿವಂಗತ ನಾಟ್ಯಕಲಾ ವಿಶಾರದ ಎಂ.ಸಿ. ಮಹದೇವಸ್ವಾಮಿ ಅವರು ಹಾಸನದ ರೈಲ್ವೆ ಉಪಾಹಾರ ಗೃಹದ ಮಾಲೀಕರಾಗಿದ್ದ ರಾಘವಾಚಾರ್ಯ ಎಂಬುವರನ್ನು ನನಗೆ ಮತ್ತು ಚಿಕ್ಕಬಸವರಾಜು ಅವರಿಗೆ ಪರಿಚಯ ಮಾಡಿಕೊಡುತ್ತಾ, 'ಇವರು ಒಳ್ಳೆಯ ಕಲಾಭಿಮಾನಿಗಳು, ಪ್ರೋತ್ಸಾಹಕರು. ಒಳ್ಳೆಯ ನಾಟಕ ಮಂಡಳಿಯ ನಾಟಕಗಳನ್ನು ಕಂಟ್ರಾಕ್ಟ್ ಕೊಡಿಸಿ ಎಂದು ನನ್ನಲ್ಲಿಗೆ ಬಂದಿದ್ದಾರೆ. ನಾನು ಇವರಿಗೆ ಸುಸಂಸ್ಕೃತ ಮತ್ತು ಶ್ರೀಸಾಮಾನ್ಯರ ಮೆಚ್ಚುಗೆಯನ್ನು ಪಡೆಯಬಲ್ಲ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಬಲ್ಲ ನಿಮ್ಮ ಮಂಡಳಿಯ ನಾಟಕಗಳನ್ನು ಕಂಟ್ರಾಕ್ಟ್ ತೆಗೆದುಕೊಳ್ಳಿ ಎಂದು ಸಲಹೆ ಮಾಡಿದ್ದೇನೆ. ಹಾಸನದ ಮೊಕ್ಕಾಂ ನಾಟಕಗಳನ್ನು ಇವರಿಗೆ ಕಂಟ್ರಾಕ್ಟ್ ಕೊಡಿ' ಎಂದರು.

ಶ್ರೀ ಮಹದೇವಸ್ವಾಮಿಗಳ ಮಾತಿಗೆ ಒಪ್ಪಿಕೊಂಡೆವು. ಹಾಸನಕ್ಕೆ ಹೊರಡುವ ವೇಳೆಗೆ ಕಂಪನಿಯ ಪ್ರಮುಖ ನಟ ಕೊಟ್ಟೂರಪ್ಪನವರು ತಮಗೆ ಕೊಡುತ್ತಿರುವ ಸಂಬಳ ಸಾಲದೆಂದೂ ತೀರಾ ಕಡಿಮೆಯೆಂದೂ, ಜಾಸ್ತಿ ಮಾಡದಿದ್ದರೆ ಹಾಸನದ ಕ್ಯಾಂಪಿಗೆ ಬರುವುದಿಲ್ಲವೆಂದೂ ಸ್ಪಷ್ಟವಾಗಿ ತಿಳಿಸಿದರು. ಕಂಪನಿಯ ಪರದೆ ಜೋಡಿಸುವವರೇ ಆಗಲಿ, ಸಂಗೀತದವರೇ ಆಗಲಿ, ಪಾರ್ಟು ಮಾಡುವವರೇ ಆಗಲಿ ಕೋಪ ಮಾಡಿಕೊಂಡರೆ ನಾಟಕ ನಿಂತಂತೆಯೇ ಎಂಬ ಅರಿವಿದ್ದ ನಾನು, ಬಸವರಾಜು ಅವರು ಕೊಟ್ಟೂರಪ್ಪನವರಿಗೆ ಸಂಬಳ ಜಾಸ್ತಿ ಮಾಡಲು ಯಾವ ತಕರಾರೂ ಮಾಡದೆ ಜಾಸ್ತಿ ಮಾಡಿದೆವು. ಇದೇ ಸಮಯದಲ್ಲಿ ಜಿ. ನಾಗೇಶರಾಯರು, ಎಂ.ಜಿ. ಮರಿರಾಯರು, ವರದಾಚಾರ್ಯರ ಸ್ಮಾರಕ ಸಂಘದವರು ಮುಂಬೈನಲ್ಲಿ ವ್ಯವಸ್ಥೆ ಮಾಡಿದ್ದ ನಾಟಕಗಳಲ್ಲಿ ಭಾಗವಹಿಸಲು ಪ್ರಯಾಣ ಮಾಡಿದರು. ನಾಗೇಶರಾಯರು ಮಾತ್ರ ಮುಂಬೈ ನಾಟಕಗಳಲ್ಲಿ ಭಾಗವಹಿಸಿ ನೇರವಾಗಿ ಹಾಸನಕ್ಕೆ ಬಂದುಬಿಟ್ಟರು. ಮರಿರಾಯರು ಸುಬ್ಬಯ್ಯ ನಾಯ್ಡು ಮತ್ತು ನಾಗೇಂದ್ರರಾಯರು ನಿರ್ಮಿಸಿದ 'ಮಹಾತ್ಮ ಕಬೀರ್' ಕನ್ನಡ ಚಿತ್ರೀಕರಣದಲ್ಲಿ ಪಾಲ್ಗೊಳ್ಳಲು ಮುಂಬೈನಿಂದ ಮದ್ರಾಸಿಗೆ ತೆರಳಿದರು.

ರಾಘವಾಚಾರ್ಯರು ಹೋಟೆಲ್ ಮಾಲೀಕರಾಗಿದ್ದರಿಂದಲೂ ಹಾಸನದಲ್ಲಿ ಪ್ರಭಾವಶಾಲಿ ವ್ಯಕ್ತಿಯಾಗಿದ್ದರಿಂದಲೂ ನಮ್ಮ ನಾಟಕಗಳಿಗೆ ಒಳ್ಳೆಯ ಸ್ವಾಗತ

ದೊರೆಯಿತು. ಕ್ಯಾಂಪ್ ಭರ್ಜರಿಯಾಗಿ ನಡೆಯಿತು. ತಿಪಟೂರಿನ ಕ್ಯಾಂಪನ್ನೂ ಅವರೇ ವಹಿಸಿಕೊಂಡರು.

ತಿಪಟೂರಿನಲ್ಲಿ ಮೊದಲ ನಾಟಕವಾಗಿ ಪಂಡಿತ ಪಾಮರರನ್ನು ರಂಜಿಸಿ ಕಂಪನಿಯ ಗಲ್ಲಾಪೆಟ್ಟಿಯ ನಾಟಕಗಳಲ್ಲೊಂದೆನಿಸಿದ್ದ 'ದಾನಶೂರ ಕರ್ಣ ' ವನ್ನು ಪ್ರದರ್ಶಿಸಿದೆವು. ಅಲ್ಲಿನ ಜನರ ಪೂರ್ಣ ಮೆಚ್ಚುಗೆಗೆ ಪಾತ್ರವಾದ ಈ ನಾಟಕ ಸುತ್ತಮುತ್ತಲಿನ ಗ್ರಾಮಸ್ಥ ಪ್ರೇಕ್ಷಕರನ್ನು ಆಯಸ್ಕಾಂತದಂತೆ ಸೆರೆ ಹಿಡಿಯಿತು. ಹಳ್ಳಿಗಳಿಂದ ಗಾಡಿಗಳ ತುಂಬ ಜನ ಬಂದು ಕಂಪನಿಯನ್ನು ಪ್ರೋತ್ಸಾಹಿಸತೊಡಗಿದರು. ಥಿಯೇಟರಿನ ಬಳಿಯಂತೂ ಟಿಕೇಟಿಗಾಗಿ ನೂಕುನುಗ್ಗಲು. ನಾಟಕದ ಮೂರನೆಯ ದಿನ ಕೊಟ್ಟೂರಪ್ಪನವರು ರಸ್ತೆಯಲ್ಲಿ ಹೋಗುತ್ತಾ ಇದ್ದರೆ ಜನ ಅವರ ಕಾಲಿಗೆ ಬಿದ್ದು ನಮ್ಮಪ್ಪಾ ಅಂತ ನಮಸ್ಕಾರ ಮಾಡತೊಡಗಿದರು. ಪ್ರಾರಂಭದ ನಾಟಕಕ್ಕೇ 1500 ರೂಗಳ ಸಂಗ್ರಹವಾಯಿತು.

ಮಂಡಳಿಯು ದಿನೇ ದಿನೇ ಜನಪ್ರಿಯತೆಯ ಹಾದಿಯಲ್ಲಿ ಮುನ್ನಡೆಯ ತೊಡಗಿತು. ಕೊಟ್ಟೂರಪ್ಪನವರ ಕರ್ಣನ ಪಾತ್ರವನ್ನು ಮೆಚ್ಚಿಕೊಂಡಂತೆ ಸುಭದ್ರಾ ಕಲ್ಯಾಣ ಪೌರಾಣಿಕ ನಾಟಕದಲ್ಲಿ ನಾನು ವಹಿಸುತ್ತಿದ್ದ ಸುಭದ್ರೆಯ ಪಾತ್ರವನ್ನೂ ಜನತೆ ಮೆಚ್ಚಿಕೊಂಡಿತು. ಸಾಮಾನ್ಯ ಜನರೇ ಅಲ್ಲದೆ ಸುಸಂಸ್ಕೃತರೂ, ಉನ್ನತಾಧಿಕಾರಿಗಳೂ, ಪ್ರಮುಖ ವಾಣಿಜ್ಯೋದ್ಯಮಿಗಳೂ ನನ್ನ ಪಾತ್ರ ವೈಭವವನ್ನು ಮುಕ್ತಕಂಠದಿಂದ ಹೊಗಳತೊಡಗಿದರು. ಯಾವುದೋ ದೈವಶಕ್ತಿಯ ಬಲದಿಂದ ಅಂದು ನಾನು ಈ ಪಾತ್ರವನ್ನು ತನ್ಮಯಳಾಗಿ ಅಭಿನಯಿಸುತ್ತಿದ್ದೆನಲ್ಲದೆ ಪಾತ್ರಾಭಿನಯದಲ್ಲಿ ನವರಸಗಳನ್ನೂ ತುಂಬುತ್ತಿದ್ದೆ. ಈ ಪಾತ್ರ ರಸಿಕ ಲೋಕವನ್ನು ಮಾತ್ರ ತಣಿಸದೆ ಅನೇಕ ತರುಣ ನಟ-ನಟಿಯರಿಗೆ ಸ್ಫೂರ್ತಿಯನ್ನೂ ನೀಡಿತು.

ಪಾತ್ರಾಭಿನಯ ಕಾಲದಲ್ಲಿ ರಸಾನುಭವವನ್ನು ಹರಿಯಬಿಡದಿದ್ದರೆ ಪಾತ್ರ ನಿಸ್ಸಾರವಾಗುತ್ತದೆ. ನಿರ್ಜೀವವಾಗುತ್ತದೆ. ಜೊತೆಗೆ ವೈಶಿಷ್ಟ್ಯತೆಯೂ ಉಳಿಯುವುದಿಲ್ಲ ಎಂದು ತಂದೆಯವರು ಹೇಳುತ್ತಿದ್ದ ಮಾತನ್ನು ನಾನು ಮುಖಕ್ಕೆ ಬಣ್ಣ ಹಚ್ಚಿಕೊಂಡಾಗಲೆಲ್ಲಾ ಜ್ಞಾಪಿಸಿಕೊಳ್ಳುತ್ತಿದ್ದುದೂ ಪಾತ್ರ ಜೀವಂತವಾಗಲು ಸಹಾಯಕವಾಗುತ್ತಿತ್ತು. ನನ್ನ ಸುಭದ್ರಾ, ದ್ರೌಪದಿ, ಚೂಡಾಮಣಿ, ಅಂಬೆ, ಶಾಕುಂತಲ, ಸುನೀತಿ ಮೊದಲಾದ ಪಾತ್ರಗಳನ್ನು ವೀಕ್ಷಿಸುತ್ತಿದ್ದ ಪ್ರೇಕ್ಷಕರು ನಿಮ್ಮ ಪಾತ್ರವನ್ನು ವೀಕ್ಷಿಸಿದಾಗ ಕಾಳಿದಾಸನ ಮಾಳವಿಕಾಗ್ನಿಮಿತ್ರದ ನೆನಪಾಗುತ್ತದೆ. ನೀವು ಕುಳಿತಾಗ, ತಿರುಗಿದಾಗ, ನಕ್ಕಾಗ, ನಡೆದಾಗ, ಹೂವು ಕೀಳುವಾಗ, ಮುಡಿಯು ವಾಗ, ನಮಸ್ಕರಿಸುವಾಗ, ವಿಲಾಸಿಯರ ವಿಲಾಸದಂತೆ ಮನೋಹರವಾಗಿರುತ್ತದೆ ಎಂದು ನನ್ನ ಪಾತ್ರಗಳನ್ನು ಹೊಗಳುತ್ತಿದ್ದರು. ನಮ್ಮ ಕಂಪನಿ ತಿಪಟೂರಿನಲ್ಲಿ ಮೊಕ್ಕಾಂ

ಮಾಡಿದ ಕೆಲವೇ ದಿನಗಳಲ್ಲಿ ಯಾವ ಹೆಣ್ಣು ಮಕ್ಕಳ ಬಾಯಲ್ಲಿ ನೋಡಿದರೂ ನಾನು ಹಾಡಿದ 'ನೀರಜ ನೇತ್ರ, ತೋರಲೇ ನಿನ್ನ ಮೋಹವ ಎನ್ನೊಳೂ ಪ್ರಾಣೇಶನೇ ಪೋಗಬೇಡವೋ, ದಾಳವಾಡೋ ಸುಂದರಾಂಗ' ಎಂಬ ಗೀತೆಗಳೇ ಆಗಿದ್ದುವು.

ತಿಪಟೂರು ಕ್ಯಾಂಪ್ ಅತ್ಯಂತ ವೈಭವದಿಂದ ನಡೆಯಿತು. ಕನ್ನಡ ರಂಗಕಲೆಗೆ ನಾವು ಸಲ್ಲಿಸುತ್ತಿದ್ದ ಸೇವೆಗಾಗಿ ತಿಪಟೂರಿನ ಹೆಸರಾಂತ ವರ್ತಕರೂ, ಕಲಾ ಪ್ರೋತ್ಸಾಹಕರೂ ಆದ ಶ್ರೀ ಟಿ. ಎಸ್. ಕರಿಬಸವಯ್ಯ (ಕಂಠೀರವ ಸ್ಟುಡಿಯೋಸ್‌ನ ಮ್ಯಾನೇಜಿಂಗ್ ಡೈರೆಕ್ಟರ್), ಶಾಂತಣ್ಣ ಮತ್ತು ಜಿ.ಕೆ. ಮಲ್ಲಪ್ಪ ಮೊದಲಾದವರು ಕಂಪನಿಯ ನಟ -.ನಟಿಯರಿಗೆಲ್ಲಾ ಸನ್ಮಾನ ಸಮಾರಂಭವನ್ನೇರ್ಪಡಿಸಿದರು. ನನಗೆ ಮತ್ತು ಅನೇಕ ನಟರಿಗೆ ಬಹುಮಾನಗಳು ಲಭ್ಯವಾದವು. ◆

## ಮಂತ್ರಕ್ಕೆ ಮಳೆ ನಿಂತಿತು

ತಿಪಟೂರು ಮೊಕ್ಕಾಂ ಇನ್ನೇನು ಮುಕ್ತಾಯವಾಗಬೇಕು ಎನ್ನುವ ವೇಳೆಗೆ ಕೊಟ್ಟೂರಪ್ಪನವರು ಮತ್ತೆ ಸಂಬಳದ ಹೆಚ್ಚಳಕ್ಕಾಗಿ ಒತ್ತಾಯ ಮಾಡತೊಡಗಿದರು. ಈ ಬಾರಿ ನಾವು ಅವರಿಂದ ಹನ್ನೊಂದು ತಿಂಗಳಿಗೆ ಅಗ್ರಿಮೆಂಟ್ ಮಾಡಿಸಿಕೊಂಡು ಸಂಬಳ ಹೆಚ್ಚು ಮಾಡಿದೆವು. ಜೊತೆಗೆ ಪ್ರಾಕ್ಟಿಸ್ ಮ್ಯಾನೇಜರ್ ಹುದ್ದೆಯನ್ನೂ ಅವರಿಗೆ ವಹಿಸಿದೆವು. ನಟ - ನಟಿಯರ ಆಯ್ಕೆ, ಕೆಲಸಕ್ಕೆ ತೆಗೆದುಕೊಳ್ಳುವುದು - ತೆಗೆಯುವುದು ಮೊದಲಾದ ಗುರುತರ ಜವಾಬ್ದಾರಿಯೂ ಅವರದೇ ಆಯಿತು. ಈ ಮೊಕ್ಕಾಂನಲ್ಲಿ ನಮ್ಮ ಪಾಲಿಗೆ ಎಲ್ಲವೂ ಸುಸೂತ್ರವಾಗಿ ನಡೆದರೂ ಭಾರಿ ನಷ್ಟ ಮತ್ತು ದುಃಖಕರವಾದ ಸಂಗತಿಯೊಂದು ಜರುಗಿತು. ಯಾವ ಪಾತ್ರವನ್ನು ಮಾಡಿದರೂ ಅದರಲ್ಲಿ ಜೀವಕಳೆಯನ್ನು ತುಂಬಬಲ್ಲ ಸಿದ್ಧಿ ಪಡೆದ ವರನಟರಾದ ಜಿ. ನಾಗೇಶರಾಯರು ಕಂಪನಿಯನ್ನು ತ್ಯಜಿಸಿದರು. ಇಲ್ಲಿಂದ ಮುಂದೆ ನಾವು ಸಾಗರಕ್ಕೆ ಪ್ರಯಾಣ ಮಾಡಿದೆವು.

ಸಾಗರದಲ್ಲಿಯೂ ಒಳ್ಳೆಯ ಹೆಸರಿನೊಂದಿಗೆ ಹಣವೂ ಆಯಿತು. ಇಲ್ಲಿನ ಕಲಾರಸಿಕರು ತಿಲೋತ್ತಮೆ ನಾಟಕವನ್ನು ಹೆಚ್ಚು ಮೆಚ್ಚಿಕೊಂಡರು. ಇಲ್ಲಿನ ಗಣಪತಿ ದೇವಸ್ಥಾನಕ್ಕೆ ಸಹಾಯಾರ್ಥ ನಾಟಕವನ್ನು ಕೊಡಲು ಸರ್ವ ಸಿದ್ಧತೆ ಮಾಡಿಕೊಂಡೆವು. ಬೆಳಗಿನಿಂದಲೇ ಪ್ರಚಂಡವಾದ ಮಳೆ ಆರಂಭವಾಯಿತು. ನಾಟಕ ನಿಂತು ಹೋದಂತೆಯೇ ಎಂದು ತಿಳಿದೆವು. ಊರಿನ ಜನರೂ ಹಾಗೆಯೇ ಭಾವಿಸಿದರು. ಅಲ್ಲಿನ ಕೆಲವರು ಬ್ರಾಹ್ಮಣರು ನಮ್ಮಲ್ಲಿಗೆ ಬಂದು 'ನೀವು ಹೆದರಬೇಡಿ. ನಾಟಕದ ವೇಳೆಗೆ ಮಳೆಯನ್ನು ನಿಲ್ಲಿಸುತ್ತೇವೆ ' ಎಂದರು. ನಮಗಾದ ಅಚ್ಚರಿ ಅಷ್ಟಿಷ್ಟಲ್ಲ. ಮಳೆಯನ್ನು ನಿಲ್ಲಿಸುತ್ತೇವೆ ಎಂದು ಹೇಳುತ್ತಾರಲ್ಲಾ, ಇದು ಸಾಧ್ಯವೆ ಎಂದು. ಕೈಗೆ ದರ್ಭೆ ಹಾಕಿಕೊಂಡು ಜಪ - ತಪ ಮಾಡಿ ರಾತ್ರಿ ಒಂಬತ್ತೂವರೆಗೆ ಸರಿಯಾಗಿ ಮಳೆ ನಿಲ್ಲಿಸಿದರು. ಪವಾಡವೋ ಏನೋ ಎಂಬಂತೆ ನಡೆದ ಈ ಘಟನೆಯಿಂದ ನಾವು ಸ್ಥಂಭೀಭೂತರಾದೆವು.

ಇಲ್ಲಿ ಸತತವಾಗಿ ಮಳೆ ಪ್ರಾರಂಭವಾಗಿದ್ದರಿಂದ ಕ್ಯಾಂಪ್ ಮುಕ್ತಾಯ ಮಾಡಿ ಭದ್ರಾವತಿಗೆ ತೆರಳಿದೆವು. ಇಲ್ಲಿಯ ನಾಟಕಗಳನ್ನೂ ರಾಘವಾಚಾರ್ಯರೇ ಕಂಟ್ರಾಕ್ಟ್ ಮಾಡಿದರು. ಆಗ್ಗೆ ಶ್ರೀಯುತ ಬಾಲಕೃಷ್ಣ ಎಂಬುವರು ಭದ್ರಾವತಿಯಲ್ಲಿ ಕಬ್ಬಿಣದ

ಕಾರ್ಖಾನೆಯ ಛೇರ್‌ಮನ್ ಆಗಿದ್ದರು. ಕಂಪನಿಗೆ ಅವರು ಹಲವಾರು ರೀತಿಯಲ್ಲಿ ಸಹಾಯ ಮಾಡಿದರು. ಮಳೆಗಾಲವಾದ್ದರಿಂದ ಹೇಳಿಕೊಳ್ಳುವ ಉತ್ಪತ್ತಿಯಾಗಲಿಲ್ಲ. ಕ್ಯಾಂಪನ್ನು ಶಿವಮೊಗ್ಗಕ್ಕೆ ಬದಲಿಸಿದೆವು.

ಶಿವಮೊಗ್ಗದಲ್ಲಿ ಜಿಂಕ್‌ಷೀಟ್‌ನ ರಂಗಮಂದಿರ ನಿರ್ಮಾಣವಾಯಿತು. ನಮ್ಮ ದುರಾದೃಷ್ಟ ಎಂಬಂತೆ ತುಂಗಾನದಿಯ ಪ್ರವಾಹದಿಂದ ಥಿಯೇಟರ್ ಜಲಾವೃತ ವಾಯಿತು. ನಾಟಕವಾಡುತ್ತಿದ್ದರೆ ನಮ್ಮ ಪಾತ್ರಗಳ ಪ್ರತಿಬಿಂಬ ನೀರಿನಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಕಷ್ಟನಷ್ಟದಿಂದಲೇ ಹಲವಾರು ನಾಟಕಗಳನ್ನು ಆಡಿದೆವು. ಕಲಾರಸಿಕರ ಪೂರ್ಣ ಮೆಚ್ಚುಗೆ ದೊರೆಯಿತು. ಜೀವನಕ್ಕಾಗಿ ನಾಟಕವನ್ನೇ ಅವಲಂಬಿಸಿದ್ದ ಅನೇಕ ನಟರು ಕಂಪನಿಯಲ್ಲಿ ಇದ್ದುದರಿಂದ ಮಳೆಗಾಲವಾದರೂ ನಾಟಕ ಸಂಸ್ಥೆಯನ್ನು ಮುಚ್ಚುವಂತಿರಲಿಲ್ಲ. ಕಡೂರಿನ ಕಲಾಭಿಮಾನಿಗಳ ಕೋರಿಕೆಯಂತೆ ಅಲ್ಲಿ ಮೊಕ್ಕಾಂ ಪ್ರಾರಂಭಿಸಿದೆವು. ಇಲ್ಲೂ ರಾಘವಾಚಾರ್ಯರೇ ಕಂಟ್ರಾಕ್ಟ್‌ದಾರರು.

ಕಡೂರಿನಲ್ಲಿ ನಮ್ಮ ಪ್ರತಿಯೊಂದು ನಾಟಕವೂ ಸಾವಿರದಂತೆ ಗಳಿಸಿತು. ಸರಿ ಸುಮಾರು ಎರಡು ತಿಂಗಳುಗಳಿಗೂ ಮಿಗಿಲಾಗಿ ಇಲ್ಲಿದ್ದೆವು. ಒಂದು ದಿನ ಭೀಷ್ಮ ಪ್ರತಿಜ್ಞೆ ನಾಟಕ ಹಾಕಿದ್ದೆವು. ಕೊಟ್ಟೂರಪ್ಪನವರು ಭೀಷ್ಮ - ಅಂಬೆಯ ಪಾತ್ರ ನನ್ನದು. ಕಡೂರಿನ ನಾಗರಿಕರೇ ಅಲ್ಲದೆ ಸುತ್ತಮುತ್ತಲಿಂದಲೂ ಜನ ನಾಟಕ ನೋಡಲು ಗಾಡಿಗಳಲ್ಲಿ ಆಗಮಿಸಿದ್ದರು. ಇದ್ದಕ್ಕಿದ್ದಂತೆಯೇ ಮಳೆ ಪ್ರಾರಂಭವಾಯಿತು. ನಾಟಕ 10 ಗಂಟೆಗೆ ಪ್ರಾರಂಭವಾಗಬೇಕು. ಹಿಡಿದ ಜಡಿ ಮಳೆ ಬಿಡಲೇ ಇಲ್ಲ. ಇಂದು ನಾಟಕ ನಿಲ್ಲಿಸುವುದೇ ಉತ್ತಮ ಎಂಬ ತೀರ್ಮಾನಕ್ಕೆ ಬಂದೆವು. ಅದರಂತೆ ಕಲಾಭಿಮಾನಿಗಳಿಗೆ ತಿಳಿಸಿದೂ ಆಯಿತು. ಆದರೆ ಅವರ್‍ಯಾರೂ ಒಪ್ಪಲಿಲ್ಲ. ನೀವು ನಾಟಕವನ್ನು ಖಂಡಿತ ನಿಲ್ಲಿಸಕೂಡದು. ನಾವು ಛತ್ರಿ ಹಿಡಿದುಕೊಂಡೇ ನಾಟಕವನ್ನು ವೀಕ್ಷಿಸುತ್ತೇವೆ ಎಂದು ಒತ್ತಾಯಿಸಿದರು. ಬೇರೆ ಮಾರ್ಗವಿಲ್ಲದೆ ನಾಟಕವನ್ನು ಪ್ರಾರಂಭ ಮಾಡಿದೆವು. ಆ ಮಳೆಯಲ್ಲೂ 500 ರೂ.ಗಳಿಗೂ ಮಿಗಿಲಾಗಿ ಹಣ ಸಂಗ್ರಹವಾಯಿತು. ಕಂಟ್ರಾಕ್ಟ್ ದಾರರು ಕ್ಯಾಷ್ ಬಾಕ್ಸ್ ಸಮೇತ ಮಳೆಯಿಂದ ರಕ್ಷಣೆ ಪಡೆಯಲು ರಂಗದ ಮೇಲಿದ್ದ ಕೃಷ್ಣನ ಮಂಚದ ಕೆಳಗೆ ಸೇರಿಕೊಂಡರು.

ಗುಬ್ಬಿ ಕಂಪನಿಯಲ್ಲಿದ್ದ ಬಿ.ಎಂ. ನಾರಾಯಣದಾಸ್, ಜಿ. ಎನ್. ಮುನಿಸ್ವಾಮಯ್ಯ - ಇನ್ನೂ ಅನೇಕರು ಈ ಮೊಕ್ಕಾಂನಲ್ಲಿ ನಮ್ಮ ಕಂಪನಿ ಸೇರಿದರು. ನಾವು ಸಂಗೀತ ಪ್ರಧಾನವಾದ ಅನೇಕ ನಾಟಕಗಳನ್ನು ಪ್ರದರ್ಶಿಸುತ್ತಿದ್ದೆವಾದರೂ ಸಂಪೂರ್ಣ ರಾಮಾಯಣವನ್ನು ಪ್ರದರ್ಶಿಸುತ್ತಿರಲಿಲ್ಲ. ಗುಬ್ಬಿ ಕಂಪನಿಯಿಂದ ಬಂದ ಬಿ. ಎಂ. ನಾರಾಯಣದಾಸರು ಕಂಪನಿಯ ಮೊಕ್ಕಾಂನ ಕೊನೆಯ ನಾಟಕವಾಗಿ ಸಂಪೂರ್ಣ ರಾಮಾಯಣ ಪ್ರದರ್ಶಿಸಿ ಎಂದು ಸಲಹೆ ಇತ್ತರು. ಅವರ ಸಲಹೆ

ನಮಗೂ ಸಮಂಜಸವೆನಿಸಿತು. ಕಾರಣ: ಪ್ರತಿಯೊಂದು ವೃತ್ತಿ ನಾಟಕ ಮಂಡಳಿಯೂ ಕ್ಯಾಂಪಿನ ಕೊನೇ ನಾಟಕವನ್ನಾಗಿ ಅದನ್ನೇ ಪ್ರದರ್ಶಿಸುತ್ತಿತ್ತು. ಈ ನಾಟಕದ ಪ್ರದರ್ಶನವಿದೆಯೆಂದರೆ ಊರಿನ ಜನರು ಮಾತ್ರವೇ ಅಲ್ಲದೆ ಅಕ್ಕಪಕ್ಕದ ಹಳ್ಳಿಗಳಿಂದಲೂ ಜನ ಗಾಡಿಗಳ ತುಂಬ ಬಂದು ಪ್ರೋತ್ಸಾಹಿಸಿ ಕ್ಯಾಂಪ್ ಬಿಟ್ಟು ಕದಲುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಸರಿ. ರಾಮಾಯಣವನ್ನು ಒಂದೇ ದಿನದಲ್ಲೇ ಅಭ್ಯಾಸ ಮಾಡಿ ಆಡಿದೆವು. ಒಂದು ಸಾವಿರ ರೂ. ಗಳ ಉತ್ಪತ್ತಿ ಯಾಯಿತು. ಈ ಮೊಕ್ಕಾಂ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಮೊಕ್ಕಾಂ ಪ್ರಾರಂಭಿಸಲು ಮಂಗಳೂರಿಗೆ ಹೋದೆವು.

ಸಭ್ಯರೂ, ಸುಸಂಸ್ಕೃತರೂ ಆದ ದಕ್ಷಿಣ ಕನ್ನಡ ಜಿಲ್ಲೆಯ ಜನ, ಮಂಗಳೂರಿನಲ್ಲಿ ಅಧಿಕ ಸಂಖ್ಯೆಯಲ್ಲಿ ನಮ್ಮ ನಾಟಕಗಳಿಗೆ ಆಗಮಿಸತೊಡಗಿದ್ದರಿಂದ ಕಂಟ್ರಾಕ್ಟ್‌ದಾರರು ದಿನಕ್ಕೆ ಸಾವಿರದಂತೆ ಗಳಿಸತೊಡಗಿದರು. ಇಲ್ಲಿನ ವೈಶಿಷ್ಟ್ಯತೆ ಎಂದರೆ ಶಿಸ್ತಿನಿಂದ ನಾಟಕ ವೀಕ್ಷಿಸುತ್ತಿದ್ದುದು. ಒನ್ಸ್‌ಮೋರ್ ಎಂದು ಹೇಳಿ, ಹೇಳಿಸಿ ಕೈ ಚಪ್ಪಾಳೆ ಹೊಡೆದು ತೃಪ್ತಿ ಹೊಂದುವ ಜನರೂ ಇವರಲ್ಲ. ಹತ್ತು ರೂಪಾಯಿ ನೋಟನ್ನು ತಮ್ಮ ಮೆಚ್ಚಿನ ನಟರು ರಂಗದ ಮೇಲೆ ಅಭಿನಯದ ಪರಾಕಾಷ್ಠೆಯನ್ನು ಮುಟ್ಟಿದಾಗ ಎಸೆಯುವುದು ವಾಡಿಕೆ. ನಾಲ್ಕು ಆಣೆ ಟಿಕೇಟಿನ ಜನ ಸಹ ಹತ್ತಾರು ಮಂದಿ ಸೇರಿ, ನಾಲ್ಕಾಣೆ, ಎಂಟಾಣೆ ಸೇರಿಸಿ ಗಂಟುಕಟ್ಟಿ ರಂಗಕ್ಕೆ ಎಸೆಯುತ್ತಿದ್ದರು. ಪತ್ರಕರ್ತರು ನಾಟಕವನ್ನು ಪ್ರಶಂಸಿಸಿ ವಿಮರ್ಶೆ ಮಾಡಿದರು.

ನಾಟಕಗಳಿಗಾಗುತ್ತಿದ್ದ ಅಭೂತಪೂರ್ವವಾದ ಕಲೆಕ್ಷನ್ ನೋಡಿ ಎಷ್ಟೋ ಮಂದಿ 'ಏಕೆ ಕಂಟ್ರಾಕ್ಟ್ ಕೊಟ್ಟಿರಿ ? ನೀವೆ ಸ್ವಂತವಾಗಿ ಆಡಿದ್ದರೆ ಈ ಹಣವೆಲ್ಲವೂ ನಿಮ್ಮ ಪಾಲಿನದೇ ಆಗುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ರಂಗ ಕಲೆಯೆಂದರೆ ಅಪಾರ ಪ್ರೇಮ. ಹೆಚ್ಚು ಪ್ರೋತ್ಸಾಹಿಸುತ್ತಾರಾದ್ದರಿಂದ ಇನ್ನು ಮುಂದಿನ ನಾಟಕಗಳನ್ನು ಕಾಂಟ್ರಾಕ್ಟ್ ಕೊಡಬೇಡಿ' ಎಂದು ಸಲಹೆ ಮಾಡಿದರು. ಪ್ರೇಕ್ಷಕರ ಲಹರಿ ವಿಚಿತ್ರವಾದದ್ದು. ಪ್ರೋತ್ಸಾಹಿಸುವುದಿಲ್ಲ ಎಂದು ಬಗೆದ ಸ್ಥಳದಲ್ಲಿ ಚೆನ್ನಾಗಿಯೇ ಪ್ರೋತ್ಸಾಹಿಸುತ್ತಾರೆ. ಪ್ರೋತ್ಸಾಹ ದೊರೆಯುವುದು ಎಂದು ಭಾವಿಸಿದ ಸ್ಥಳಗಳಲ್ಲಿ ಸಾವಿರಾರು ರೂ. ನಷ್ಟ. ಹೇಳದೆ ಕೇಳದೆ ಕ್ಯಾಂಪ್ ಮುಕ್ತಾಯ ಮಾಡುವ ಪ್ರಸಂಗವೂ ಬಾರದಿರುವುದಿಲ್ಲ.

ಈ ಅನುಭವ ನಮಗೆ ಉಡುಪಿಯಲ್ಲಿ ಚೆನ್ನಾಗಿ ಆಯಿತು. ಅಲ್ಲಿ ನಾವು ಪರ್ಸಂಟೇಜ್ ಮೇಲೆ ನಾಟಕವನ್ನು ಕಂಟ್ರಾಕ್ಟ್ ಕೊಟ್ಟೆವು. ಇಲ್ಲಿಂದಲೇ ನಾವು ವಿಧಿಯ ಒಳಸಂಚಿಗೆ ಬಲಿಯಾಗತೊಡಗಿದೆವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಹುಯ್ಯಬೇಕಿದ್ದ ಮಳೆ ಅನಿರೀಕ್ಷಿತವಾಗಿ ಮಾರ್ಚಿ 12ನೇ ತಾರೀಖಿನಂದೇ

ಪ್ರಾರಂಭವಾಯಿತು. ನಾವು ಥಿಯೇಟರ್ ಹಾಕಿದ್ದ ಭಂಡಾರಿ ಗದ್ದೆ ನೀರಿನಿಂದ ತುಂಬಿ ತುಳುಕಿತು. ನೀರಿನಿಂದ ಎರಡಡಿ ಮೇಲಕ್ಕೆ ರಂಗಮಂದಿರದ ಛಾವಣಿ ಕಾಣುವಂತಾಯಿತು. ಕಂಪನಿಯ ಬೊಕ್ಕಸ ಉಡುಪಿಯಲ್ಲಿ ತುಂಬುತ್ತದೆ ಎಂದು ಭಾವಿಸಿದ್ದ ನಾವು ಶಕ್ತಿಗುಂದಿ ನಿಸ್ಸಹಾಯಕರಾಗಿ ಹೋದೆವು.

ಮುಂದೇನು ಎಂಬ ಪ್ರಶ್ನೆ ನಮ್ಮೆದುರು ಧುತ್ತೆಂದು ಬಂದು ನಿಂತಿತು. ಕಂಪನಿಯನ್ನೇ ನೆಚ್ಚಿಕೊಂಡಿರುವ ನಟ-ನಟಿಯರಿಗೆ ಆರ್ಥಿಕ ನೆರವು ನೀಡುವುದು ಹೇಗೆ? ತಬಲಾ, ಹಾರ್ಮೋನಿಯಂ ಮುಂತಾದ ವಾದ್ಯಗಳೂ ನೀರಿನ ಪಾಲಾದವು. ಹದಿನೈದು ದಿನಗಳ ಪರ್ಯಂತ ನಾಟಕವಿಲ್ಲದಂತಾಯಿತು. ನೀರು ಆರಿದ ಮೇಲೆ ಕೊಚ್ಚೆಯಲ್ಲಿ ನೆನೆದು ಮುದ್ದೆಯಾಗಿದ್ದ ಪರಿಕರಗಳನ್ನು ಹೊರಗೆ ತಂದೆವು. ಇದೇ ವೇಳೆಗೆ ಉಗಾದಿ ಹಬ್ಬ ಬಂದಿತು. ಹಬ್ಬದ ಸಲುವಾಗಿ ನಟ-ನಟಿಯರಿಗೆ ಹಣ ಕೊಡಬೇಕು. ನಾನೂ, ಚಿಕ್ಕಬಸವರಾಜು ತಲೆಯ ಮೇಲೆ ಕೈಹೊತ್ತು ಕುಳಿತೆವು.

ಕೊನೆಗೆ ನಾನೇ ಧೈರ್ಯತಾಳಿ ನನ್ನ ನಗ-ನಾಣ್ಯ, ಮೆಡಲ್ಲುಗಳನ್ನು ಯಾರಲ್ಲಾದರೂ ಒತ್ತೆಯಿಟ್ಟು, ಹಣ ತಂದು ಕಂಪನಿಯವರಿಗೆಲ್ಲಾ ಕೊಡಬೇಕೆಂದು ಯೋಚಿಸಿ, ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶಿರೂರು ಮಠದ ಶ್ರೀಗಳನ್ನು ಕಂಡೆವು. ನಮ್ಮ ಕಷ್ಟನಷ್ಟದ ಮಾತು ಕೇಳಿ ಮರುಕಗೊಂಡ ಶ್ರೀಗಳು, ತಮ್ಮ ಮಠದ ಪಾರುಪತ್ಯೆಗಾರರಲ್ಲಿ ಮಾತನಾಡಿ ಕೊಡಿಸಿದ ಮೂರು ಸಾವಿರ ರೂಪಾಯಿ ಹಣವನ್ನು ತಂದು ಎಲ್ಲರಿಗೂ ಹಂಚಿದೆವು.

ಭಾರಿ ನಷ್ಟದಿಂದ ಬಳಲುತ್ತಿದ್ದ ನಮ್ಮನ್ನು ಉಡುಪಿಯ ಕೆಲವು ಪ್ರಮುಖರು ಸುಮ್ಮನೆ ಕುಳಿತು ಚಿಂತಿಸಿದರೆ ಏನೂ ಪ್ರಯೋಜನವಿಲ್ಲ. ಕುಂದಾಪುರಕ್ಕೆ ಹೋಗಿ ನಾಟಕಗಳನ್ನು ಪ್ರದರ್ಶಿಸಿ ಎಂದು ಸೂಚಿಸಿದರು. ಸಮಂಜಸವಾದ ಸೂಚನೆಯಾದ್ದರಿಂದ ನಾವು ಹೊರಡಲು ಅನುವಾದೆವು. ಆಗ್ಗೆ ಕುಂದಾಪುರಕ್ಕೆ ಇಂದಿನಂತೆ ಸೇತುವೆ ಇರಲಿಲ್ಲವಾದ್ದರಿಂದ ಹೊಳೆಯನ್ನು ದೋಣಿಯಲ್ಲಿ ದಾಟಬೇಕಿತ್ತು. ಕುಂದಾಪುರ ಮುಟ್ಟುವ ವೇಳೆಗೆ ಸಾಕೋ ಸಾಕಾಯಿತು. ಇಂದಿನ ಕಷ್ಟ ನಾಳೆಯ ಸುಖಕ್ಕೆ ಮೆಟ್ಟಿಲು ಎಂದುಕೊಂಡು ಧೈರ್ಯವಹಿಸಿ ಎರಡು ನಾಟಕಗಳನ್ನು ಅಲ್ಲಿನ ಚಲನಚಿತ್ರ ಮಂದಿರದಲ್ಲಿ ಪ್ರದರ್ಶಿಸಿದೆವು. ಮೊದಲ ಎರಡು ದಿನ ಏನೂ ಕಲೆಕ್ಷನ್ ಆಗದೆ ಕೈಕಾಲುಗೆಟ್ಟೆವು. ಆದರೆ ಮೂರನೆಯ ದಿನ ಎಂಟುನೂರು ರೂಪಾಯಿಗಳ ಟಿಕೆಟ್ ಮಾರಾಟವಾಯಿತು. ಉಬ್ಬಿಹೋದ ನಾವು, ಹೆಚ್ಚಿನ ಪ್ರಚಾರದ ಸಲುವಾಗಿ ಗಾಡಿಯೊಂದನ್ನು ಗೊತ್ತು ಮಾಡಿದೆವು. ಗಾಡಿಗೆ ಮಗುವೊಂದು ಸಿಕ್ಕಿ ಮಡಿಯಿತು. ಕುಂದಾಪುರದ ಬಾಗಿಲು ಮುಚ್ಚಿತು. ಮತ್ತೆ ಉಡುಪಿಯೇ ಗತಿಯಾಯಿತು. ನಮ್ಮ ಹಿಂದಿನ ಕಂಟ್ರಾಕ್ಟುದಾರರಾದ ರಾಘವಾಚಾರ್ಯರನ್ನೇ

ಆಶ್ರಯಿಸಿದೆವು. ಪರಿಪೂರ್ಣ ಸಂಸ್ಕಾರವಂತರಾದ ಈ ಕಲಾಪ್ರೋತ್ಸಾಹಕರು ನೆರವಾದರು. ಉಡುಪಿಗೆ ಹಿಂತಿರುಗಿದ ನಾವು ಮತ್ತೆ ಹಿಂದಿನ ನಾಟಕಗಳನ್ನು ಆಡಿದೆವು. ಆದರೆ ಹೇಳಿಕೊಳ್ಳುವಂತಹ ಹಣ ಸಂಗ್ರಹವಾಗಲಿಲ್ಲ.

ಪೌರಾಣಿಕ ನಾಟಕಗಳಿಗೆ ಇಲ್ಲಿ ಹಣವಾಗುವುದಿಲ್ಲವಾದ್ದರಿಂದ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿ ಎಂದು ಕೆಲವರು ಸಲಹೆ ಮಾಡಿದ್ದರಿಂದ ಚಿಕ್ಕಬಸವರಾಜು ಹಾಗೂ ಕೊಟ್ಟೂರಪ್ಪ ಅವರುಗಳನ್ನು ಬಿಟ್ಟು ಮಿಸ್ ತಾರೆ ಎಂಬ ನಾಟಕವನ್ನು ಹಗಲೂ ರಾತ್ರಿ ಅಭ್ಯಾಸ ಮಾಡಿ ಆಡಿದೆವು. ಇದಕ್ಕೂ ಸಾರ್ವಜನಿಕರ ಪ್ರೋತ್ಸಾಹ ದೊರೆಯದೆ ಹೋಯಿತು. ಒಂದೂವರೆ ತಿಂಗಳ ಅವಧಿಯಲ್ಲಿ ನಮಗೆ ಲಭಿಸಿದ ಭಾಗ್ಯ - ಪ್ರತಿದಿನವೂ ಶ್ರೀಕೃಷ್ಣ ದರ್ಶನ. ಅಷ್ಟಮಠದ ಯತಿಗಳ ಸಮ್ಮುಖದಲ್ಲಿ ಕಂಪನಿಯ ಯಶಸ್ಸಿಗಾಗಿ ಸತ್ಯನಾರಾಯಣ ವ್ರತವನ್ನು ಮಾಡಿಸಿದೆವು. ಇದರ ಅಂಗವಾಗಿ ಬ್ರಾಹ್ಮಣ ಸುವಾಸಿನಿಯರಿಗೆ ಅನ್ನ ಸಂತರ್ಪಣೆ, ಉತ್ಸವಗಳನ್ನು ಏರ್ಪಡಿಸಿದೆವು.

ಇನ್ನು ಉಡುಪಿಯಲ್ಲಿರಲು ಅಸಾಧ್ಯವೆಂದು ತೀರ್ಮಾನಿಸಿ ನಾವು ಮಂಡಳಿಯೊಡನೆ ಅರಸೀಕೆರೆಗೆ ಹೋಗಲು ನಿರ್ಧರಿಸಿದೆವು. ಕ್ಯಾಂಪ್ ಮುಕ್ತಾಯಗೊಳ್ಳಲು ಕೊನೆಯ ಪಕ್ಷ ನಾಲ್ಕು ಸಹಸ್ರ ರೂ.ಗಳಾದರೂ ಬೇಕಿತ್ತು. ಏಳು ಲಾರಿಗಳಷ್ಟು ಸಾಮಾನು ಸಾಗಿಸಬೇಕಿತ್ತು. ಯುದ್ಧ ಕಾಲವಾದ್ದರಿಂದ ಲಾರಿ ಒಂದಕ್ಕೆ ಬಾಡಿಗೆ 750 ರೂ.ಗಳು. ರಾಘವಾಚಾರ್ಯರಿಗೆ ಕಂಟ್ರಾಕ್ಟ್ ಕೊಟ್ಟು ಮುಂಗಡವೆಂದು 7000 ರೂ.ಗಳನ್ನು ತೆಗೆದುಕೊಂಡೆವು. ಹಣ ಕೊಟ್ಟರೂ ಲಾರಿಗಳು ಬಾಡಿಗೆಗೆ ದೊರೆಯುವುದು ಸುಲಭದ ಮಾತಾಗಿರಲಿಲ್ಲ. ದೊಡ್ಡ ಬಸವರಾಜು ಅವರ ಅಪಾರ ಶ್ರಮದಿಂದ ಲಾರಿಗಳು ದೊರಕಿದವು. 3500 ರೂ. ಬಾಡಿಗೆ ಹಣವನ್ನು ಕೊಟ್ಟು ಅರಸೀಕೆರೆಗೆ ಸಾಮಾನುಗಳನ್ನು ಸಾಗಿಸಿದ್ದಾಯಿತು.

ಬಾಳಿನಲ್ಲಿ ಬೆಲ್ಲಕ್ಕಿಂತಲೂ ಬೇವನ್ನೇ ಹೆಚ್ಚಾಗಿ ತಿನ್ನಬೇಕೆಂಬುದು ವಿಧಿಯ ಸಂಕಲ್ಪವಾಗಿರುವಾಗ ನಮ್ಮ ನಾಟಕಗಳು ಹೇಗೆ ತಾನೆ ಯಶಸ್ವಿಯಾದಾವು ? ಸಂಜೆ ಐದು ಗಂಟೆಗೆ ನಾಟಕ ಪ್ರಾರಂಭವಾಗಬೇಕು. ಪ್ರಚಂಡ ಬಿರುಗಾಳಿ ಎದ್ದು ರಂಗಮಂದಿರ ಕುಸಿದು ಬಿತ್ತು. ಮುಂದೆ ವಾರದ ಕಾಲ ಹೆಣಗಿ ಥಿಯೇಟರ್ ರಿಪೇರಿ ಮಾಡಿ ಕನ್ನಡ ನಾಡಿನ ಹಿರಿಯ ನಾಟಕ ಮಂಡಳಿಗಳಲ್ಲೊಂದಾದ ಶ್ರೀ ಚಾಮುಂಡೇಶ್ವರಿ ನಾಟಕ ಸಭಾದೊಡನೆ ನಿಮ್ಮ ಊರಿಗೆ ಬಂದಿದ್ದೇವೆ. ಸಾರ್ವಜನಿಕರು ಮತ್ತು ಕಲಾಭಿಮಾನಿಗಳು ನಾಟಕಗಳನ್ನು ಹೆಚ್ಚು ಸಂಖ್ಯೆಯಲ್ಲಿ ಬಂದು ನೋಡಿ ಉದಾರವಾಗಿ ಪ್ರೋತ್ಸಾಹಿಸಬೇಕು ಎಂದು ಭಿತ್ತಿಪತ್ರಗಳ ಮೂಲಕ ಪ್ರಚಾರ ಕೈಗೊಂಡೆವು.

ಆದರೆ ನಮ್ಮ ಮನವಿ ನಿಷ್ಫಲವಾಯಿತು. ಕಲೆಕ್ಷನ್ ತುಂಬಾ ಡಲ್ ಆಯಿತು. ಇಂದಲ್ಲ ನಾಳೆ ಸರಿಹೋಗಬಹುದೆಂಬ ಭರವಸೆಯಿಂದ ಒಂಬತ್ತು ನಾಟಕಗಳನ್ನು

ಪ್ರದರ್ಶಿಸಿದೆವು. 10ನೇ ನಾಟಕದ ಉತ್ಪತ್ತಿ ಕಂಡು ನಿರಾಶೆಯಿಂದ ಗಗನವೇ ತಲೆಯ ಮೇಲೆ ಬಿದ್ದಂತಾಯಿತು. ರಾಘವಾಚಾರ್ಯರು ತೀರಾ ಬೇಸರದಿಂದ 'ಇನ್ನು ಮುಂದಿನ ನಾಟಕಗಳನ್ನು ನೀವೇ ಸ್ವಂತವಾಗಿ ಆಡಿಕೊಳ್ಳಿ. ಕಂಟ್ರಾಕ್ಟ್ ನಾಟಕಕ್ಕೆ ಕೊನೆಯ ನಮಸ್ಕಾರ' ಎಂದರು. ನಾವೇ ಸ್ವಂತವಾಗಿ ಕೆಲವು ನಾಟಕಗಳನ್ನಾಡಿದೆವು. ಹಣವಾಗಲಿಲ್ಲ. ಕಂಪನಿಯನ್ನೇ ನಿಲ್ಲಿಸಿಬಿಡಬೇಕೆಂಬ ಯೋಚನೆ ತಲೆಹಾಕಿತು. ಆಗ ರಾಘವಾಚಾರ್ಯರೇ ಚನ್ನರಾಯಪಟ್ಟಣದಲ್ಲಿ ನಾಟಕಗಳನ್ನಾಡಿ ಎಂದು ಸಲಹೆಯಿತ್ತರು.

ಅದೃಷ್ಟ ಪರೀಕ್ಷೆಗಾಗಿ ಚನ್ನರಾಯಪಟ್ಟಣಕ್ಕೆ ಹೋದೆವು. ಕೆಲವು ನಾಟಕಗಳಿಗೆ ಮಾತ್ರ ಸೊಗಸಾದ ಕಲೆಕ್ಷನ್ ಆಯಿತು. ಮಿಕ್ಕ ನಾಟಕಗಳು ಕುಂಟುತ್ತಾ ನಡೆದವು. ಒಂದು ದಿನ 'ರಾಜಸೂಯ ಯಾಗ' ನಾಟಕವನ್ನು ಪ್ರದರ್ಶಿಸುತ್ತಿದ್ದೆವು. ಜನ ಸಾಕಷ್ಟು ಸೇರಿದ್ದರು. ಅವರಲ್ಲಿ ಮಹಮದೀಯರೇ ಹೆಚ್ಚು. ಕಲಾವಿಶಾರದ ಕೊಟ್ಟೂರಪ್ಪನವರು ಆಂಜನೇಯ ಮತ್ತು ಅರ್ಜುನನ ಪಾತ್ರವನ್ನೂ, ಚಿಕ್ಕಬಸವರಾಜು ಕೃಷ್ಣನ ಪಾತ್ರವನ್ನೂ, ನಾನು ದ್ರೌಪದಿಯ ಪಾತ್ರವನ್ನೂ ವಹಿಸಿದ್ದೆ. ನಾಟಕ ಯಶಸ್ವಿಯಾಗೇ ನಡೆಯಿತು.

ಮಾರನೆಯ ದಿನ ನಾವು ಕಂಪನಿಯಲ್ಲಿ ಕುಳಿತಿದ್ದಾಗ ಕೆಲವು ಮಹಮ್ಮದೀಯರು ತಮ್ಮ ಮುಖಂಡರೊಡನೆ ಆಗಮಿಸಿ 'ನೋಡಿ, ನಿಮ್ಮ ನಾಟಕದ ಹಾಸ್ಯ ದೃಶ್ಯದ ಸಂಭಾಷಣೆ ನಮ್ಮ ಮತಕ್ಕೆ ಸಂಬಂಧಿಸಿದಂತಿದೆ. ಅದನ್ನು ದಯವಿಟ್ಟು ಇಂದಿನಿಂದ ತೆಗೆದುಹಾಕಿ' ಎಂದು ಪ್ರಾರ್ಥಿಸಿದರು. ಅದುವರೆವಿಗೂ ನಮಗೆ ಆ ಸಂಭಾಷಣೆಯ ಕಡೆ ಗಮನವೇ ಹರಿದಿರಲಿಲ್ಲ. ಸರಿ, ಅಂದಿನಿಂದ ಆ ಸಂಭಾಷಣೆಯ ಭಾಗವನ್ನು ತೆಗೆದುಹಾಕಿದೆವು. ಅಂದು ನಾಟಕಕ್ಕೆ ಆಗಮಿಸಿದ್ದ ಮಹಮ್ಮದೀಯರಿಗೆ ಇದರಿಂದ ತುಂಬಾ ಸಂತೋಷ ಉಂಟಾಯಿತು.

ಈ ನಾಟಕದ ನಂತರ 'ಮಿಸ್ ತಾರಾ' ನಾಟಕವನ್ನು ಪ್ರದರ್ಶಿಸತೊಡಗಿದೆವು. ಈ ನಾಟಕಕ್ಕೆ ಮಹಮ್ಮದೀಯರೇ ಅಧಿಕ ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹಿಸಿದರು. ಅವರ ಮಿಗಿಲಾದ ಪ್ರೋತ್ಸಾಹದಿಂದ ಸ್ವಲ್ಪ ಚೇತರಿಸಿಕೊಳ್ಳುವಂತೆ ಆಯಿತು.

ಈ ಸಮಯದಲ್ಲೇ ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂತಸದ ಸುದ್ದಿ ತಿಳಿಯಿತು. ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಬಗ್ಗೆ ಯಾರಿಗೆ ಸಂತೋಷವಿಲ್ಲ ? ಕೋಟ್ಯಾಂತರ ಜನ ಸಂತೋಷ ಸಾಗರದಲ್ಲಿ ಮುಳುಗುವ ಆ ದಿನವನ್ನು ನಾವೂ ಸಂತೋಷವಾಗಿ ಆಚರಿಸಲು ನಿರ್ಧರಿಸಿದೆವು. ಮರುದಿನ ನಮ್ಮಲ್ಲಿ ಅಭಿಮನ್ಯು ನಾಟಕದಲ್ಲಿ ಕೃಷ್ಣ - ಅಭಿಮನ್ಯು ಪಾತ್ರಧಾರಿಗಳು ಕುಳಿತುಕೊಳ್ಳುತ್ತಿದ್ದ ರಥವನ್ನು ಶೃಂಗರಿಸಿ, ರಾಷ್ಟ್ರನಾಯಕರ ಭಾವಚಿತ್ರಗಳನ್ನು ತಾಯಿ ಶ್ರೀ ಚಾಮುಂಡೇಶ್ವರಿಯ ಫೋಟೋದೊಡನೆ ಊರಿನೆಲ್ಲೆಡೆ ಮೆರವಣಿಗೆ ಮಾಡಿದೆವು. ಈ ಸಂಭ್ರಮದ ಅಂಗವಾಗಿ ನಾಲ್ಕಾರು ದಿನಗಳು ಒಳ್ಳೆಯ ಕಲೆಕ್ಷನ್ ಆಯಿತು. ◆

## ಕಾಲಿಟ್ಟ ಕಡೆಯಲ್ಲಿ ಕಹಿ ಅನುಭವ

ಚನ್ನರಾಯಪಟ್ಟಣದಲ್ಲಿ ನಾಟಕ ಆಡುತ್ತಿದ್ದಂತೆಯೇ ನಮ್ಮ ಸಂಸ್ಥೆಗೆ ಕಷ್ಟ ನಷ್ಟದ ಕಾಲದಲ್ಲೆಲ್ಲಾ ಆರ್ಥಿಕ ನೆರವು ನೀಡುತ್ತಿದ್ದ ರಾಘವಾಚಾರ್ಯರು ಇನ್ನು ಮುಂದೆ ನನ್ನಿಂದ ಯಾವ ಆರ್ಥಿಕ ನೆರವೂ ದೊರೆಯದು ಎಂದು ಹೇಳಿಬಿಟ್ಟರು. 'ನಿಮ್ಮ ಸ್ವಂತ ಶಕ್ತಿ ಸಾಮರ್ಥ್ಯಗಳಿಂದ ಸಂಸ್ಥೆಯನ್ನು ನಡೆಸುವುದಾದರೆ ನಿಜಕ್ಕೂ ಸಂತೋಷ. ಈಗ ಸಂಸ್ಥೆಯ ಸ್ಥಿತಿಗತಿಗಳು ಸ್ವಲ್ಪವೂ ಚೆನ್ನಾಗಿಲ್ಲ. ನಿಮ್ಮ ಗ್ರಹಚಾರವೂ ನೆಟ್ಟಗಿಲ್ಲದಿರುವುದರಿಂದ ಸದ್ಯಕ್ಕೆ ಕಂಪನಿಯನ್ನು ನಿಲ್ಲಿಸುವುದೇ ಸೂಕ್ತವೆಂದು ನನ್ನ ಅಭಿಪ್ರಾಯ' ಎಂದು ಹೇಳಿದರು. ಒಂದೆರಡು ದಿನಗಳ ತುರ್ತು ಕೆಲಸವಿರುವುದರಿಂದ ಹಾಸನಕ್ಕೆ ಹೋಗಿ ಬರುತ್ತೇನೆ ಎಂದು ತಿಳಿಸಿ ಹೊರಟು ಹೋದರು. ಹಾಸನದಲ್ಲಿ ಅವರು ಹಾಸ್ಯಚಕ್ರವರ್ತಿ ಕೆ. ಹಿರಣ್ಣಯ್ಯನವರ ಮಿತ್ರಮಂಡಳಿಯ ನಾಟಕಗಳನ್ನು ಕಂಟ್ರಾಕ್ಟ್ ಮಾಡತೊಡಗಿದರು.

ಕಂಪನಿಯ ಇತಿಶ್ರೀ ಹಾಡುವಂತಹ ಪರಿಸ್ಥಿತಿ ಬಂದೊದಗಿತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ದೊಡ್ಡ ಬಸವರಾಜು ಅವರು ಕಂಪನಿ ಮತ್ತೆ ತಲೆಯೆತ್ತುವಂತೆ ಮಾಡಲು ಕಂಕಣಬದ್ಧರಾದರು. ಅವರು ನನಗೆ ಕಂಪನಿ ನಡೆಯಲು ಇಷ್ಟು ಪ್ರಯತ್ನಗಳಾಗಿವೆ. ಈಗ ಅವಸರದ ಪ್ರವೃತ್ತಿ ಸಲ್ಲದು. ನಾನು ಚನ್ನಪಟ್ಟಣಕ್ಕೆ ಹೋಗಿ ಬರುವವರೆಗೂ ಕಂಪನಿ ನಿಲ್ಲಿಸುವ ಆಲೋಚನೆ ಬೇಡ ಎಂದು ಹೇಳಿ ಚನ್ನಪಟ್ಟಣಕ್ಕೆ ಹೋದರು. ಎರಡು - ಮೂರು ದಿನಗಳಲ್ಲಿ ಅಲ್ಲಿಂದ ಮರಳಿದ ಅವರು ಬಹು ಹರ್ಷಚಿತ್ತರಾಗಿದ್ದರು. ಹೋದ ಕಾರ್ಯವನ್ನು ಸಾಧಿಸಿಕೊಂಡೇ ಬಂದಿರುವರೆಂಬುದನ್ನು ಅವರ ಉತ್ಸಾಹ - ಹುಮ್ಮಸ್ಸು ಸಾರಿ ಹೇಳುತ್ತಿತ್ತು.

ಸ್ಥಳೀಯ ಕಲಾಪ್ರೋತ್ಸಾಹಕರ ಆಸ್ಥೆಯಿಂದಾಗಿ ಚನ್ನಪಟ್ಟಣದ ಮಂಗಳವಾರ ಪೇಟೆಯಲ್ಲಿ ರಂಗಮಂದಿರದ ನಿರ್ಮಾಣ ಸಾಗಿತು. ಚನ್ನರಾಯಪಟ್ಟಣ ಕ್ಯಾಂಪನ್ನು ಮುಗಿಸಿ ಎಲ್ಲಾ ಕಲಾವಿದರಿಗೂ ಹತ್ತು ದಿನಗಳ ರಜಾವನ್ನು ಕೊಟ್ಟು ಚನ್ನಪಟ್ಟಣ ಕ್ಯಾಂಪ್‌ಗೆ ಬರಬೇಕೆಂದು ತಿಳಿಸಿದೆವು. 1947ರ ಆಗಸ್ಟ್ 10ನೇ ದಿನಾಂಕದಂದು ಚನ್ನಪಟ್ಟಣದಲ್ಲಿ ಮೊದಲ ನಾಟಕವನ್ನು ಆಡಲು ನಿಶ್ಚಯಿಸಿ ಊರುಗಳಿಗೆ ತೆರಳಿದ್ದ ಎಲ್ಲ ನಟ - ನಟಿಯರಿಗೂ ಈ ವಿಚಾರವನ್ನು ಪತ್ರ ಮುಖೇನ ತಿಳಿಸಿದೆವು. ಸುತ್ತಮುತ್ತಲಿನ ಹಳ್ಳಿಗಳಲ್ಲೆಲ್ಲಾ ಪ್ರಚಾರ ಅದ್ದೂರಿಯಿಂದ ಸಾಗಿತು.

ಆದರೆ ವಿಧಿ ನಮಗೆ ಮತ್ತೆ ಎದುರಾಯಿತು. ನಮ್ಮೊಡನೆ ಮತ್ತೆ ಅದು ಕಣ್ಣುಮುಚ್ಚಾಲೆಯಾಟವಾಡಿತು. ನಾಟಕ ನಾಳೆ ಪ್ರಾರಂಭ ಎನ್ನುವಾಗ ಮಂಗಳವಾರ ಪೇಟೆಯಲ್ಲಿ ಪ್ಲೇಗ್ ಮಾರಿ ತಲೆಹಾಕಿದ್ದಳು. ಪ್ಲೇಗು ಅಂಟುಜಾಡ್ಯ ವಾದ್ದರಿಂದ ನಾಟಕಕ್ಕೆ ಲೈಸೆನ್ಸ್ ನೀಡಲು ಅಮಲ್ದಾರರು ನಿರಾಕರಿಸಿದರು. ಇದರೊಂದಿಗೆ ಮೂರು ಜನ ಪ್ಲೇಗಿಗೆ ಬಲಿಯಾದ್ದರಿಂದ ಜಿಲ್ಲಾ ಆರೋಗ್ಯಾಧಿಕಾರಿಗಳು ಆರೋಗ್ಯ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರು. ಅಮಲ್ದಾರರ ಅನುಮತಿಯಿಲ್ಲದೆ ಲೈಸೆನ್ಸ್ ಪಡೆಯುವಂತೆಯೇ ಇರಲಿಲ್ಲ. ಹೇಗಾದರೂ ಮಾಡಿ ಲೈಸೆನ್ಸ್ ನೀಡಬೇಕೆಂದು ಅಮಲ್ದಾರರನ್ನು ಮೇಲಿಂದ ಮೇಲೆ ಒತ್ತಾಯಿಸಿದಾಗ ಅವರು ಪೇಚಿಗೆ ಸಿಕ್ಕಿ ಪರಿಸ್ಥಿತಿ ಈಗ ಸರಿಯಿರುವುದರಿಂದ ಲೈಸೆನ್ಸ್ ಕೊಡಬಹುದೆಂದು ಆರೋಗ್ಯಾಧಿಕಾರಿಗಳಿಗೆ ಶಿಫಾರಸ್ಸು ಮಾಡಿದರು. ಆದರೂ ಲೈಸೆನ್ಸ್ ಸಿಗಲೇ ಇಲ್ಲ.

ಇದೇ ಪರಿಸ್ಥಿತಿಯಲ್ಲಿ ಎರಡು ತಿಂಗಳು ತೆಪ್ಪಗೆ ಕೂಡಬೇಕಾಯಿತು. ಎಪ್ಪತ್ತೆಂಟು ಜನರ ಶಿವನ ಸಂಸಾರಕ್ಕೆ ಊಟದ ವ್ಯವಸ್ಥೆಯನ್ನು ಮಾಡಬೇಕಾಗಿದ್ದುದರಿಂದ ಅಪಾರ ತೊಂದರೆಯನ್ನು ಅನುಭವಿಸಬೇಕಾಯಿತು. ಇದೇ ವೇಳೆಗೆ ರೈಲ್ವೆ ಮುಷ್ಕರ ಬೇರೆ. ಊರಿಗೆ ಹೋಗಲು ಅನೇಕ ನಟರು ಸಿದ್ಧರಿದ್ದರೂ ಟ್ರೈನುಗಳ ಓಡಾಟವೇ ಸ್ಥಗಿತಗೊಂಡಿತ್ತು. ಕೇವಲ 2-3 ಬಸ್ಸುಗಳು ಬೆಂಗಳೂರಿನಿಂದ ಮೈಸೂರಿಗೆ ಓಡಾಡುತ್ತಿದ್ದವು. ಒಂದೆಡೆಯಿಂದ ಇನ್ನೊಂದು ಕಡೆಗೆ ಅಕ್ಕಿ ಸಾಗಿಸುವುದು ಕೂಡ ಅಪರಾಧವೆಂದು ಪರಿಗಣಿಸುತ್ತಿದ್ದ ಕಾಲ. ಎಲ್ಲ ತೊಂದರೆಗಳನ್ನು ನಾವು ಏಕಕಾಲಕ್ಕೆ ಅನುಭವಿಸಬೇಕಾಗಿ ಬಂದು ಐದಾರು ಸಾವಿರ ಹಣವನ್ನು ಸಾಲ ಮಾಡಬೇಕಾಗಿ ಬಂದಿತು.

ದಿಕ್ಕು ತೋಚದೆ ಕುಳಿತಿದ್ದ ನಮಗೆ ಅಂದು ಚನ್ನಪಟ್ಟಣದ ಪೋಲೀಸ್ ಇನ್ಸ್‌ಪೆಕ್ಟರ್ ಆಗಿದ್ದ ಹನುಮಂತರಾಯರು ಲೈಸೆನ್ಸ್ ದೊರಕುವಂತೆ ಮಾಡಿ ಉಪಕರಿಸಿದರು. ಪ್ರಾರಂಭದ ನಾಟಕ 'ರಾಜಸೂಯ ಯಾಗ'. ಅಮಲ್ದಾರ್ ವೀರಪ್ಪ ಅವರ ಅಧ್ಯಕ್ಷತೆ. ಭರ್ಜರಿ ಕಲೆಕ್ಷನ್ ಆಯಿತು. ಇದರಿಂದ ಉತ್ಸಾಹಿತರಾದ ನಾವು ದಾನಶೂರ ಕರ್ಣ, ಗುಲೇಬಕಾವಲಿ, ಮನ್ಮಥ ವಿಜಯ ಮೊದಲಾದ ನಾಟಕಗಳನ್ನು ಪ್ರದರ್ಶಿಸಿದೆವು. ಈ ನಾಟಕಗಳಿಗೂ ಜನ ಕಿಕ್ಕಿರಿದು ನೆರೆದು ಪ್ರೋತ್ಸಾಹಿಸಿದರು. ಉಡುಗಿ ಹೋಗಿದ್ದ ಉಸಿರು ಮತ್ತೆ ಆಡತೊಡಗಿತು.

ಈ ಮೊಕ್ಕಾಂನಲ್ಲಿ ಬೆಂಗಳೂರಿನಿಂದ ತಬಲಾ ಕಳಸಪ್ಪ, ಶ್ರೀಕಂಠಾಚಾರ್, ಶಂಕರಾಚಾರ್, ಬಿ. ಎಸ್. ಮಂಜುಳ, ಜಮಖಂಡಿಯ ಸರೋಜ, ಗಾಣಿಗರ ಮುನಿಸ್ವಾಮಯ್ಯ ಮೊದಲಾದವರು ನಮ್ಮ ನಾಟಕ ಮಂಡಳಿಗೆ ಬಂದು ಸೇರಿದರು. ತಬಲಾ ಕಳಸಪ್ಪನವರು ಶ್ರೀ ಕೃಷ್ಣಲೀಲಾ ನಾಟಕ ಆಡಿ ಎಂದು ಬಲವಂತ

ಮಾಡತೊಡಗಿದರು. ಈ ನಾಟಕದಲ್ಲಿ ಕೊಟ್ಟೂರಪ್ಪನವರಿಗೆ ಪಾತ್ರವಿರಲಿಲ್ಲವಾದ್ದರಿಂದ ಅವರು ಮೈಸೂರಿಗೆ ಹೋಗಿಬರುವುದಾಗಿ ಹೇಳಿ ಹೊರಟು ಹೋದರು. ಒಂದು ವಾರ ಪರ್ಯಂತ ಸತತ ಅಭ್ಯಾಸ ಮಾಡಿ ನಾಟಕವಾಡಿದೆವು. ಈ ನಾಟಕವನ್ನು ನೋಡಿದ ಕಲಾರಸಿಕರು ನಟ - ನಟಿಯರ ಅಭಿನಯ ಕೌಶಲ್ಯಕ್ಕೆ ತಲೆದೂಗಿದರು. ಈ ನಾಟಕದ ಹಾಡುಗಳು ಜನರ ಬಾಯಲ್ಲಿ ನಲಿದಾಡತೊಡಗಿದವು.

'ಶ್ರೀ ಕೃಷ್ಣಲೀಲಾ' ಒಂದೇ ಸಮನೆ ಇಪ್ಪತ್ತೇಳು ಪ್ರದರ್ಶನಗಳನ್ನು ಕಂಡಿತು. ಒಂದೊಂದು ದಿನ ಒಬ್ಬೊಬ್ಬರಂತೆ ಬಾಲಕೃಷ್ಣನ ಪಾತ್ರ ವಹಿಸುತ್ತಿದ್ದ ಮಂಜುಳಾ, ಗುರುರಾಜ, ಶಾರದಾ ಅವರುಗಳಿಗೆ ಪ್ರತಿದಿನವೂ ಬಹುಮಾನಗಳು ಲಭಿಸುತ್ತಿದ್ದವು. ರಾಧೆಯ ಪಾತ್ರ ವಹಿಸುತ್ತಿದ್ದ ಸರೋಜ, ಕೃಷ್ಣನ ಪಾತ್ರ ವಹಿಸುತ್ತಿದ್ದ ಮಂಜುಳಾ, ಮಕರಂದ ಪಾತ್ರಧಾರಿ ದೊಡ್ಡ ಬಸವರಾಜು,ಕಂಸನ ಪಾತ್ರಧಾರಿ ಜಿ. ಎನ್. ಮುನಿಸ್ವಾಮಿ ಎಲ್ಲರೂ ಪ್ರೇಕ್ಷಕರ ಪ್ರಶಂಸೆಗೆ ಒಳಗಾದರು. ಈ ಕ್ಯಾಂಪಿನಲ್ಲೇ ಇಂದು ಆಕಾಶವಾಣಿಯಲ್ಲಿ ಕಲಾವಿದರಾಗಿರುವ ಶ್ರೀಮತಿ ಎಸ್.ಕೆ. ಪದ್ಮಾದೇವಿ ಮತ್ತು ಅವರ ಸಹೋದರಿ ಮಿತ್ರವಿಂದ ಅವರುಗಳನ್ನೂ ಕರೆಸಿಕೊಂಡಿದ್ದೆವು. ನಾನು ವಹಿಸುತ್ತಿದ್ದ ಯಶೋಧ ಪಾತ್ರವಂತೂ ಪ್ರೇಕ್ಷಕರ ಅಪಾರ ಪ್ರಶಂಸೆಗೆ ಒಳಗಾಯಿತು.

1947ನೇ ನವಂಬರ್ 22ನೇ ಶನಿವಾರ. ಬಣ್ಣ ಬಳಿದುಕೊಂಡು ರಂಗಮಂಚದ ಮೇಲಿದ್ದೆ. ನಿಮ್ಮ ತಂದೆ ಪಿಟೀಲು ಸುಬ್ಬಣ್ಣನವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶಿವೈಕ್ಯರಾದರು ಎಂಬ ದಾರುಣ ವಾರ್ತೆ ಬರಸಿಡಿಲಿನಂತೆ ಎರಗಿತು. ಅದರೆ ಅದು ಪರಮ ಸತ್ಯ. ಅಭಿನಯ, ಸಂಗೀತ ರಂಗಗಳಲ್ಲಿ ನನ್ನನ್ನು ಪ್ರವರ್ಧಮಾನಕ್ಕೆ ತರಲು ಅವಿರತವಾಗಿ ಶ್ರಮಿಸಿದ, ಸಂಗೀತ ಲೋಕದಲ್ಲಿ ಜ್ವಾಜ್ವಲ್ಯಮಾನವಾಗಿ ಪ್ರಕಾಶಿಸಲು ಕಾರಣರಾದ ಆ ನನ್ನ ತಂದೆ, ನನ್ನನ್ನು ಅಗಲಿದ್ದರು. ಕಲೆಗಾಗಿ ಅಹರ್ನಿಶಿ ದುಡಿದು, ದಣಿದು, ಹಾಡಿ ಹಣ್ಣಾಗಿ, ಸುಣ್ಣಾಗಿ ಹೋದ ಅವರನ್ನು ನೆನೆದು ದುಃಖ ಒತ್ತರಿಸಿ ಬಂದು ರಂಗದ ಮೇಲೆ ಕುಸಿದುಬಿದ್ದೆ.

ಚಿಕ್ಕಬಸವರಾಜು ಹಾಗೂ ಹಲವಾರು ಕಂಪನಿಯ ನಟ-ನಟಿಯರೆಲ್ಲರೂ ಬಂದು ನನಗೆ ಸಮಾಧಾನ ಹೇಳಿದರು. ಅಂತ್ಯ ಸಂಸ್ಕಾರಕ್ಕೆ ಹೋಗುವ ಸಲುವಾಗಿ ನಾಟಕ ನಿಲ್ಲಿಸಿ, ರಾತ್ರಿ ರೈಲಿನಲ್ಲಿ ಬೆಂಗಳೂರು ಸೇರಿ, ಆಸ್ಪತ್ರೆಗೆ ಹೋಗುವ ಹೊತ್ತಿಗೆ ಅಲ್ಲಿ ಅಸಾಧ್ಯ ಜನ. ನನ್ನ ಅಣ್ಣ ಪುಟ್ಟಮಲ್ಲಪ್ಪನವರೂ, ಅಕ್ಕ ಪಾರ್ವತಮ್ಮನವರೂ, ನಟಭಯಂಕರ ಗಂಗಾಧರರಾಯರೂ ಆ ವೇಳೆಗಾಗಲೇ ಅಲ್ಲಿಗೆ ಧಾವಿಸಿ ಬಂದಿದ್ದರು.

ನನ್ನ ತಂದೆ, ಅಕಸ್ಮಾತ್ ಜಾರಿ ಬಿದ್ದು ತೊಡೆಯ ಮೂಳೆ ಮುರಿದು ಒಂದು ತಿಂಗಳ ಕಾಲದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪ್ರಾಣವಾಯು ಹಾರಿಹೋಗುವ ಮುನ್ನ ಅವರು ತುಂಬ ಕಷ್ಟಪಟ್ಟರಂತೆ. ಮೈಸೂರು ರೋಡಿನಲ್ಲಿರುವ

ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರಕ್ಕೆ ಏರ್ಪಾಟಾಯಿತು. ಭಾನುವಾರ ಮಧ್ಯಾಹ್ನ ಜರುಗಿದ ಅಂತ್ಯಸಂಸ್ಕಾರದ ವೇಳೆಯಲ್ಲಿ ಅಪಾರವಾದ ಜನಸಂದಣಿ ನೆರೆಯಿತು. ಅಲ್ಲಿ ನಿಂತಾಗ, ನನಗೆ ಕೊಳ್ಳೇಗಾಲದಲ್ಲಿ ತಂದೆಯವರು ಮುಂಜಾನೆ ನಾಲ್ಕು ಗಂಟೆಗೇ ಶಿಷ್ಯರನ್ನೆಲ್ಲಾ ಕರೆಸಿಕೊಂಡು ಅವರಿಗೆಲ್ಲಾ ಉಪಾಹಾರ ಕೊಟ್ಟು ಯಾರಿಗೂ ಯಾವುದನ್ನೂ ಮರೆಮಾಚದೆ ಪಾಠಹೇಳಿಕೊಡುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಾಯಿತು. ಧಾರಾಕಾರವಾಗಿ ಕಣ್ಣೀರು ಹರಿಯಿತು. ದಾರುಣವಾದ ಮೂಕ ಸಂಕಟ ದಹಿಸುತ್ತಿದ್ದಂತೆ ಮತ್ತೆ ಚನ್ನಪಟ್ಟಣಕ್ಕೆ ಬಂದೆ.

ಮತ್ತೆ ನಾಟಕರಂಗದ ವ್ಯವಹಾರ ಪ್ರಾರಂಭವಾಯಿತು. ಚನ್ನಪಟ್ಟಣದ ಗಣ್ಯನಾಗರಿಕರಾಗಿದ್ದ ಶ್ರೀ ತಮ್ಮಣ್ಣಗೌಡರ ಮುಖಾಂತರ ಚನ್ನಪಟ್ಟಣಕ್ಕೆ ಒಂಬತ್ತು ಮೈಲಿ ದೂರದಲ್ಲಿದ್ದ ಕೆಲವು ಗ್ರಾಮಸ್ಥರಿಗೆ ನಾಟಕಗಳ ಕಾಂಟ್ರ್ಯಾಕ್ಟ್ ಕೊಟ್ಟೆವು. ಹತ್ತು ನಾಟಕಗಳ ಕಾಂಟ್ರ್ಯಾಕ್ಟ್ ತೆಗೆದುಕೊಂಡ ಅವರು ಎಲ್ಲಾ ನಾಟಕಗಳಲ್ಲೂ ಕೊಟ್ಟೂರಪ್ಪನವರು, ಕೃಷ್ಣನ ಪಾತ್ರಧಾರಿ ಚಿಕ್ಕಬಸವರಾಜು ಅವರು ಇರಬೇಕೆಂದು ಷರತ್ತು ಹಾಕಿದರು. ಷರತ್ತಿಗೆ ಒಪ್ಪಿ ಮೈಸೂರಿನಿಂದ ಕೊಟ್ಟೂರಪ್ಪನವರನ್ನು ಕರೆಸಿದೆವು.

ಒಂಬತ್ತು ಮೈಲಿ ದೂರದ ಆ ಹಳ್ಳಿಗೆ ಪ್ರತಿದಿನ ಚನ್ನಪಟ್ಟಣದಿಂದ ವ್ಯಾನಿನಲ್ಲಿ ಹೋಗಿ ನಾಟಕವಾಡಿ ಪುನಃ ಚನ್ನಪಟ್ಟಣಕ್ಕೆ ಬರುತ್ತಿದ್ದೆವು. ಚನ್ನಪಟ್ಟಣದ ಕೋಟೆಯ ಬಳಿ ಆಂಜನೇಯ ದೇವಸ್ಥಾನ ತುಂಬ ಶಿಥಿಲವಾಗಿದ್ದು ಆ ದೇವಸ್ಥಾನದ ಅಭಿವೃದ್ಧಿಗಾಗಿ ಸಹಾಯಾರ್ಥ ನಾಟಕವೊಂದನ್ನು ಆಡಿಕೊಡಬೇಕೆಂದು ಚನ್ನಪಟ್ಟಣದ ನಾಗರಿಕರು ಕೇಳಿದಾಗ ದೇವರ ಕೆಲಸಕ್ಕೆ ಎಂದೂ ಮುಂದಾಗುತ್ತಿದ್ದ ನಾವು ಸಂತೋಷದಿಂದ ಒಪ್ಪಿಕೊಂಡೆವು.

ಇಲ್ಲಿ 10-15 ದಿನಗಳು ನಾಟಕಗಳನ್ನು ಪ್ರದರ್ಶಿಸುವಷ್ಟರಲ್ಲಿ ಮಳೆ ಪ್ರಾರಂಭವಾಯಿತು. ಗಾಳಿ ಪ್ರಚಂಡವಾಗಿ ಬೀಸಿದ್ದರಿಂದ ಇಡೀ ರಂಗಮಂದಿರ ಕುಸಿದು ಬಿದ್ದಿತು. ಥಿಯೇಟರ್ ಕಟ್ಟಿಸಿ ಲೈಸೆನ್ಸ್ ಪಡೆದು ನಾಟಕವಾಡಲು ನಾವು ಪಟ್ಟ ಶ್ರಮ ವರ್ಣನಾತೀತ.

ಆರ್ಥಿಕ ಪರಿಸ್ಥಿತಿ ಪೂರ್ಣ ಹದಗೆಟ್ಟಿತ್ತು. ಯುಗಾದಿ ಹಬ್ಬ ಬಂದದ್ದರಿಂದ ನಟ-ನಟಿಯರು ಸಂಬಳಕ್ಕಾಗಿ ಒತ್ತಾಯ ಮಾಡತೊಡಗಿದರು. ಬನ್ನೂರು ಕ್ಯಾಂಪ್ ಮಾಡಲು ಸಿದ್ಧತೆ ನಡೆದಿತ್ತು. ಸಂಬಳ ಕೊಡದಿದ್ದರೆ ನಾಟಕಕ್ಕೆ ಹಾಜರಾಗಲು ಸಾಧ್ಯವೇ ಇಲ್ಲವೆಂದು ನಟ-ನಟಿಯರು ಹೇಳಿದಾಗ, ನನ್ನಲ್ಲಿದ್ದ ಆಭರಣಗಳನ್ನೆಲ್ಲಾ ಒತ್ತೆಯಿಟ್ಟು ಸಂಬಳ ಕೊಟ್ಟಿದ್ದಾಯಿತು. ಕಾಂಟ್ರ್ಯಾಕ್ಟ್ ನಾಟಕವಾದ ಮೇಲೆ ಕೂಡಲೇ ನಾಟಕದ ಸಾಮಾನುಗಳನ್ನೆಲ್ಲಾ ಮೈಸೂರಿಗೆ ಸಾಗಿಸಿ ಕಂಪನಿಯನ್ನು ನಿಲ್ಲಿಸಲು ತೀರ್ಮಾನಿಸಿದೆವು. ಕಾಂಟ್ರ್ಯಾಕ್ಟ್ ಕೊಟ್ಟರೆ ನಾಟಕಗಳಿಗೆ ಹಣವಾಗುತ್ತಿತ್ತು. ಸ್ವಂತವಾಗಿ ಆಡಿದರೆ ನಷ್ಟ

ಕಟ್ಟಿಟ್ಟ ಬುತ್ತಿ ಎನಿಸುತ್ತಿದ್ದುದೂ ಕಂಪನಿ ಮುಚ್ಚುವ ನಿರ್ಣಯ ಮಾಡಲು ಒಂದು ಕಾರಣ.

ಮೊದಲಿನಿಂದಲೂ ನಮಗೆ ಜ್ಯೋತಿಷ್ಯದಲ್ಲಿ ಅಪಾರ ನಂಬಿಕೆ. ಪ್ರಸಿದ್ಧ ಜ್ಯೋತಿಷಿಗಳೊಬ್ಬರನ್ನು ಬನ್ನೂರಿಗೆ ಬರಮಾಡಿಕೊಂಡು ಶಾಸ್ತ್ರ ಕೇಳಿದೆವು. 'ಎರಡು ತಿಂಗಳ ನಂತರ ನಿಮಗೆ ಒಳ್ಳೆಯ ದೆಶೆಯಿದೆ. ಕಂಪನಿ ನಿಲ್ಲಿಸಬೇಡಿ' ಎಂದರು ಅವರು. ಈ ಸಮಯದಲ್ಲಿ ನಮ್ಮ ನಾಟಕದ ಸಾಮಾನುಗಳು ಅರ್ಧ ಬನ್ನೂರಿನಲ್ಲೂ, ಉಳಿದರ್ಧ ಕಾನಕಾನಹಳ್ಳಿಯಲ್ಲಿಯೂ ಇದ್ದುದರಿಂದ ನಾವು ಪುನಃ ಕಾನಕಾನಹಳ್ಳಿಗೆ ಬಂದೆವು.

ಇಲ್ಲೂ ಕಾಂಟ್ರಾಕ್ಟ್ ನಾಟಕ. ಒಂದು ವಾರ ಸುಮಾರು ಉತ್ಪತ್ತಿಯಾಯಿತು. ಭಾರತ ಭಾಗ್ಯ ವಿಧಾತ ಗಾಂಧೀಜಿಯವರ ನಿಧನದ ವಾರ್ತೆಯನ್ನು ಈ ಮೊಕ್ಕಾಂನಲ್ಲಿ ಕೇಳಬೇಕಾಯಿತು. ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಬಾಪು ಹಂತಕನೊಬ್ಬನ ಗುಂಡೇಟಿಗೆ ಬಲಿಯಾಗಿ ಅಸ್ತಂಗತರಾದ ಬಗ್ಗೆ ಇಡೀ ದೇಶಕ್ಕೆ ದೇಶವೇ ದುಃಖಸಾಗರ ದಲ್ಲಿ ಮುಳುಗಿತು. ನಾವೂ ನಾಟಕ ನಿಲ್ಲಿಸುವ ಮೂಲಕ ಬಾಪೂಜಿಗೆ ಶ್ರದ್ಧಾಂಜಲಿ ಅರ್ಪಿಸಿದೆವು.

ಇದೇ ಸಮಯದಲ್ಲಿ ಕಾರ್ಯನಿಮಿತ್ತ ಕಾನಕಾನಹಳ್ಳಿಯಿಂದ ಬೆಂಗಳೂರಿಗೆ ಹೋಗಿದ್ದ ಚಿಕ್ಕಬಸವರಾಜು ಅವರು ಅನಿರೀಕ್ಷಿತವಾಗಿ ಬೆಂಗಳೂರಿನ ಖ್ಯಾತ ಪೈಲ್ವಾನ್ ಮತ್ತು ಕಲಾಭಿಮಾನಿಗಳಾದ ಅಣ್ಣಯ್ಯನವರನ್ನು ಭೇಟಿಯಾದರು. ಕಂಪನಿಗೆ ಮೇಲಿಂದ ಮೇಲೆ ಒದಗಿದ ಕಹಿ ಘಟನೆಗಳನ್ನು ಅಣ್ಣಯ್ಯಪ್ಪನವರೊಂದಿಗೆ ಮಾತನಾಡಿ, ಸಲಹೆ ಕೇಳಿದಾಗ, ಚಿಂತಾಮಣಿಯಲ್ಲಿ ವಾರಕ್ಕೆರಡು ಬಾರಿ ಶನಿವಾರ ಮತ್ತು ಭಾನುವಾರಗಳಂದು ಬೃಹತ್ ಪ್ರಮಾಣದಲ್ಲಿ ಸಂತೆ ಸೇರುತ್ತದೆ. ನೀವು ಅಲ್ಲಿಗೆ ಹೋಗಿ ನಾಟಕಗಳನ್ನು ಪ್ರದರ್ಶಿಸಿ ಎಂದು ಸಲಹೆಯಿತ್ತು ಅಲ್ಲಿ ಹೋಗಿ ವ್ಯವಸ್ಥೆ ಮಾಡಿಕೊಳ್ಳಲು ಬ್ರೋಕರ್ ವೆಂಕಟಾಚಲಯ್ಯನವರಿಂದ ಸ್ವಲ್ಪ ಹಣವನ್ನು ಕೊಡಿಸಿದರು. ಅವರಿಂದ ಹಣ ಪಡೆದ ಚಿಕ್ಕಬಸವರಾಜು ಸ್ಥಳ ಪರಿಶೀಲನೆಗಾಗಿ ಚಿಂತಾಮಣಿಗೆ ಹೋಗಿ ಭರ್ಜರಿಯಾಗಿ ಸೇರಿದ್ದ ಸಂತೆಯನ್ನು ಕಂಡು ಉತ್ಸಾಹದಿಂದ ಹಿಂತಿರುಗಿದರು.

ಚಿಂತಾಮಣಿಯಲ್ಲಿ ಮೊಕ್ಕಾಂ ಮಾಡಲು ನಿರ್ಧರಿಸಲಾಯಿತು. ರುಕ್ಕೋಜಿ ರಾವ್ ಎಂಬುವರು ಜಿಂಕ್‌ಶೀಟ್‌ನಿಂದ ಸೊಗಸಾದ ಥಿಯೇಟರ್ ನಿರ್ಮಿಸಿದರು. ಮೊದಲ ನಾಟಕವಾಗಿ 'ದಾನಶೂರ ಕರ್ಣ'ನನ್ನು ಅಭಿನಯಿಸಿದೆವು. ಮೂವತ್ತೈದು ರೂಪಾಯಿಗಳಷ್ಟು ಹಣ ಸಂಗ್ರಹವಾಯಿತು. ನಮ್ಮ ಉತ್ಸಾಹವೆಲ್ಲ ನೀರಾಗಿ ಹೋಯಿತು. ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಕಲಾಭಿಮಾನಿಗಳಿಂದ ಕೊಂಡಾಡಲ್ಪಟ್ಟ ಎಲ್ಲ ಪೌರಾಣಿಕ ನಾಟಕಗಳಿಗೂ ಇದೇ ಗತಿಯಾಯಿತು. ವೈಶ್ಯರೇ

ಅಧಿಕವಾಗಿರುವ ಆ ಊರಿನಲ್ಲಿ ಸದಾರಮೆ ಆಡಿದರೆ ಹಣವಾಗಬಹುದೆಂದು ಭಾವಿಸಿದೆವು. ಇದಕ್ಕೂ ಅದೇ ದುರವಸ್ಥೆಯಾಯಿತು. ಇದು ಕಂಪನಿಯ ಅವಸಾನದ ಕುರುಹು ಎಂದು ಮನಸ್ಸು ನುಡಿಯಿತು. ದೀರ್ಘಕಾಲ ಕಲಾಸೇವೆ ಮಾಡಿದರೂ, ಮುಪ್ಪಿನಲ್ಲಿ ಅವಲಂಬಿಸಲು ಏನನ್ನೂ ಕೂಡಿಟ್ಟುಕೊಳ್ಳಲಿಲ್ಲವಲ್ಲ ಎಂಬ ಚಿಂತೆಯು ಆವರಿಸಿತು. ಕನ್ನಡ ನಾಡಿನ ಎಷ್ಟೋ ಮಂದಿ ಕಲಾವಿದರೂ, ಅಭಿನೇತ್ರಿಯರೂ, ಸಾಹಿತಿಗಳು, ಸಂಗೀತಗಾರರೂ ರಕ್ಷಣೆಯಿಲ್ಲದೆ ತತ್ತರಿಸುತ್ತಿರುವುದನ್ನು ಕಣ್ಣಾರೆ ಕಂಡಿದ್ದ ನಾನು ನನ್ನ ಭವಿಷ್ಯವನ್ನು ನೆನೆದು ನಡುಗಿದೆ. ◆

# ಏಳುಬೀಳುಗಳ ನೂರು ಅನುಭವ

ಹಿಂದಿನದೆಲ್ಲ ನೆನಸಿಕೊಂಡು, ನಾನು ಹಿಡಿದ ದಾರಿಗೆ ಪಶ್ಚಾತ್ತಾಪಗೊಂಡು ಕಣ್ಣೀರುಗರೆಯುವ ನನ್ನ ಬಗ್ಗೆ ನನಗೇ ಬೇಸರವಾಯಿತು. ಕಲೆ ಅಮರ ; ಕಲಾವಿದ ನಶ್ವರ ಎಂಬ ನಿಷ್ಠುರ ಸತ್ಯವೂ ಮನಸ್ಸಿಗೆ ಗೋಚರವಾಯಿತು. ಆರ್ಥಿಕ ದೃಷ್ಟಿಯನ್ನು ಕಡೆಗಣಿಸಿ ಕಲಾರಂಗದಲ್ಲಿ ಮುನ್ನಡೆಯಲು ನಿಶ್ಚಯಿಸಿದೆ. ದೊಡ್ಡಬಳ್ಳಾಪುರದಲ್ಲಿ ನಾಟಕಗಳನ್ನಾಡಲು ನಿರ್ಧರಿಸಿ ಕಾರ್ಯೋನ್ಮುಖರಾದೆವು. ಕ್ಯಾಂಪಿನ ಪ್ರಥಮ ನಾಟಕ 'ರಾಜಸೂಯ ಯಾಗ ' ಕೊಟ್ಟೂರಪ್ಪನವರದು ಅರ್ಜುನ ಹಾಗೂ ಆಂಜನೇಯ ಪಾತ್ರ. ಅವರ ಆಂಜನೇಯ ಪಾತ್ರ ಯಶಸ್ವಿಯಾಗುವುದೋ ಇಲ್ಲವೋ ಎಂಬ ಅನುಮಾನ ನನ್ನನ್ನಾವರಿಸಿತು. ಇದಕ್ಕೆ ಕಾರಣ, ಕರ್ನಾಟಕದ ಒಂದೊಂದು ಭಾಗದ ಜನತೆಗೆ ಗೊತ್ತಾದ ಕಲಾವಿದರ ಆಂಜನೇಯನ ಪಾತ್ರವೇ ಮೆಚ್ಚುಗೆಯಾಗುತ್ತದೆ. ಮಿರ್ಲೆ ಶ್ರೀನಿವಾಸರಾಯರ ಆಂಜನೇಯನ ಪಾತ್ರಕ್ಕೆ ಕೆಲವೆಡೆ ಹೆಸರು ಇದ್ದರೆ, ಮಂಜುನಾಥಯ್ಯನವರ ಆಂಜನೇಯನ ಭೂಮಿಕೆಗೆ ಮತ್ತೊಂದೆಡೆ ಒಳ್ಳೆಯ ಹೆಸರು. ಬೆಳ್ಳೂರು ನಂಜುಂಡಯ್ಯನವರ ಹೆಸರು ಇರುವ ಕಡೆ ಈ ಇಬ್ಬರು ಕಲಾವಿದರ ಪಾತ್ರವನ್ನು ಜನ ಮೆಚ್ಚುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಇವರಾರಿಗೂ ಇರದ ಹೆಸರು ರೊಳ್ಳೆ ವೆಂಕಟಾಚಲಯ್ಯನವರಿಗಿದೆ. ಹಲವಾರು ವಿಖ್ಯಾತ ಆಂಜನೇಯ ಪಾತ್ರಧಾರಿಗಳೊಡನೆ ಪಾತ್ರವನ್ನು ನಿರ್ವಹಿಸಿದ ನನಗೆ ಕೊಟ್ಟೂರಪ್ಪನವರ ಆಂಜನೇಯನ ಪಾತ್ರವನ್ನು ಕಲಾಭಿಮಾನಿಗಳು ಮೆಚ್ಚುತ್ತಾರೋ ಇಲ್ಲವೋ ಎಂಬ ಬಗ್ಗೆ ಸಂದೇಹ ಪ್ರಬಲವಾಗಿತ್ತು. ಆದರೆ ನನ್ನ ಸಂದೇಹ ನಿರಾಧಾರವಾದುದು. ಪ್ರೇಕ್ಷಕರು ಅವರ ಕರ್ಣನ ಪಾತ್ರದಂತೆ ಆಂಜನೇಯನ ಪಾತ್ರವನ್ನೂ ಮೆಚ್ಚಿಕೊಂಡರು. 'ಕಲಿಯುಗದ ಆಂಜನೇಯ' ಎಂಬ ಪ್ರಶಸ್ತಿಯೂ ಅವರಿಗೆ ಕಲಾರಸಿಕರಿಂದ ಪ್ರಾಪ್ತವಾಯಿತು.

ನಂತರ ಭೀಷ್ಮ ಪ್ರತಿಜ್ಞೆಯನ್ನು ಆಡಿದೆವು. ಈ ನಾಟಕದಲ್ಲಿ ಕೊಟ್ಟೂರಪ್ಪನವರೇ ಭೀಷ್ಮ. ಸೊಗಸಾದ ಕಲೆಕ್ಷನ್. ಸಂತೋಷಗೊಂಡ ನಾವು ಮತ್ತೆ ಅದೇ ನಾಟಕವನ್ನು ಪ್ರದರ್ಶಿಸಲು ತೀರ್ಮಾನಿಸಿಕೊಂಡೆವು. ಆದರೆ ಕಂಪನಿಯ ಜೀವಾಳವೆನಿಸಿದ್ದ ಕೊಟ್ಟೂರಪ್ಪನವರು ಅನಾರೋಗ್ಯದ ಮಡಲಿಗೆ ಬಿದ್ದರು. ವಿಪರೀತ ನಿಶ್ಶಕ್ತಿಯಿಂದ ಶರೀರ ಶಾರೀರಗಳೆರಡೂ ಕೆಟ್ಟುಹೋದುವು. ಎರಡು ನಾಟಕಗಳಲ್ಲಿ ಪಾತ್ರ ವಹಿಸಿದ್ದ ಅವರು ಮೂರನೇ ನಾಟಕಕ್ಕೆ 'ಬರಲು ಸಾಧ್ಯವಿಲ್ಲ' ಎಂದರು.

ನಾಟಕವನ್ನು ನಿಲ್ಲಿಸುವಂತೆಯೇ ಇರಲಿಲ್ಲ. ಭೀಷ್ಮನ ಪಾತ್ರ ವಹಿಸಲು ಚಿಕ್ಕಬಸವರಾಜು ಅವರು ಸಿದ್ಧರಾದರು. ಪೂರ್ಣ ವಿಶ್ರಾಂತಿ ಪಡೆಯಲು ಕಂಪನಿ ಮನೆಗೆ ತೆರಳಿದ್ದ ಕೊಟ್ಟೂರಪ್ಪನವರು ಈ ವಿಷಯ ತಿಳಿದು ಮತ್ತೆ ಥಿಯೇಟರಿಗೆ ಬಂದು ಪಾತ್ರ ವಹಿಸುತ್ತೇನೆಂದರು. ನಾನೇ ಖುದ್ದಾಗಿ 'ಬೇಡಿ, ಆರೋಗ್ಯಭಾಗ್ಯ ಕುದುರಿದ ನಂತರ ಪಾತ್ರ ವಹಿಸಿದರಾಯಿತು ?' ಎಂದು ಹೇಳಿದೆ. ಅವರು ನನ್ನ ಮಾತಿಗೆ ಒಪ್ಪದೆ ಪಾತ್ರ ನಿರ್ವಹಿಸಲು ಮುಂದಾದರು. ಪಾತ್ರಕ್ಕಾಗಿ ಸಿದ್ಧವಾಗಿದ್ದ ಚಿಕ್ಕಬಸವರಾಜು ಅವರು ಬಣ್ಣ ಅಳಿಸಿದರು.

ನಾಟಕದ ಮೊದಲ ದೃಶ್ಯದಲ್ಲಿ ಕಂದಪದ್ಯವೊಂದಿದೆ. ಈ ಪದ್ಯವನ್ನು ಹಾಡುವಾಗಲೇ ಕೊಟ್ಟೂರಪ್ಪನವರು ರಂಗದ ಮೇಲೆ ಕುಸಿದರು. ಹೇಗೋ ಹಾಗೇ ಅಂದು ನಾಟಕವನ್ನು ಮುಗಿಸಿದೆವು. ವೈದ್ಯರು ಅವರಿಗೆ ಪೂರ್ಣ ವಿಶ್ರಾಂತಿ ಬೇಕೆಂದು ಸಲಹೆ ಮಾಡಿದರು. ಮೈಸೂರಿಗೆ ಅವರನ್ನು ಕಳುಹಿಸಿಕೊಟ್ಟದ್ದಾಯಿತು. ಕೊಟ್ಟೂರಪ್ಪನವರ ಸ್ಥಾನಕ್ಕೆ ಪ್ರತಿಭಾನ್ವಿತರನ್ನೇ ಆರಿಸಬೇಕಾಗಿತ್ತು. ಕನ್ನಡ ರಂಗಭೂಮಿಯ ಕಣ್ಮಣಿ ಎನಿಸಿದ್ದ ಜಿ. ನಾಗೇಶರಾಯರನ್ನೂ, ನಟ ಭಯಂಕರ ಗಂಗಾಧರರಾಯರನ್ನೂ ಬರಮಾಡಿಕೊಂಡೆವು.

ಮಧುರವಾದ ಶಾರೀರಶ್ರೀಯನ್ನು ಹೊಂದಿದ್ದ ನಾಗೇಶರಾಯರ ಸಹಜಾಭಿನಯಕ್ಕೆ, ರೌದ್ರರಸದಲ್ಲಿ ಪ್ರಚಂಡ ಅಭಿನಯವನ್ನು ಮೆರೆಯುತ್ತಿದ್ದ ಗಂಗಾಧರರಾಯರ ನಟನಾ ಕೌಶಲ್ಯಕ್ಕೆ ದೊಡ್ಡಬಳ್ಳಾಪುರದ ಜನತೆ ಮಾರು ಹೋಯಿತು. ನಾವು ಪ್ರದರ್ಶಿಸಿದ ಸುಭದ್ರಾ, ಮನ್ಮಥ ವಿಜಯ, ಗುಲೇಬಕಾವಲಿ, ಪ್ರಹ್ಲಾದ ಚರಿತೆ ಮೊದಲಾದ ನಾಟಕಗಳನ್ನು ಹಲವಾರು ಬಾರಿ ಪ್ರದರ್ಶಿಸು ವಂತಾಯಿತು. ಇಷ್ಟಾದರೂ ಅಲ್ಲಿನ ಜನತೆಗೆ ದಾನಶೂರ ಕರ್ಣ ನಾಟಕದಲ್ಲಿ ಕೊಟ್ಟೂರಪ್ಪನವರ ಕರ್ಣನ ಭೂಮಿಕೆಯನ್ನು ನೋಡುವ ಆಕಾಂಕ್ಷೆ ಇಳಿಯಲಿಲ್ಲ. ದಾನಶೂರ ಕರ್ಣ ನಾಟಕವನ್ನು ಪ್ರದರ್ಶಿಸಿ, ಕೊಟ್ಟೂರಪ್ಪನವರನ್ನು ಕರೆಸಿ ಎಂದು ಒತ್ತಾಯ ಮಾಡತೊಡಗಿದರು. ಈ ವೇಳೆಗೆ ಕೊಟ್ಟೂರಪ್ಪನವರು ಆರೋಗ್ಯ ಗೊಂಡಿದ್ದರು.

ನಮ್ಮ ಕರೆಗೆ ಓಗೊಟ್ಟು ಕೊಟ್ಟೂರಪ್ಪನವರು ಆಗಮಿಸಿದರು. 'ಕಲಿಯುಗದ ಕರ್ಣ' ಎಂದು ಬಿರುದಾಂಕಿತರಾದ ಕೊಟ್ಟೂರು ಬಸವಯ್ಯನವರು ನಾಟಕಗಳಲ್ಲಿ ಪಾತ್ರ ವಹಿಸಲಿದ್ದಾರೆ. 'ಇಡೀ ಕನ್ನಡ ನಾಡಿನಲ್ಲೇ ಕರ್ಣನ ಪಾತ್ರವನ್ನು ಶ್ರೇಷ್ಠ ರೀತಿಯಲ್ಲಿ ನಿರ್ವಹಿಸಿದ ಕೊಟ್ಟೂರಪ್ಪನವರ ಪಾತ್ರವನ್ನು ನೋಡಲು ಇಂದೇ ಆಗಮಿಸಿ' ಎಂದು ಭಿತ್ತಿಪತ್ರಗಳಲ್ಲಿ ಪ್ರಚುರ ಪಡಿಸಿದೆವು. ಅವರ ಕರ್ಣನ ಪಾತ್ರವನ್ನು ನೋಡಲೆಂದೇ ಬಹುದಿನಗಳಿಂದಲೂ ಕಾತರರಾಗಿದ್ದ ಕಲಾಭಿಮಾನಿಗಳು ತಂಡೋಪತಂಡವಾಗಿ ಆಗಮಿಸಿದರು.

'ದಾನಶೂರ ಕರ್ಣ'ದ ಎಂಟು ಪ್ರದರ್ಶನಗಳಿಗೆ ನಮ್ಮ ನಿರೀಕ್ಷೆಗೂ ಮೀರಿದ ಹಣ ಸಂಗ್ರಹವಾಯಿತು. ಈ ವೇಳೆಗೆ ನಾವು ದೊಡ್ಡಬಳ್ಳಾಪುರಕ್ಕೆ ಬಂದು ಬಹಳ ದಿನಗಳಾಗಿದ್ದುದರಿಂದ ಹಾಗೂ ತಿಪಟೂರಿಗೆ ಬರಲು ಆಹ್ವಾನ ಬಂದಿದ್ದರಿಂದ ಅಲ್ಲಿಗೆ ತೆರಳಿದೆವು. ಮೊದಲ ಮೂರು ನಾಲ್ಕು ನಾಟಕಗಳನ್ನು ಕಂಟ್ರಾಕ್ಟರ್ ಸಿದ್ದಣ್ಣನವರಿಗೆ ಕಂಟ್ರಾಕ್ಟ್ ಕೊಟ್ಟೆವು. ಆನಂತರ ನಾವೇ ಸ್ವಂತ ನಾಟಕವಾಡಲು ಪ್ರಾರಂಭಿಸಿದೆವು. ಊರಿನ ಪ್ರಮುಖರ ಪ್ರೋತ್ಸಾಹ, ಕಲಾವಿದರ ಅಮಿತ ಉತ್ಸಾಹಗಳಿಂದ ಇಲ್ಲಿಯೂ ನಾಟಕಗಳು ಯಶಸ್ವಿಯಾದವು. ತಿಪಟೂರಿನಿಂದ ನೇರವಾಗಿ ಬೆಂಗಳೂರಿಗೆ ಬಂದೆವು.

ಬೆಂಗಳೂರಿಗೇನೋ ಬಂದೆವು. ಆದರೆ ಇಲ್ಲಿ ನಾಟಕವಾಡಲು ಎಂಟೆದೆ ಬೇಕು. ಬೃಹತ್ ನಗರವಾದ ಇಲ್ಲಿ ಪ್ರಚಾರಕ್ಕೆ ಹಲವಾರು ಸಹಸ್ರ ರೂಪಾಯಿಗಳನ್ನು ಮೀಸಲಾಗಿಡಬೇಕು. ಭಿತ್ತಿಪತ್ರಗಳು, ಪತ್ರಿಕೆಗಳಲ್ಲಿ ಜಾಹಿರಾತು, ತಡಿಕೆ ಬೋರ್ಡುಗಳು ಇವೇ ಮೊದಲಾದ ಪ್ರಚಾರ ಸಾಧನಗಳನ್ನು ಬಳಸಿಕೊಳ್ಳದಿದ್ದರೆ ನಾವು ಬೆಂಗಳೂರಿಗೆ ಬಂದು ನಾಟಕವಾಡುತ್ತಿದ್ದೇವೆ ಎಂಬುದೇ ಕಲಾರಸಿಕರಿಗೆ ತಿಳಿಯುವಂತಿರಲಿಲ್ಲ. ಅಷ್ಟು ಹಣ ನಮ್ಮ ಬಳಿ ಎಲ್ಲಿ ಬರಬೇಕು ? ಪತ್ರಿಕೆಯವರ ಸಹಕಾರ ಯಾಚಿಸುವುದೇ ಇದಕ್ಕಿರುವ ಮಾರ್ಗ ಎಂಬ ತೀರ್ಮಾನಕ್ಕೆ ಬಂದು, ಅಂದು ಜನಪ್ರಿಯ ದಿನಪತ್ರಿಕೆಯಾಗಿದ್ದ ''ವಿಶ್ವಕರ್ನಾಟಕ 'ದ ಮೊರೆ ಹೊಕ್ಕೆವು. ಆ ಪತ್ರಿಕೆ ಕೊಟ್ಟ ನೆರವಿನಿಂದಾಗಿ ಪ್ರಚಾರ ಬಹುಚೆನ್ನಾಗಿ ಆಗಿ, ನಾಟಕದ ಪ್ರಾರಂಭೋತ್ಸವವನ್ನು ರಸಿಕರು ನಿರೀಕ್ಷಿಸುವಂತೆ ಆಯಿತು.

ಹೆಸರಾಂತ ಸಂಶೋಧಕರೂ, ಸಾಹಿತಿಗಳೂ, ಪತ್ರಿಕಾಕರ್ತರೂ ಆದ ಶ್ರೀ ತಿ.ತಾ. ಶರ್ಮ ಅವರನ್ನು ಅಧ್ಯಕ್ಷತೆಗೆ ಆಹ್ವಾನಿಸಲು ಹೋದಾಗ, 'ಸಚಿವೋಪ ಸಚಿವರಿರುವಾಗ ನನ್ನಂತಹ ಬಡ ಪತ್ರಿಕೋದ್ಯೋಗಿಯನ್ನೇಕೆ ಅಧ್ಯಕ್ಷತೆಗೆ ಆಹ್ವಾನಿಸುತ್ತಿದ್ದೀರಿ ? ನನ್ನಿಂದ ನಿಮಗಾಗಲಿ, ನಿಮ್ಮ ಕಂಪನಿಗಾಗಲಿ ಯಾವ ಅನುಕೂಲವೂ ಆಗುವುದಿಲ್ಲ' ಎಂದುತ್ತರಿಸಿದರು. 'ನಿಮ್ಮ ಆಶೀರ್ವಾದವನ್ನೇ ಬಯಸಿ ಬಂದಿದ್ದೇವೆ. ನೀವು ನಿರಾಕರಿಸಬಾರದು' ಎಂದೆವು. ಆ ಸಂಜೆ, ರಂಗಮಂದಿರ ಪತ್ರಿಕೋದ್ಯೋಗಿಗಳಿಂದ, ಗಣ್ಯ ನಾಗರಿಕರಿಂದ ತುಂಬಿ ಹೋಯಿತು. ವೀರ, ಕರುಣ, ಶೋಕ - ಮೊದಲಾದ ಎಲ್ಲ ರಸಗಳಿಗೂ ಸಾಕಷ್ಟು ಅವಕಾಶವಿರುವ ಹಲವಾರು ಪಾತ್ರಗಳನ್ನೊಳಗೊಂಡ 'ರಾಜಸೂಯ ಯಾಗ ' ನಾಟಕದಲ್ಲಿ ಪಾಲ್ಗೊಂಡಿದ್ದ ಕಲಾವಿದರು ಸ್ಫೂರ್ತಿ ಉತ್ಸಾಹದಿಂದ ಅಭಿನಯಿಸಿದರು. ನಟರ ಅಪೂರ್ವ ಕಲಾಸಿದ್ಧಿಗೆ ಶರ್ಮರು ತಲೆದೂಗಿ ಅಧ್ಯಕ್ಷ ಭಾಷಣದಲ್ಲಿ 'ಕರ್ನಾಟಕ ರಂಗಭೂಮಿಯಲ್ಲಿ ಈ ನಾಟಕದ ಪಾತ್ರಧಾರಿಗಳು ಚಿರಸ್ಮರಣೀಯರು ' ಎಂದು ಮುಕ್ತಕಂಠದಿಂದ ಪ್ರಶಂಸಿಸಿದರು. ಅಂದು ಕೊಟ್ಟೂರಪ್ಪನವರು ನಿರ್ವಹಿಸಿದ ಆಂಜನೇಯನ ಭೂಮಿಕೆಯಂತೂ ಪ್ರೇಕ್ಷಕರ ಅಪಾರ ಮೆಚ್ಚುಗೆ ಪಡೆಯಿತು.

ಬೆಂಗಳೂರಿನಲ್ಲಿ ನಾವು ನಾಟಕಗಳನ್ನು ಪ್ರದರ್ಶಿಸುತ್ತಿದ್ದಾಗ್ಯೆ ಭಾವಪೂರಿತ ಅಭಿನಯ ಕಲೆಯಲ್ಲಿ ನಿಸ್ಸೀಮರಾದ ನಟಸಾಮ್ರಾಟ್ ಪೃಥ್ವಿರಾಜ್ ಕಪೂರ್ ಅವರು ನಮ್ಮ ನಾಟಕಕ್ಕೆ ಆಗಮಿಸಿ ನಾಟಕವನ್ನು ತನ್ಮಯತೆಯಿಂದ ವೀಕ್ಷಿಸಿದರು. ಅವರು ರಂಗಮಂಚಕ್ಕೆ ಧಾವಿಸಿ 'ಪರಸ್ಥಳದವನಾದ ನಾನು ನನ್ನ ಸ್ವಂತ ಮಂಡಲಿಯೊಂದಿಗೆ ಇಲ್ಲಿಗೆ ಬಂದು ನಾಟಕವಾಡಿದೆ. ಹಣವಾಗಲಿಲ್ಲ. ಆಗ ನಾನು ಇಲ್ಲಿಯ ಜನತೆ ಪರಸ್ಥಳದ ಕಲಾವಿದರಿಗೆ ನಾವು ಏಕೆ ಪ್ರೋತ್ಸಾಹ ಕೊಡಬೇಕು ಎಂಬ ಮನೋಭಾವ ದಿಂದ ಕೂಡಿರಬಹುದು ಎಂದು ಭಾವಿಸಿದೆ. ಆದರೆ ಇಂದು ಇಲ್ಲಿ ಪ್ರಯೋಗ ವಾಗುತ್ತಿರುವ ನಾಟಕಕ್ಕೂ ಜನತೆ ಪ್ರೋತ್ಸಾಹ ನೀಡುವುದರಲ್ಲಿ ಹಿಂದೆಗೆದಿರುವುದನ್ನು ಕಂಡರೆ, ಕನ್ನಡಿಗರಿಗೆ ನಮ್ಮ ನಾಡು ನಮ್ಮ ಕಲೆ ಎಂಬ ಬಗ್ಗೆ ಆಸಕ್ತಿಯೇ ಇಲ್ಲವೇನೋ ಎಂದೆನಿಸುತ್ತದೆ. ಈ ಮಂಡಳಿಯಲ್ಲಿ ಅಪೂರ್ವ ಕಲಾಸಿದ್ಧಿಯನ್ನು ಪಡೆದ ನಟ - ನಟಿಯರಿದ್ದರೂ ಸರಿಯಾದ ಪ್ರೋತ್ಸಾಹ ದೊರೆಯದೇ ಇರುವುದು ಕನ್ನಡ ನಾಡಿನಲ್ಲಿ ಜನಿಸಿದ ಈ ಕನ್ನಡ ಕಲಾವಿದರ ದೌರ್ಭಾಗ್ಯವಲ್ಲದೆ ಮತ್ತೇನೂ ಅಲ್ಲ' ಎಂದು ಕಳಕಳಿಯಿಂದ ನುಡಿದರು.

ಈ ಮೊಕ್ಕಾಂನಲ್ಲಿ ಸುಭದ್ರಾ, ದಾನಶೂರ ಕರ್ಣ, ಭೀಷ್ಮ ಪ್ರತಿಜ್ಞೆ, ತಿಲೋತ್ತಮೆ .... ಮೊದಲಾದ ನಾಟಕಗಳು ರಸಿಕರ ಮೆಚ್ಚುಗೆ ಪಡೆದವು. ಇಲ್ಲಿ ಸುಮಾರು ಎರಡು ಮೂರು ತಿಂಗಳಪರ್ಯಂತವಿದ್ದೆವು. ಅನೇಕ ಸಂಘ ಸಂಸ್ಥೆಗಳಿಗೆ ಹದಿನೈದು ಸಹಾಯಾರ್ಥ ನಾಟಕಗಳನ್ನು ಕೊಟ್ಟೆವು. ಇಲ್ಲಿಂದ ಮುಂದೆ ಆನೇಕಲ್ಲಿಗೆ ಹೋದೆವು. ಸುಮಾರಾಗಿ ಹಣವಾಯಿತು. ಚನ್ನಪಟ್ಟಣಕ್ಕೆ ಬಂದೆವು. ಅಲ್ಲಿ ಸರಿಯಾದ ಉತ್ತೇಜನ ದೊರೆಯದ ಪ್ರಯುಕ್ತ ಗೌರಿಬಿದನೂರು ಮೊಕ್ಕಾಂ ಮಾಡಿದೆವು. ಸಂಗೀತ ವಿದ್ವಾನ್ ಶ್ರೀಕಂಠಮೂರ್ತಿ, ಪ್ರಸಿದ್ಧ ಗಾಯಕನಟ ಹೊಳಲಿ ಸುಬ್ರಹ್ಮಣ್ಯಶಾಸ್ತ್ರಿ ಇನ್ನೂ ಅನೇಕ ಪ್ರಸಿದ್ಧ ನಟರ ಸಮೂಹದಿಂದ ನಾಟಕ ಕಳೆಗಟ್ಟಿ ಎಂಟು ನಾಟಕಗಳಿಗೆ ಭರ್ಜರಿ ಹಣವಾಯಿತು. ಇನ್ನೂ ಕೆಲವು ನಾಟಕಗಳಿಗೆ ಒಳ್ಳೆಯ ಕಲೆಕ್ಷನ್ ಆಗುವ ನಿರೀಕ್ಷೆಯಿತ್ತು. ಆದರೆ ವಿಧಿ ನಮಗೆ ಎದುರುಬಿತ್ತು. ತುಂಬ ಅನಿರೀಕ್ಷಿತವಾಗಿ ಅಲ್ಲಿ ಕಾಲರಾ ಆರಂಭವಾಯಿತು. ಕಟ್ಟುನಿಟ್ಟಾಗಿ ಅಲ್ಲಿ ಆರೋಗ್ಯ ಇಲಾಖೆಯ ನಿಯಮಗಳನ್ನು ಜಿಲ್ಲಾಧಿಕಾರಿಗಳು ಜಾರಿಗೆ ತಂದ ಕಾರಣ ನಮ್ಮ ಲೈಸೆನ್ಸ್ ರದ್ದಾಯಿತು. ಹದಿನೈದು ದಿನಗಳು ಆಶೆಯಿಂದ ಕಾದರೂ ಲೈಸೆನ್ಸ್ ದೊರಕಲಿಲ್ಲ. ◆

## ಚಾಮುಂಡೇಶ್ವರಿ ನಾಟಕಸಭಾದಿಂದ ನಿವೃತ್ತಿ

'ಕೂತು ಉಣ್ಣುವವನಿಗೆ ಕುಡಿಕೆ ಹಣ ಸಾಲದು.' ನಾಟಕವಿಲ್ಲದೆ ಎಷ್ಟು ದಿನ ಕಂಪನಿ ನಿಭಾಯಿಸಲು ಸಾಧ್ಯ ? ಕಂಪನಿಯ ಹಿತೈಷಿಗಳಾದ ಡಿ.ಸಿ. ಚೆನ್ನಬಸಪ್ಪನವರ ಸಲಹೆಯಂತೆ ಬೆಂಗಳೂರಿನ ಅಲಸೂರು ಬಡಾವಣೆ ಜೋಗುಪಾಳ್ಯದಲ್ಲಿ ಆಗ ಬೆಂಗಳೂರಿನ ಡಿ.ಐ.ಜಿ. ಆಗಿದ್ದ ಸೋಮಪ್ಪ ಅವರ ಸಹೋದರ ಪುಟ್ಟಸ್ವಾಮಯ್ಯನವರ ನೇತೃತ್ವದಲ್ಲಿ ನಾಟಕವಾಡಲು ನಿಶ್ಚಯಿಸಿದೆವು.

ಪೈಲ್ವಾನ್ ಅಣ್ಣಯ್ಯಪ್ಪನವರು ಅಪಾರ ಪರಿಶ್ರಮದಿಂದ ಅದೆ ತಾನೇ ನೂತನವಾಗಿ ಉಡುಪು, ಸೀನ್ಸ್‌ಗಳನ್ನು ಸಿದ್ಧಗೊಳಿಸಿದ್ದರು. 8-10 ನಾಟಕಗಳಿಗೆ ಅದನ್ನು ಲೀಸಿಗೆ ತೆಗೆದುಕೊಂಡು ನಾಟಕಗಳನ್ನಾಡಿದೆವು. ಹೇಳಿಕೊಳ್ಳುವಂತಹ ಕಲೆಕ್ಷನ್ ಆಗಲಿಲ್ಲ. ಹಣದ ಅಡಚಣೆ ವಿಪರೀತವಾಗಿ ಕಳೆದುಳಿದಿದ್ದ ಒಡವೆಗಳನ್ನೂ ಅಡವು ಇಡಬೇಕಾದ ಪ್ರಸಂಗ ಬಂದೊದಗಿತು. ಪಡಬಾರದ ಪಾಡು ಪಟ್ಟು, ಸಾಮಾನುಗಳನ್ನು ಸಾಗಿಸಲೂ ಕಾಸಿಲ್ಲದೆ ದಿಕ್ಕೆಟ್ಟು ಕೊನೆಗೆ ಪೈಲ್ವಾನ್ ಅಣ್ಣಯ್ಯಪ್ಪನವರ ಸಹಕಾರ ಹಸ್ತದಿಂದ ಕಾನಕಾನಹಳ್ಳಿಯಲ್ಲಿ ಕೆಲವು ಕಂಟ್ರ್ಯಾಕ್ಟ್ ನಾಟಕವಾಡಿದೆವು.

ಈ ಮಧ್ಯೆ ನಮ್ಮ ಕಂಪನಿಯ ಅಳಿಗಾಲದ ಮುನ್ಸೂಚನೆಯೋ ಎಂಬಂತೆ ಗೌರಿಬಿದನೂರಿನಿಂದ ಬಂದ ವಾರ್ತೆ ನಮ್ಮನ್ನು ತಬ್ಬಿಬ್ಬು ಮಾಡಿತು. ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತೆ ನಾವು ಗೌರಿಬಿದನೂರಿನಲ್ಲಿ ಬಿಟ್ಟು ಬಂದಿದ್ದ ನಾಟಕದ ಕೆಲವು ಸರಕು - ಸಾಮಗ್ರಿಗಳೆಲ್ಲ ಪ್ರವಾಹದ ಹಾವಳಿಗೆ ಸಿಲುಕಿದ್ದವು. ಭಯಂಕರ ದಿನಗಳು ಕಾದಿವೆ ಎಂದೆನಿಸತೊಡಗಿತು.

ನಂತರ ಕೋಲಾರದಲ್ಲಿ ಕಂಪನಿಯ ಮೊಕ್ಕಾಂ. ಆದರೆ ಅಲ್ಲಿಯೂ ಸಾಕಷ್ಟು ಹಣವಾಗಲಿಲ್ಲ. ಮತ್ತೆ ಕಾನಕಾನಹಳ್ಳಿಗೆ ಹೋಗಿ 'ದಾನಶೂರ ಕರ್ಣ' ನಾಟಕವಾಡಲು ನಿಶ್ಚಯಿಸಿದೆವು. ಈ ನಾಟಕಗಳಿಗಾಗಿಯೇ ಮೈಸೂರಿನಲ್ಲಿದ್ದ ಕೊಟ್ಟೂರಪ್ಪನವರನ್ನು ದಿನಕ್ಕೆ ಇಪ್ಪತ್ತೈದು ರೂ.ಗಳ ಸಂಭಾವನೆ ಮೇಲೆ ಕರೆಸಿಕೊಂಡೆವು. ಅವರು ನಮ್ಮ ನಾಟಕಗಳಲ್ಲಿ ಪಾತ್ರ ವಹಿಸುವುದರ ಜೊತೆಗೆ ಬೇರೆಯವರ ನಾಟಕಗಳಲ್ಲೂ ಪಾತ್ರ ವಹಿಸುತ್ತಿದ್ದರು. ಈ ಮೊಕ್ಕಾಂನಲ್ಲೇ ನಮ್ಮ ಕಂಪನಿಯ ಸಮಸ್ತ ವ್ಯವಹಾರಗಳ ಭಾರವನ್ನು ಹೊತ್ತಿದ್ದ ಪ್ರಮುಖ ಪಾತ್ರಧಾರಿ ಚಿಕ್ಕಬಸವರಾಜು ಅವರು ಒಂದು ದಿನ ಇದ್ದಕ್ಕಿದ್ದಂತೆ ನಿಶ್ಶಕ್ತರಾಗಿ ಸ್ಮೃತಿ ತಪ್ಪಿ ಬಿದ್ದುಬಿಟ್ಟರು. ರಂಗಮಂದಿರದಲ್ಲಿ ಗುಲ್ಲೋ

ಗುಲ್ಲು. ದೇವರಕೃಪೆಯಿಂದಾಗಿ ಬೇಗನೆ ಎಚ್ಚೆತ್ತರು. ಆದರೆ ಅವರಿಗೆ ವೈದ್ಯರ ಸಲಹೆಯಂತೆ ಪೂರ್ಣ ವಿಶ್ರಾಂತಿ ಅತ್ಯಗತ್ಯವಾಗಿತ್ತು. ನಾಟಕವಾಡುವ ಆಗಿರಲಿಲ್ಲ. ಇದಾದ ನಂತರ ಕೆಲವಾರು ದಿನಗಳಲ್ಲೇ ಟೈಫಾಯಿಡ್ ಬಿದ್ದರು.

ಈ ಸಮಯದಲ್ಲಿ ಅವರನ್ನು ಆದರದಿಂದ ನೋಡಿಕೊಂಡು ಸೋದರಿಗಿಂತಲೂ ಹೆಚ್ಚಾಗಿ ಔಷಧೋಪಚಾರ ಮಾಡಿದವರು ಡಾ॥ ಸರೋಜಮ್ಮನವರು. ಇವರ ಮುತುವರ್ಜಿ, ಆರೈಕೆ ಇಲ್ಲದಿದ್ದರೆ ಚಿಕ್ಕಬಸವರಾಜು ಚೇತರಿಸಿಕೊಳ್ಳುತ್ತಿದ್ದರೋ ಇಲ್ಲವೋ! ಅಂತೂ ಮೂರು ತಿಂಗಳ ಕಾಲ ನರಳಿ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಳ್ಳಲಾರಂಭಿಸಿದರು. ಅವರ ಅನಾರೋಗ್ಯದ ಅವಧಿಯಲ್ಲಿ ಕಂಪನಿ ಸ್ಥಗಿತಗೊಂಡಿತ್ತು. ಅವರ ಆರೋಗ್ಯ ಸುಧಾರಿಸಿದ ಮೇಲೆ ಕಂಪನಿಯನ್ನು ಪ್ರಾರಂಭ ಮಾಡುವ ಯೋಚನೆ ಮಾಡಿದೆ. ಆದರೆ ಆರ್ಥಿಕ ಪೆಡಂಭೂತ ಎದುರಾಯಿತು.

ಇಂಥ ಸಮಯದಲ್ಲಿಯೂ ನಮಗೆ ಉತ್ತೇಜನ ನೀಡಿದವರು ಡಿ.ಸಿ. ಚೆನ್ನಬಸಪ್ಪ ಅವರು. ದೀರ್ಘ ಕಾಲ ಕಲಾಸೇವೆ ಮಾಡಿದ ಮಂಡಲಿಯನ್ನು ಬಲಿಗೊಡಬೇಡಿ. ನನ್ನ ಕೈಲಾದ ನೆರವು ನೀಡಲು ಸಿದ್ಧ ಎಂದು ಹಲವಾರು ಬಾರಿ ನಮ್ಮ ಮಂಡಳಿಗೆ ನೆರವು ನೀಡಿದ್ದ ಅವರು ಆಶ್ವಾಸನೆ ನೀಡಿದರು. ಅತ್ತಿಬೆಲೆಯಲ್ಲಿ ನಾಟಕವಾಡುವುದೆಂದು ತೀರ್ಮಾನವಾಯಿತು. ಸಾಹುಕಾರ್ ಶರಭಣ್ಣನವರ ಸಿನಿಮಾ ಥಿಯೇಟರ್‌ನಲ್ಲಿ ನಾಟಕವಾಡಲು ಭರದಿಂದ ಸಿದ್ಧತೆಗೈದೆವು. ನಮ್ಮ ವಸತಿಗೆ ಸಾಹುಕಾರರು ತಮ್ಮ ಅದ್ದೂರಿಯ ಬಂಗಲೆಯನ್ನೇ ಬಿಟ್ಟುಕೊಟ್ಟರು. ಇಂದು ದಾಕ್ಷಿಣಾತ್ಯ ಚಿತ್ರರಂಗದಲ್ಲಿ ಪ್ರಸಿದ್ಧರಾದ ಅಭಿನೇತ್ರಿ, ಬಿ. ಸರೋಜಾದೇವಿ ಈ ಮೊಕ್ಕಾಂನಲ್ಲೇ ನಮ್ಮ ಕಂಪನಿಗೆ ಬಂದು ಸೇರಿದರು. ಅವರ ಜೊತೆಯಲ್ಲಿ ಅವರ ಸೋದರಿ ಲಕ್ಷ್ಮಮ್ಮ, ತಂದೆ-ತಾಯಿ ಎಲ್ಲರೂ ಇದ್ದರು. ಅಲ್ಪಕಾಲದಲ್ಲಿಯೇ ಅವರು ಹೊನ್ನಪ್ಪ ಭಾಗವತರ ಕಾಳಿದಾಸ ಚಿತ್ರಕ್ಕೆ ಆಯ್ಕೆಗೊಂಡು ನಮ್ಮ ಕಂಪನಿಯಿಂದ ನಿರ್ಗಮಿಸಿದರು. ಅವರ ಅಕ್ಕ ಮಾತ್ರ ನಮ್ಮಲ್ಲಿಯೇ ಇದ್ದರು. ದಾನಶೂರ ಕರ್ಣದಲ್ಲಿ ನಾರದನ ಪಾತ್ರವನ್ನು ನಿರ್ವಹಿಸುತ್ತಿದ್ದರು.

ಇಲ್ಲಿ ಜರುಗಿದ ಪ್ರಸಂಗವೊಂದು ಸ್ವಾರಸ್ಯವಾಗಿದೆ. ನಾವು ಅಭಿನಯಿಸುತ್ತಿದ್ದ ರಾಜಸೂಯ ಯಾಗ ನಾಟಕದಲ್ಲಿ ಧರ್ಮರಾಯ ಹಾಗೂ ಭೀಮನ ಪಾತ್ರ ವಹಿಸುತ್ತಿದ್ದ ನಟರು ಗೈರುಹಾಜರಾಗುತ್ತಾರೆ ಎಂಬ ಸುದ್ದಿ ಹೇಗೋ ಹರಡಿತು. ಈ ಸುದ್ದಿ ಆಗ ಬೆಂಗಳೂರಿನಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದ ಕೆ. ಹಿರಣ್ಣಯ್ಯನವರ ಕಿವಿಗೂ ಬಿದ್ದಿತಂತೆ. ಪ್ರಮುಖ ಕಲಾವಿದರ ಗೈರುಹಾಜರಿಯಿಂದ ನಮ್ಮ ನಾಟಕಗಳಿಗೆ ತೊಂದರೆಯಾಗುವುದೆಂದು ಭಾವಿಸಿದ ಅವರು ತಾವು ಆಡುತ್ತಿದ್ದ ನಾಟಕವನ್ನು ತರಾತುರಿಯಿಂದ ಮುಕ್ತಾಯಗೊಳಿಸಿ ತಮ್ಮ ಮಂಡಳಿಯ ಪ್ರಮುಖ ನಟ

ದೊಡ್ಡ ಸೀತಾರಾಮಯ್ಯನವರನ್ನೂ, ಇನ್ನೂ ಕೆಲವು ನಟರನ್ನೂ ಕಾರಿನಲ್ಲಿ ಕರೆದುಕೊಂಡು ನೇರವಾಗಿ ಅತ್ತಿಬೆಲೆಗೆ ಆಗಮಿಸಿದರು. ಬಂದವರೇ 'ನಾನು ಧರ್ಮರಾಯನ ಪಾತ್ರ ವಹಿಸುತ್ತೇನೆ. ಮಿತ್ರರು ಭೀಮನ ಪಾತ್ರ ವಹಿಸುತ್ತಾರೆ. ಪಾತ್ರದ ಮಾತುಗಳನ್ನು ಹೇಳಿಕೊಡಿ' ಎಂದು ಕೇಳಿದರು. ನಮಗೆ ಸಂತೋಷ, ಆಶ್ಚರ್ಯ ಎಲ್ಲ ಏಕಕಾಲದಲ್ಲಿ ಆಯಿತು. ಆನಂತರ ಅವರು ಸಾವಕಾಶವಾಗಿ ವಿವರ ತಿಳಿಸಿದಾಗ - ಎಲ್ಲ ನಟ - ನಟಿಯರು ಇಂದು ಬೆಳಗಿನ ಬಸ್ಸಿಗೆ ಬಂದರು. ಇಬ್ಬರು ಪಾತ್ರಧಾರಿಗಳು ಮಾತ್ರ ತಡವಾಗಿ ಬಂದರು ಅಷ್ಟೇ ಎಂದು ನಡೆದ ವಿಚಾರವನ್ನೆಲ್ಲಾ ತಿಳಿಸಿದ ಚಿಕ್ಕಬಸವರಾಜು ಅವರು 'ತಾವು ಬಂದುದು ನಮಗೆಲ್ಲಾ ತುಂಬಾ ಸಂತೋಷ. ಹೇಗಿದ್ದರೂ ಬಂದಿದ್ದೀರಿ. ನಾಟಕದ ಪ್ರಾರಂಭೋತ್ಸವ ತಮ್ಮಿಂದಲೇ ನಡೆಯಲಿ' ಎಂದರು. ಸಂತೋಷದಿಂದ ಒಪ್ಪಿಕೊಂಡ ಹಿರಣ್ಣಯ್ಯನವರು ನೇರವಾಗಿ ರಂಗಭೂಮಿಗೆ ಧಾವಿಸಿದರು. ಅವರು ಒಳಗೆ ಬರುತ್ತಿದ್ದಂತೆಯೇ ರಂಗಮಂದಿರದಲ್ಲಿ ಕಿಕ್ಕಿರಿದು ನೆರೆದಿದ್ದ ಕಲಾಭಿಮಾನಿಗಳು ಕಿವಿಗಡಚಿಕ್ಕುವಂತೆ ಕರತಾಡನಗೈದರು. ಅತ್ತಿಬೆಲೆಯ ಕಲಾಭಿಮಾನಿಗಳೇ, ಮಹಿಳೆಯರೆ, ಎಂದು ಭಾಷಣ ಪ್ರಾರಂಭ ಮಾಡಿದ ಹಿರಣ್ಣಯ್ಯನವರು ಶಕ್ತಿ ದೇಹದಲ್ಲಿ ಇರುವವರೆಗೂ, ಶಾರೀರದಲ್ಲಿ ಕಸುವು ಚೆನ್ನಾಗಿರುವವರೆಗು ನಟರನ್ನು ಜನ ಗೌರವಿಸುತ್ತಾರೆ. ಶಕ್ತಿಗುಂದಿದಾಗ ನಮ್ಮ ಕಲಾವಿದರು ಎಂಥಾ ಗತಿಯನ್ನು ಅನುಭವಿಸುತ್ತಾರೆ ಎಂಬುದನ್ನು ಹೃದಯಂಗಮವಾಗಿ ಬಣ್ಣಿಸಿದರು. ನಾಟಕ ಕಂಪನಿಯ ನಟನ ಉದ್ಯೋಗವೇನೂ ಸರ್ಕಾರಿ ಕೆಲಸವಲ್ಲ, ಪರಿಸ್ಥಿತಿ ಹೀಗಿರುವಾಗ ಕನ್ನಡ ನಟ ಇಡೀ ಜೀವನವನ್ನು ನಾಟಕಕ್ಕಾಗಿ ಮೀಸಲಿಟ್ಟು, ವಯೋಧರ್ಮದಂತೆ ರಂಗದಿಂದ ನಿವೃತ್ತನಾದಾಗ, ಹೇಗೆ ಜೀವನ ಮಾಡಬೇಕು ? ಎಂದು ತುಂಬಿದ್ದ ಪ್ರೇಕ್ಷಕ ವೃಂದವನ್ನು ಕೇಳಿ, ನಮ್ಮ ದೇಶದಲ್ಲಿ ಕಲಾವಿದರಿಗೆ, ಸಾಹಿತಿಗಳಿಗೆ, ಸಂಗೀತಗಾರರಿಗೆ, ಸರ್ಕಾರ ಹಾಗೂ ಸಾರ್ವಜನಿಕರು ರಕ್ಷಣೆ ಕೊಡಲು ಮುಂದಾಗಬೇಕು ಎಂದು ಬಿನ್ನವಿಸಿಕೊಂಡರು. ಕಲೆಯ ಬಗೆಗಿನ ಅವರ ಸುಂದರ ಸುದೀರ್ಘ ಭಾಷಣ ಎಲ್ಲರ ಎದೆ ಕಲಕಿತು. ನಮ್ಮ ಮಂಡಳಿಯ ನಾಟಕಗಳು ನಿಲ್ಲಬಾರದೆಂಬ ಉದ್ದೇಶದಿಂದಲೇ ಬೆಂಗಳೂರಿನಿಂದ ಬಂದ ಹಿರಣ್ಣಯ್ಯನವರ ದೊಡ್ಡ ಗುಣವನ್ನು ಚಿಕ್ಕಬಸವರಾಜು ಅವರು ಕಲಾಭಿಮಾನಿಗಳಿಗೆ ತಿಳಿಸಿ ಅವರ ಹೃದಯ ವೈಶಾಲ್ಯವನ್ನು ಕೊಂಡಾಡಿದರು. ನಂತರ ಆನೇಕಲ್, ಶಿರಸಿ ಕ್ಯಾಂಪ್‌ಗಳಲ್ಲಿ ಲಾಸ್ ಆಯಿತು. ◆

## ಮಂಗಳೂರಿಗೆ ಆಹ್ವಾನಿಸಿದ ರತ್ನವರ್ಮ ಹೆಗಡೆ

ಒಂದು ದಿನ ಧರ್ಮಸ್ಥಳದ ಕ್ಷೇತ್ರಾಧಿಕಾರಿಗಳಾಗಿದ್ದು, ಇತ್ತೀಚೆಗೆ ಸ್ವರ್ಗಸ್ಥರಾದ ಶ್ರೀ ರತ್ನವರ್ಮ ಹೆಗಡೆ ಅವರು ಆಗಮಿಸಿದರು. ಬಂದವರೇ ನನ್ನನ್ನೂ, ಚಿಕ್ಕಬಸವರಾಜು ಅವರನ್ನೂ ಪ್ರತ್ಯೇಕ ಸ್ಥಳಕ್ಕೆ ಕರೆದೊಯ್ದು "ನೋಡಿ, ಶ್ರೀ ಚಾಮುಂಡೇಶ್ವರಿ ನಾಟಕ ಮಂಡಳಿಯನ್ನು ಕರೆದುಕೊಂಡು ಬರುವುದಾಗಿ ಹೇಳಿ ದಾಸರು ನನ್ನಿಂದ ಹಣ ಪಡೆದುಕೊಂಡಿದ್ದಾರೆ. ನಾನು ಮಂಗಳೂರಿನ ಸೆಂಟ್ರಲ್ ಮೈದಾನದಲ್ಲಿ ಥಿಯೇಟರ್ ಹಾಕಿಸಿ ಒಂದು ತಿಂಗಳಾಯಿತು. ನಿಮ್ಮ ಮಂಡಳಿಯನ್ನು ಕರೆತರುವ ವಿಚಾರ ಮಂಗಳೂರಿನಲ್ಲಿ ಪ್ರಚಾರವಾಗಿ ಹೋಗಿದೆ. ಖಾಲಿ ಥಿಯೇಟರ್ ಇರುವುದು ನನಗೆ ಅವಮಾನ. ಆದ್ದರಿಂದ ನೀವು ಯಾವ ಸಬೂಬು ಹೇಳದೆ ಬಂದು ನಾಟಕವಾಡಿಕೊಡಿ" ಎಂದರು. ಅವರ ವಿನಯಪೂರ್ವಕ ಒತ್ತಾಯಕ್ಕೆ ಸಿಲುಕಿ ಮಂಗಳೂರಿಗೆ ಹೋದೆವು.

ಹೆಗ್ಗಡೆ ಅವರು ತಮ್ಮ ಪರವಾಗಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ನಿಯಮಿಸಿದವರ ಗೊತ್ತುಗುರಿಯಿಲ್ಲದ ವ್ಯವಹಾರದಿಂದ ನಮಗೆ ತುಂಬಾ ನಷ್ಟವಾಗತೊಡಗಿತು. ಈ ನಷ್ಟದಲ್ಲೇ ಮೂವತ್ತು ನಾಟಕಗಳನ್ನಾಡಿದೆವು. ಆರ್ಥಿಕ ಪರಿಸ್ಥಿತಿ ದಿನೇ ದಿನೇ ಹದಗೆಟ್ಟುದುದರಿಂದ ಮಾತನಾಡುವ ಮಂಜುನಾಥ ಎಂದು ಖ್ಯಾತರಾಗಿದ್ದ ಪೂಜ್ಯ ಮಂಜಯ್ಯ ಹೆಗ್ಗಡೆ ಅವರನ್ನು ಕಂಡು ನಮ್ಮ ತೊಂದರೆಯನ್ನು ತೋಡಿಕೊಂಡು ಆರ್ಥಿಕ ನೆರವನ್ನು ಪಡೆಯಲು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ನಾನೂ ಚಿಕ್ಕಬಸವರಾಜು ಹೋದೆವು. ಏಕಕಾಲದಲ್ಲಿ ಆಶೀರ್ವಾದ ಮತ್ತು ನೆರವನ್ನು ಪಡೆದು ಬೆಂಗಳೂರಿಗೆ ಹೊರಟು ಬಂದೆವು. ಬೆಂಗಳೂರಿಗೆ ಬಂದ ನಂತರ ನಾಟಕರಂಗದಿಂದ ಮುಕ್ತಿ ಹೊಂದಲು ಇಚ್ಛಿಸಿ ಶ್ರೀ ಚಾಮುಂಡೇಶ್ವರಿ ನಾಟಕ ಸಭೆಯ ವ್ಯವಸ್ಥಾಪಕಿಯ ಪಟ್ಟದಿಂದ ನಿವೃತ್ತಳಾಗಲು ನಿಶ್ಚಯಿಸಿದೆ. ಸುಮಾರು ನಲವತ್ತು ವರ್ಷಗಳ ಕಾಲ ನಾಟಕ ರಂಗದಲ್ಲಿ ನಿಂತು ಕಲಾಮಾತೆಯ ಸೇವೆ ಮಾಡಿದರೂ ಮುಪ್ಪಿನಲ್ಲಿ ಆಸರೆಯಾಗುವಂತೆ ಏನನ್ನೂ ಕೂಡಿಟ್ಟುಕೊಳ್ಳಲಾಗಲಿಲ್ಲವಲ್ಲ ಎಂಬ ಚಿಂತೆಯ ಸುಳಿಗೆ ಸಿಲುಕಿದೆ. ◆

## ರಂಗಭೂಮಿಯ ಕಾಣಿಕೆ

ಶ್ರೀ ಚಾಮುಂಡೇಶ್ವರಿ ಕಂಪನಿಯಿಂದ ನಿರ್ಗಮಿಸಿದ ಮೇಲೆ ಕೆಲವು ಸಹಾಯಾರ್ಥ ನಾಟಕಗಳನ್ನು ವ್ಯವಸ್ಥೆ ಮಾಡಿ ಅದರಲ್ಲಿ ನಾನೂ ಭಾಗಿಯಾಗಿ ಅನೇಕ ಬಡ ಸಂಘ - ಸಂಸ್ಥೆಗಳಿಗೆ ಹಣ ಸಂಗ್ರಹ ಮಾಡಿಕೊಟ್ಟೆ. ಹಲವಾರು ಸಂಘ - ಸಂಸ್ಥೆಗಳು ನನ್ನನ್ನು ಬರಮಾಡಿಕೊಂಡು ನನ್ನ ಕಲಾಸೇವೆಯನ್ನು ಸ್ಮರಿಸಿ ಸನ್ಮಾನಿಸಿದವು. ಹೀಗೆ ಸನ್ಮಾನಿಸಿದ ಸಂಘ - ಸಂಸ್ಥೆಗಳಲ್ಲಿ ಬೆಂಗಳೂರಿನ ಶಶಿ ಕಲಾವಿದರು ಒಂದು. ಇದಾದ ನಂತರ ಎಷ್ಟೋ ಸಂಘ - ಸಂಸ್ಥೆಗಳು ನನ್ನನ್ನು ಆಹ್ವಾನಿಸಿ ಸನ್ಮಾನಿಸಿದವು. ಆದರೆ ನನ್ನಂತಹ ಇಳಿವಯಸ್ಸಿನ ಕಲಾವಿದರು ಸನ್ಮಾನ ಸಮಾರಂಭಗಳಿಂದ ಜೀವ ಹಿಡಿದು ನಿಲ್ಲಲು ಸಾಧ್ಯವಿಲ್ಲವಷ್ಟೆ? ನನ್ನ ವೃದ್ಧಾಪ್ಯದ ಬದುಕಿಗೆ ಭದ್ರತೆ, ರಕ್ಷಣೆ ಬರದಿದ್ದರಿಂದ ದಿನೇ ದಿನೇ ನನ್ನ ಪರಿಸ್ಥಿತಿ ಶೋಚನೀಯವಾಗತೊಡಗಿತು. ಕನ್ನಡ ನಾಡಿನಲ್ಲಿ ರಂಗಭೂಮಿಗಾಗಿ ಇಡೀ ಜೀವಿತವನ್ನು ಮೀಸಲಾಗಿಟ್ಟು ವಯೋಧರ್ಮದಂತೆ ರಂಗದಿಂದ ನಿವೃತ್ತರಾದಾಗ ಕಲಾವಿದರು ಹೇಗೆ ಬಾಳಬೇಕು ? ಎಂಬ ಪ್ರಶ್ನೆಯ ಬೃಹತ್ತತೆ ಅರ್ಥವಾಯಿತು.

ಜೀವನ ನಿರ್ವಹಣೆಗೆ ಏನಾದರೂ ಕಸುಬನ್ನು ಕೈಗೊಳ್ಳಬೇಕೆಂಬ ಯೋಚನೆಯಲ್ಲಿರುವಾಗಲೇ ಅಂದು ಬೆಂಗಳೂರಿನ ಬಾನುಲಿ ನಿಲಯಕ್ಕೆ ನಿರ್ದೇಶಕರಾಗಿ ಬಂದಿದ್ದ ಡಾ|| ಎ.ಎಂ. ನಟೇಶ್ ಅವರು ಮೂರು ತಿಂಗಳಿಗೊಂದಾವರ್ತಿ ರಂಗಭೂಮಿ ಗೀತೆಗಳನ್ನು ಆಕಾಶವಾಣಿಯಲ್ಲಿ ಹಾಡುವ ಅವಕಾಶ ಕಲ್ಪಿಸಿದರು. ಆಗಾಗ ಹೆಸರಾಂತ ನಾಟಕಗಳ ರೆಕಾರ್ಡನ್ನೂ ಪ್ರಸಾರ ಮಾಡುವ ವ್ಯವಸ್ಥೆ ಮಾಡಿದರು. ರಂಗಭೂಮಿ ಕಲಾವಿದರ ಬಗ್ಗೆ ವಿಶೇಷ ಅಭಿಮಾನವಿದ್ದ ನಟೇಶ್ ಅವರು ಕನ್ನಡ ರಂಗಭೂಮಿಯಲ್ಲಿ ಸ್ವತಃ ಧುಮುಕಿ ದುಡಿದವರು.

ಇವರ ಕಾಲದಲ್ಲಿ ಬೆಂಗಳೂರು ಬಾನುಲಿ ನಿಲಯ ಹಲವಾರು ಉತ್ಕೃಷ್ಟ ಕಾರ್ಯಗಳನ್ನು ಮಾಡಿತು. ಆ ಕೆಲಸ ಬಹುಜನರ ಹಂಬಲವೂ, ಅಪೇಕ್ಷೆಯೂ ಆಗಿತ್ತು. ಜೀವಂತವಾಗಿರುವ ಹಿರಿಯ ಕಲಾವಿದರ ಧ್ವನಿಯನ್ನು ರೆಕಾರ್ಡ್ ಮಾಡಿಟ್ಟು ಮೇಲಿಂದ ಮೇಲೆ ಆ ಧ್ವನಿಗಳನ್ನು ರೇಡಿಯೋ ಮೂಲಕ ಶ್ರೋತೃಗಳಿಗೆ ಪ್ರಸಾರ ಮಾಡುವ ವ್ಯವಸ್ಥೆ ಮಾಡಿದರು. ರಂಗಭೂಮಿಯ ಇತಿಹಾಸ ದೃಷ್ಟಿಯಿಂದ ಇವರು ಮಾಡಿದ ಈ ಕೆಲಸ ನಿಜಕ್ಕೂ ಅಮೂಲ್ಯವಾದುದು. ನಮ್ಮ ಕಂಪನಿಯ ನಾಟಕಗಳಾಗಿದ್ದ ದಾನಶೂರ

ಕರ್ಣ, ಸುಭದ್ರಾ ಕಲ್ಯಾಣ, ಮತ್ತು ಮನ್ಮಥ ವಿಜಯ ನಾಟಕಗಳನ್ನು ಧ್ವನಿ ಮುದ್ರಿಸಿಕೊಂಡರು. ಮನ್ಮಥ ವಿಜಯದಲ್ಲಿ ನಾನು ಮಾಯಾವತಿಯಾಗಿಯೂ, ಪ್ರದ್ಯುಮ್ನನಾಗಿ ಮೂಕನಹಳ್ಳಿ ಪಟ್ಟಣದ ಸಂಗೀತ ವಿದ್ವಾನ್ ಎಂ. ಸುಬ್ಬರಾಯರು ಪಾತ್ರ ವಹಿಸಿದೆವು. ಸುಭದ್ರಾ ಕಲ್ಯಾಣ ಮತ್ತು ದಾನಶೂರ ಕರ್ಣ ನಾಟಕಗಳ ಧ್ವನಿಮುದ್ರಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೆಸರಾಂತ ನಟರುಗಳಾದ ಕಲಾವಿಶಾರದ ಕೊಟ್ಟೂರಪ್ಪ, ಕೃಷ್ಣನ ಪಾತ್ರದಲ್ಲಿ ಪ್ರಖ್ಯಾತಿ ಪಡೆದಿದ್ದ ಚಿಕ್ಕಬಸವರಾಜು, ಅವರ ಅಣ್ಣಂದಿರಾದ ಬಸವರಾಜಪ್ಪ, ಹಾಸ್ಯಪಟು ರಾಮರಾಜ ಅರಸು, ರಂಗನಾಥಶರ್ಮ, ಸಂಗೀತ ವಿದ್ವಾನ್ ಆರ್. ಪರಮಶಿವು, ಚಾಮರಾಜನಗರದ ರಾಮಸ್ವಾಮಿಶಾಸ್ತ್ರಿ, ಗುಂಡೂರಾವ್ ಇನ್ನೂ ಅನೇಕ ಮುಖ್ಯ ಕಲಾವಿದರು ಆಗಮಿಸಿದ್ದರು.

ಸ್ತ್ರೀ ಪಾತ್ರಗಳ ನಿರ್ವಹಣೆಗಾಗಿ ಇಂದು ಸ್ತ್ರೀ ನಾಟಕ ಮಂಡಳಿಯ ಸಂಚಾಲಕಿಯೂ, ಹೆಸರಾಂತ ಅಭಿನೇತ್ರಿಯೂ ಆದ ಆರ್. ನಾಗರತ್ನಮ್ಮ, ಚಂದ್ರಮ್ಮ, ಪದ್ಮರಾಜಮ್ಮ - ಇನ್ನೂ ಅನೇಕ ಕಲಾವಿದೆಯರೂ ಆಗಮಿಸಿ ನಾಟಕದಲ್ಲಿ ಪಾಲ್ಗೊಂಡರು. ಎ. ಐ. ಆರ್.ನ ಸಂಗೀತ ವಿದ್ವಾಂಸರುಗಳಾದ ಶ್ರೀ ಎಸ್. ಬಾಲಸುಬ್ರಮಣ್ಯಂ ಅವರು ಪಿಟೀಲು, ಎಂ. ಎಸ್. ರಾಮಯ್ಯನವರು ಮೃದಂಗ, ನಟರಾಜು ಅವರು ಕೊಳಲು, ಸಂಗೀತ ವಿದ್ವಾನ್ ಬಿ. ಎಂ. ನಾರಾಯಣದಾಸರು ಹಾರ್ಮೋನಿಯಂ ಬಾರಿಸಿ ನಾಟಕ ಕಳೆಗಟ್ಟುವಂತೆ ಮಾಡಿದರು. ನಾಟಕ ಯಶಸ್ವಿಯಾಯಿತು. ಈ ನಾಟಕದ ಯಶಸ್ಸಿನಿಂದ ಉತ್ತೇಜಿತರಾದ ಡಾ|| ನಟೇಶ್ ಅವರು ನನ್ನನ್ನು ಎ. ಐ. ಆರ್.ನ ನಾಟಕ ವಿಭಾಗಕ್ಕೆ ಸೇರಿಸಿಕೊಳ್ಳಲು ನಿರ್ಧರಿಸಿ ಇಂಟರ್‌ವ್ಯೂ ಕಳುಹಿಸಿದರು. ಅಲ್ಲಿಯೂ ದುರಾದೃಷ್ಟ ಕಾದಿದ್ದು 'ಇಂಟರ್‌ವ್ಯೂ' ಬಂದ ಸಮಯದಲ್ಲಿ ಮದರಾಸಿನಲ್ಲಿ ವ್ಯವಸ್ಥೆ ಮಾಡಿದ್ದ ನಾಟಕದಲ್ಲಿ ಪಾಲ್ಗೊಳ್ಳಲು ಹೋಗಿದ್ದೆ. ಊರಿಗೆ ಮರಳಿದ ಮೇಲೆ ವಿಷಯ ತಿಳಿದು ತುಂಬಾ ವಿಷಾದಪಟ್ಟೆ. ಡಾ|| ನಟೇಶ್ ಅವರನ್ನು ಕಂಡಾಗ ಅವರು ನನ್ನ ಬಗ್ಗೆ ಮರುಕ ತೋರಿಸಿದರೇ ವಿನಾಃ ಮತ್ತೇನೂ ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ.

ಕನ್ನಡ ರಂಗಭೂಮಿ, ಕಲಾವಿದರ ಬಗ್ಗೆ ಅಪಾರ ಅಭಿಮಾನವಿರಿಸಿದ್ದ ನಟೇಶ್‌ರವರು ಕನ್ನಡ ರಂಗಭೂಮಿಯ ಜೀವಸ್ತಂಭಗಳಾದ ಹದಿನೈದು ಮಂದಿ ನಟ - ನಟಿಯರನ್ನು ಆಕಾಶವಾಣಿಗೆ ಆಹ್ವಾನಿಸಿ ಅವರ ಧ್ವನಿಯನ್ನು ಧ್ವನಿಮುದ್ರಿಕೆಗಾಗಿ ತೆಗೆದುಕೊಂಡರು. ಪಾಶ್ಚಾತ್ಯ ದೇಶಗಳಲ್ಲಿ ರಂಗಭೂಮಿ ಕಲಾವಿದರ ಧ್ವನಿಮುದ್ರಿಕೆಗಳನ್ನು ಸಿದ್ಧಪಡಿಸಿ ನೆನಪಿಗಾಗಿ ಆ ಧ್ವನಿಮುದ್ರಿಕೆಗಳನ್ನು ಇಡುವಂತೆ ನಟೇಶ್‌ರವರು ಇಲ್ಲಿಯೂ ಆ ವ್ಯವಸ್ಥೆ ಮಾಡಲು ನಿರ್ಧರಿಸಿದರು. ಜೊತೆಗೆ

ಈ ಕಾರ್ಯಕ್ರಮ ಸಾರ್ವಜನಿಕರ ಸಮ್ಮುಖದಲ್ಲಿ ನಡೆಯಲು ಕಾರ್ಯತತ್ಪರರಾದರು. ಪರಿಣಾಮವಾಗಿ ಬೆಂಗಳೂರು ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ರಂಗಭೂಮಿಯ ಕಾಣಿಕೆ ಕಾರ್ಯಕ್ರಮ ಏರ್ಪಟ್ಟಿತು. ಇದರಲ್ಲಿ ನಾಟಕರತ್ನ ಜಿ. ಎಚ್. ವೀರಣ್ಣ, ಅಭಿನವ ಭಕ್ತ ಶಿರೋಮಣಿ ಸಿ.ಬಿ. ಮಲ್ಲಪ್ಪ, ಸಂಗೀತಪಟು ಬಸವರಾಜ ಮನ್ಸೂರ, ನಾಟಕದ ಜಯರಾಯರು, ಆರ್ ನಾಗೇಂದ್ರರಾವ್, ಬಿ. ಎಸ್. ರಾಜ ಅಯ್ಯಂಗಾರ್, ಎಂ.ವಿ. ಸುಬ್ಬಯ್ಯನಾಯ್ಡು, ಕೊಟ್ಟೂರ ಬಸಪ್ಪ, ಮರಿರಾವ್ ಹಾಗೂ ಶ್ರೀಮತಿಯರಾದ ಲಕ್ಷ್ಮೀಬಾಯಿ, ಸೋನಾಬಾಯಿ ದೊಡ್ಡಮನಿ ಹಾಗೂ ನಾನು ಪಾಲ್ಗೊಂಡಿದ್ದೆವು. ರಂಗಭೂಮಿಯಲ್ಲಿ ನಾವು ಯಾವ ಪಾತ್ರದಿಂದ ಜನಪ್ರಿಯತೆ ಸಾಧಿಸಿದ್ದೆವೋ ಅವೇ ಪಾತ್ರಗಳನ್ನು ನಿರ್ವಹಿಸಲು ಏರ್ಪಾಟಾಗಿತ್ತು. ಅಂದು ನಮಗೆ ಆ ಪಾತ್ರಗಳ ವೇಷಭೂಷಣಗಳೂ ಇರಲಿಲ್ಲ. ಆದರೂ ನಾವಿತ್ತ ಪ್ರದರ್ಶನಗಳು ಕಲಾರಸಿಕರ ಮೇಲೆ ಅದ್ಭುತ ಪರಿಣಾಮ ಬೀರಿ ರಸಸೇಚನೆಯನ್ನುಂಟು ಮಾಡಿದುವು. ಭಾಗವಹಿಸಿದ್ದ ಕಲಾವಿದರಲ್ಲಿ ಹೆಚ್ಚಿನ ಮಂದಿ ವಯಸ್ಸಾದವರೇ ಇದ್ದರೂ ಕೂಡ ವಯಸ್ಸು ನಟ-ನಟಿಯರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಕಲಾಸೇವೆಗಾಗಿ ಜೀವನವನ್ನು ಧಾರೆ ಎರೆದಿದ್ದ ಕಲಾವಿದರಲ್ಲಿ ಭಾವಾವೇಶಕ್ಕೆ, ಧ್ವನಿಗೆ, ಪಾತ್ರಕ್ಕೆ ಮುಪ್ಪು ಬಂದಿರಲಿಲ್ಲ.

ನಾಟಕ ಶಿರೋಮಣಿ ವರದಾಚಾರ್ಯರ ಪಟ್ಟಶಿಷ್ಯರಾಗಿದ್ದ ನಾಟಕದ ಜಯರಾಯರು ದಶರಥನಾಗಿ ಹಾಗೂ ಸಾಕುಮಗಳಾಗಿದ್ದ ಶಕುಂತಲೆಯನ್ನು ಗಂಡನ ಮನೆಗೆ ಕಳುಹಿಸಿಕೊಡುವ ತಪೋವೃದ್ಧ ಕಣ್ವರಾಗಿ ಅಭಿನಯಿಸಿದಾಗ ಶೋಕ ರಸ ಇಡೀ ಸಭೆಯನ್ನು ತಾನೇತಾನಾಗಿ ಆವರಿಸಿತು. ನಟಭಯಂಕರ ಎಂ. ಎನ್. ಗಂಗಾಧರರಾಯರು ಹಿರಣ್ಯಕಶಿಪುವಿನ ಪಾತ್ರವನ್ನು ಪೋಷಿಸಿದಾಗ ಸಭೆಯಲ್ಲಿ ರೋಮಾಂಚನವಾಯಿತು. ಆರ್. ನಾಗೇಂದ್ರರಾಯರು ವಸಂತಾಸೇನಾ ನಾಟಕದ ಶಕಾರ ಪಾತ್ರವನ್ನು ವಹಿಸಿದಾಗ ನಟನಾ ಕಲೆಯ ವೈಶಿಷ್ಟ್ಯವೇನೆಂಬುದು ಗೋಚರವಾಯಿತು. ಆಂಜನೇಯನ ಪಾತ್ರದಲ್ಲಿ, ಕರ್ಣನ ಪಾತ್ರದಲ್ಲಿ ಖ್ಯಾತಿ ಹೊಂದಿದ್ದ ಕಲಾವಿಶಾರದ ಕೊಟ್ಟೂರಪ್ಪನವರು ಎಲ್ಲೆಲ್ಲಿಯೂ ಶ್ರೀರಾಮನ ರೂಪವನ್ನೇ ಕಂಡಂತೆ ಅಭಿನಯಿಸುತ್ತಿದ್ದಾಗ ಭಕ್ತಿರಸ ತಾನೇ ತಾನಾಗಿ ಹರಿಯಿತು. ಗಾಯಕ ನಟ ಬಸವರಾಜ ಮನ್ಸೂರ ಮತ್ತು ಸೋನೂಬಾಯಿ ದೊಡ್ಡಮನಿ ಅವರು ಕೃಷ್ಣ ಮತ್ತು ದ್ರೌಪದಿಯರಾಗಿ ಕಲಾರಸಿಕರ ಎದುರು ನಿಂತಾಗ ಅವರ ಸಂಗೀತಮಯ ಸಂಭಾಷಣೆಯಲ್ಲಿ ಸಭಿಕರು ತಲ್ಲೀನರಾದರು. ಅವರ ಕಂಠಮಾಧುರ್ಯ ಇನ್ನೂ ಅಪಾರವಾಗಿ ಸಚೇತವಾಗಿದೆ ಎಂಬ ಉದ್ಗಾರ ಪ್ರೇಕ್ಷಕರಿಂದ ಹೊರಬರದಿರಲಿಲ್ಲ. ನಾರದನ ಪಾತ್ರದಲ್ಲಿ ಸಂಗೀತ ನಟ ಬಿ. ಎಸ್. ರಾಜಯ್ಯಂಗಾರ್ ಅವರು ತಮ್ಮ ಗಾಯನದಿಂದ ಸಭಿಕರನ್ನು ಗಾನಲೋಕದಲ್ಲಿಯೇ ಈಜಾಡಿಸಿದರು. ಸವಾಯಿ

ಗಂಧರ್ವರ ಶಿಷ್ಯರಾದ ನೀಲಕಂಠ ಬುವಾ ಗಾಡಗೋಳಿ ಅವರು ವೃದ್ಧಾಪ್ಯದಲ್ಲಿದ್ದರೂ ತಮ್ಮ ದೈವದತ್ತವಾದ ಅಚ್ಚರಿಯ ಕಂಠದಿಂದ ತುಂಬಿದ ಸಭೆಯಲ್ಲಿ ನಾದಲೋಕವನ್ನೇ ತೆರೆದರು. ಎಂ.ವಿ. ಸುಬ್ಬಯ್ಯನಾಯ್ಡು ಮತ್ತು ಲಕ್ಷ್ಮೀಬಾಯಿ ಅವರು ಜೋಡಿಯಾಗಿ ಭಕ್ತ ಅಂಬರೀಷ ನಾಟಕದಿಂದ ಒಂದು ದೃಶ್ಯವನ್ನಾಯ್ದುಕೊಂಡು ಶೃಂಗಾರ ರಸಭಾವವುಳ್ಳ ವಾತಾವರಣವನ್ನು ಕಲ್ಪಿಸಿದರು. ವೆಂಕಟರಾವ್ ರಾಮದುರ್ಗ ಅವರು ಸಾಮಾಜಿಕ ಪ್ರಸಂಗವೊಂದನ್ನು ಎತ್ತಿಕೊಂಡು ಒಳ್ಳೆಯ ಮಟ್ಟನ್ನು ಹಾಡಿದರು.

ಜಿ. ಎಚ್. ವೀರಣ್ಣನವರು ವಿನೋದ ರತ್ನಾಕರರೆಂದೇ ಹೆಸರಾದವರು. ಅವರು ಸದಾರಮೆಯ ಕಳ್ಳನ ಪಾತ್ರವನ್ನು ವಹಿಸಿ ಹಾಸ್ಯದ ಹೊನಲನ್ನೇ ಹರಿಸಿದರು. ವರದಾಚಾರ್ಯರ ಮತ್ತೋರ್ವ ಶಿಷ್ಯರಾದ ಎಂ.ಜಿ. ಮರಿರಾಯರು ಧ್ರುವ ಚರಿತ್ರೆಯ ಕಪಿಂಜಲನ ಪಾತ್ರದಲ್ಲಿ ತಮ್ಮ ಹಿಂದಿನ ಕೀರ್ತಿಯನ್ನೇ ನೆನಪಿಗೆ ತಂದುಕೊಟ್ಟರು.

ನಾನು ಸುಭದ್ರೆಯ ಪಾತ್ರದಲ್ಲಿ ಹಾಡಿದ ಹಾಡುಗಳು ಪ್ರೇಕ್ಷಕ ವೃಂದದಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡಿದವು. ಈ ಕಾರ್ಯಕ್ರಮ ನನ್ನ ಕಲಾಜೀವನದ ಸಿರಿಮುಡಿಯಾಯಿತು.

ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳೂ, ಉಜ್ವಲ ಕಲಾಭಿಮಾನಿಗಳೂ , ಕಲಾಪ್ರೋತ್ಸಾಹಕರೂ ಆಗಿರುವ ಇಂದು ಕಾಂಗ್ರೆಸ್ ಪಕ್ಷದ ಲೋಕಸಭಾ ಸದಸ್ಯರಾದ ಶ್ರೀ ಕೆ. ಹನುಮಂತಯ್ಯನವರು ನಮ್ಮ ನಾಡಿನ ಕಲೆ, ಸಾಹಿತ್ಯದ ಮೂಲಕ ನಮ್ಮ ಸಂಸ್ಕೃತಿಯ ಪ್ರಚಾರ ಹಳ್ಳಿಹಳ್ಳಿಗಳಲ್ಲಿಯೂ ಆಗಿ ಜನಸಾಮಾನ್ಯರ ಮೇಲೆ ಪ್ರಭಾವ ಬೀರಬೇಕೆಂಬ ಘನ ಉದ್ದೇಶದಿಂದ ಸಂಸ್ಕೃತಿ ಪ್ರಚಾರ ಎಂಬ ಯೋಜನೆಯನ್ನು ಜಾರಿಗೆ ತಂದರು. ನಾಡಿನ ಗಮಕಿಗಳು, ಸಂಗೀತ ವಿದುಷಿಯರು, ಸಂಗೀತಗಾರರು, ಹರಿಕಥಾ ವಿದ್ವಾಂಸರೆಲ್ಲರೂ ಇದರಲ್ಲಿ ಭಾಗವಹಿಸಿದರು. ನಾನೂ ಯೋಜನೆಯಲ್ಲಿ ಭಾಗವಹಿಸಿದೆ. ಇದರ ಅಂಗವಾಗಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಸಂಗೀತ ಕಛೇರಿ ಮಾಡಿದೆ. ನೆರೆದಿದ್ದ ಜನರಿಂದ ಶಹಭಾಸ್‌ಗಿರಿ ಪಡೆದುಕೊಂಡೆ. ನಾಲ್ಕಾರು ಊರುಗಳಲ್ಲಿ ಸಂಸ್ಕೃತಿ ಪ್ರಚಾರಕ್ಕಾಗಿ ಸಂಗೀತ ಕಛೇರಿ ಮಾಡಿದ ನಂತರ ಈ ಯೋಜನೆ ರದ್ದಾಯಿತು. ಹಠಾತ್ತಾಗಿ ನಿಂತುಹೋದ ಈ ಯೋಜನೆಯಿಂದ ಮನಸ್ಸಿಗೆ ತುಂಬಾ ವ್ಯಥೆಯುಂಟಾಯಿತು.

ನಂತರ ನಾನು ನಾಟಕ ಶಿರೋಮಣಿ ವರದಾಚಾರ್ಯರ ಸ್ಮಾರಕ ಕಲಾ ಸಂಘದವರು ಏರ್ಪಡಿಸಿದ ಕೆಲವು ಸಹಾಯಾರ್ಥ ನಾಟಕಗಳಲ್ಲಿ ಚಲನಚಿತ್ರ ನಿರ್ಮಾಪಕರೂ - ನಿರ್ದೇಶಕರೂ, ಪ್ರತಿಭಾನ್ವಿತ ನಟರೂ ಆದ ಶ್ರೀ ಆರ್. ನಾಗೇಂದ್ರರಾಯರೊಂದಿಗೆ ಅಭಿನಯಿಸಿದೆ. ◆

# ಕನ್ನಡ ಕುಲರಸಿಕರ ನಿತ್ಯ ಸ್ಮರಣೆ

ಅಭಿನಯ ಕೌಶಲ್ಯದಿಂದ, ಸಂಗೀತದ ಮೋಡಿಯಿಂದ ಕನ್ನಡ ಕಲಾರಸಿಕರನ್ನು ತಲೆದೂಗಿಸಿ, ಅನೇಕ ಪಾರಿತೋಷಕ, ಮೆಡಲು, ಬಹುಮಾನ, ತೊಡಗಳನ್ನು ಪಡೆದು ಗೌರವ ಜೀವನ ನಡೆಸಿದರೂ ಸಹ ಇಂದು ನಾನು ಸುಧಾಮನಂತೆ ಕಾಲವನ್ನು ತಳ್ಳಬೇಕಾದ ಪರಿಸ್ಥಿತಿ ಬಂದಿತಲ್ಲ ಎಂಬ ಕೊರಗಿನಲ್ಲಿದ್ದಾಗಲೇ ಮೈಸೂರು ಸಂಗೀತ ನಾಟಕ ಅಕಾಡೆಮಿ ನನ್ನನ್ನು ರಾಜ್ಯ ಗೌರವ ಪ್ರಶಸ್ತಿಯಿತ್ತು ಸನ್ಮಾನಿಸಲಿದೆ ಎಂದು ಪತ್ರ ಬರೆದು ತಿಳಿಸಿತು.

ಹಿರಿಯ ಕಲಾವಿದರಿಗೆ ಸಲ್ಲುವ ಈ ಗೌರವದಿಂದ ತುಂಬಾ ಸಂತೋಷಗೊಂಡೆ. ನಾನು ಮರೆಯಲಾಗದ ಆ ದಿನ ಬಹು ಶೀಘ್ರದಲ್ಲಿಯೇ ಬಂದಿತು. 1962ರ ಸೆಪ್ಟೆಂಬರ್ 17ರಂದು ಸಂಜೆ ಬೆಂಗಳೂರು ಪುರಭವನದಲ್ಲಿ ನಡೆದ ಸಮಾರಂಭದಲ್ಲಿ ಹಿರಿಯ ಸಾಹಿತಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರ ಘನ ಅಧ್ಯಕ್ಷತೆಯಲ್ಲಿ, ಆಗ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ರಾಜ್ಯ ಗೌರವ ಪ್ರಶಸ್ತಿಯಿತ್ತರು. ಅಂದಿನ ದಿನ ನನ್ನೊಂದಿಗೆ ಸರ್ವಶ್ರೀ ಎಂ.ವಿ. ಸುಬ್ಬಯ್ಯನಾಯ್ಡು, ಚಿಂತನಪಲ್ಲಿ ವೆಂಕಟರಾವ್, ಮಲ್ಲಿಕಾರ್ಜುನ ಮನ್ಸೂರ, ಆರ್. ಎಸ್. ಕೇಶವಮೂರ್ತಿ, ಟಿ. ಎಂ. ಪುಟ್ಟಸ್ವಾಮಯ್ಯ, ಎನ್. ಗುಂಡಪ್ಪ, ಪುಟ್ಟರಾಜ ಗವಾಯಿ, ಹಾರಾಡಿ ರಾಮಗಾಣಿಗ, ಶ್ರೀಮತಿ ಕೆ. ವೆಂಕಟಲಕ್ಷ್ಮಮ್ಮ ಮೊದಲಾದವರೂ ಆ ಸಮಾರಂಭದಲ್ಲಿ ಹಾಜರಿದ್ದು ತಮಗೆ ಸಂದ ರಾಜ್ಯ ಪ್ರಶಸ್ತಿಯನ್ನು ಸ್ವೀಕರಿಸಿದರು.

ಶ್ರೀ ಎಸ್. ನಿಜಲಿಂಗಪ್ಪನವರು, ಪ್ರಶಸ್ತಿ ಪಡೆದ ಪ್ರತಿಯೊಬ್ಬ ಕಲಾವಿದರಿಗು ತಾವೇ ಖುದ್ದಾಗಿ ಶಾಲುಜೋಡಿಗಳನ್ನು ಹೊದಿಸಿ ಸುಂದರವಾದ ನಟರಾಜ ವಿಗ್ರಹಗಳನ್ನಿತ್ತು ಗೌರವಿಸಿದರು.

ರಾಜಾಶ್ರಯದಲ್ಲಿ ಕಲೆಗೆ ದೊರಕುತ್ತಿದ್ದ ಪ್ರೋತ್ಸಾಹ ಪ್ರಜಾರಾಜ್ಯದಲ್ಲಿ ಕಾಣದಾಗುತ್ತಿದೆಯೆಂಬ ಮಾತನ್ನು ನಿಜಲಿಂಗಪ್ಪನವರು ಅಲ್ಲಗಳೆದು, "ಖಂಡಿತವಾಗಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತೇವೆ. ಅದು ಸರ್ಕಾರದ ಕರ್ತವ್ಯವೂ ಆಗಿದೆ. ಕಲೋಪಾಸಕರಿಗೆ ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳು ಎಲ್ಲ ರೀತಿಯಿಂದಲೂ ನೆರವು ನೀಡಲು ಯೋಚಿಸಿವೆ " ಎಂದು ತಿಳಿಸಿದರು. ಮುಂದುವರಿದು ನಾನು "ಸೆಂಟ್ರಲ್

ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಶ್ರೀಮತಿ ಸುಂದರಮ್ಮನವರ ಸುಭದ್ರಾ ಪಾತ್ರವನ್ನು ನೋಡಿ ನಾನೂ ಏಕೆ ಇವರ ಜೊತೆಯಲ್ಲಿ ನಾಟಕ ಕಂಪನಿಗೆ ಸೇರಿ ನಟನಾಗಬಾರದು ಎಂದು ಯೋಚಿಸುತ್ತಿದ್ದೆ'' ಎಂದು ಹಾಸ್ಯಚಟಾಕಿ ಸಿಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಪ್ರಜಾಪ್ರಭುತ್ವದಲ್ಲಿ ಕಲೆಯನ್ನೂ, ಕಲಾವಿದರನ್ನೂ ಉಳಿಸಿ ಬೆಳಸಬೇಕಾದುದು ಸರಕಾರದ ಆದ್ಯ ಕರ್ತವ್ಯ ಎಂದು ತಿಳಿಸಿದರಲ್ಲದೆ, ಸಂಗೀತ ಹಾಗೂ ನೃತ್ಯ ಕಲಾಶಾಲೆಗಳನ್ನು ಸ್ಥಾಪಿಸಿ ಉತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಸರಕಾರ ನೀಡಬೇಕೆಂದು ಸಲಹೆ ಮಾಡಿದರು. ಮುಂದುವರಿದು ''ನಿಜಲಿಂಗಪ್ಪನವರು ಸುಂದರಮ್ಮನವರ ಸುಭದ್ರಳ ಪಾತ್ರವನ್ನು ನೋಡಿ ನಾಟಕ ಕಂಪನಿ ಸೇರಿದ್ದರೆ ಇಂದು ನಮಗೆ ಕಲೆಗೆ, ಕಲಾವಿದರಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಲು ಭರವಸೆಯಿತ್ತಿರುವ ಮುಖ್ಯಮಂತ್ರಿಗಳೊಬ್ಬರು ದೊರೆಯದಂತಾಗುತ್ತಿದ್ದರು'' ಎಂದು ವಿನೋದವಾಗಿ ತಿಳಿಸಿ, ಪ್ರಜೆಯೇ ಪ್ರಭು ಎಂಬುದನ್ನು ಪ್ರಜೆಗಳು ಮರೆತಿದ್ದರೂ, ಸರ್ಕಾರ ತಾನು ಪ್ರಜಾಸೇವಕನೆಂಬುದನ್ನು ಮರೆಯದೆ ಕೆಲಸ ಮಾಡಿದರೆ, ಜನರ ಕಲ್ಯಾಣ ಹಾಗೂ ಕಲೆಯ ಉದ್ಧಾರವಾಗುತ್ತದೆ ಎಂದು ನುಡಿದರು.

ಈ ಎಲ್ಲ ಸಮಾರಂಭ ಪ್ರಶಸ್ತಿಗಳಿಂದಾಗಿ ಎದೆ ತುಂಬಿಬರುತ್ತಿತ್ತು. ಆದರೆ ಹೊಟ್ಟೆಯ ಪಾಡು ?

ನನ್ನ ದಾರುಣ ಪರಿಸ್ಥಿತಿಯನ್ನು ನೋಡಿ, ಓರಗೆಯ ಕಲಾವಿದರು ನನ್ನ ನೆರವಿಗಾಗಿ ಏರ್ಪಡಿಸಿದ ಬೆನಿಫಿಟ್ ನಾಟಕದಲ್ಲಿ ನಾಗೇಂದ್ರರಾಯರೂ, ಕೊಟ್ಟೂರಪ್ಪನವರೂ ಭಾಗವಹಿಸಿ ಕಳೆ ತುಂಬಿದರು. ಚಿಕ್ಕಬಸವರಾಜು ಅವರ ಅಪಾರ ಪರಿಶ್ರಮದಿಂದಾಗಿ ನಡೆದ ನಾಟಕ ವಿರಾಟಪರ್ವದಲ್ಲಿ ನಾನು ದ್ರೌಪದಿಯಾಗಿ ಹಳೆಯ ರಂಗಗೀತೆಗಳನ್ನು ಸುಮ್ಮಾನದಿಂದ ಹಾಡಿದೆ. ಅಂದಿನ ರಸಿಕರು ಮನಸಾರೆ ಮೆಚ್ಚಿಕೊಂಡುದುದನ್ನು ನೋಡಿ ಅಚ್ಚರಿಯೂ, ಆನಂದವೂ ಆಯಿತು.

ಮುಂದೆ ನನ್ನ ಪೂರ್ವಿಕರು ಹುಟ್ಟಿ, ಬೆಳೆದ ಊರಾದ ಮಳವಳ್ಳಿಯಲ್ಲಿ ಸನ್ಮಾನೋತ್ಸವ. ಅನಂತರ ಬೆಂಗಳೂರು ನಾಗರೀಕರಿಂದ ಅಭಿನಂದನಾ ಪತ್ರಿಕೆಯ ಸಮರ್ಪಣಾ ಸಮಾರಂಭದಲ್ಲಿ ''ನಮ್ಮ ನಾಟಕದ ಇತಿಹಾಸದಲ್ಲಿ ಒಂದು ಅಧ್ಯಾಯಕ್ಕೆ ತಮ್ಮ ಹೆಸರು ಕೊಡುವಷ್ಟು ಮಟ್ಟಿನ ದೊಡ್ಡ ಸೇವೆ ಸಲ್ಲಿಸಿದ್ದೀರಿ . . . . . ನಾಟಕ ಶಿರೋಮಣಿ ವರದಾಚಾರ್ಯರು ಕಥಾನಾಯಕನ ಪಾತ್ರದಲ್ಲಿ ಗಳಿಸಿದ ಅಪಾರವಾದ ಕೀರ್ತಿಯನ್ನು ತಾವು ಕಥಾನಾಯಕಿಯ ಪಾತ್ರದಲಿ ಗಳಿಸಿದ್ದೀರಿ. ತಮ್ಮ ರಂಗಸೇವೆ, ನಾಡು ಮರೆಯದಂಥದ್ದು'' ಎಂದು ಅಭಿನಂದನಾ ಪತ್ರಿಕೆಯಲ್ಲಿ ಪ್ರಶಂಸಿಸಲಾಗಿತ್ತು. ಕನ್ನಡ ಕುಲರಸಿಕರ ಔದಾರ್ಯದ ವೈಶಾಲ್ಯ ಅರ್ಥವಾಗಿ ಕಣ್ಣಿನಲ್ಲಿ ಹನಿಗೂಡಿತು.


ಕನ್ನಡ ಚಳವಳಿಯ ನಾಯಕ ಶ್ರೀ ವಾಟಾಳ್ ನಾಗರಾಜ್ ಅವರೂ ಸಹ ನನ್ನನ್ನು ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಬೆಂಗಳೂರಿನ ನೃಪತುಂಗ ಮಂಟಪದಲ್ಲಿ ಸನ್ಮಾನಿಸಿದರು.

ಹೆಸರಾಂತ ಅಭಿನೇತ್ರಿಯಾಗಿ, ಗಾಯಕಿಯಾಗಿ, ಪ್ರಸಿದ್ಧ ವೃತ್ತಿ ಮಂಡಳಿಯೊಂದರ ನೇತೃತ್ವ ವಹಿಸಿ, ನಲವತ್ತು ವರ್ಷಗಳ ಕಾಲ ದುಡಿದು, ಇಂದು ವಿಶ್ರಾಂತ ಜೀವನ ನಡೆಸುತ್ತಿರುವ ನನಗೆ, ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ಕೊಡಮಾಡುತ್ತಿರುವ ನೂರು ರೂಪಾಯಿ ಮಾಸಿಕ ವೇತನ ಜೀವನದ ಏಕೈಕ ಆಧಾರವಾಗಿದೆ.( ಇದಕ್ಕಾಗಿ ಒತ್ತಾಸೆಯಿತ್ತ ಮಾನ್ಯ ಅ.ನ. ಕೃಷ್ಣರಾಯರ ಕರುಣೆಯ ನೆರವನ್ನು ಅನುದಿನ ಸ್ಮರಿಸಿಕೊಳ್ಳುತ್ತೇನೆ.)


ಇಂದಿನ ನಾಟಕಗಳನ್ನು ನೋಡಿ ಆಗಾಗ್ಗೆ ನನ್ನ ಮನಸ್ಸಿನಲ್ಲಿ ಜಿಜ್ಞಾಸೆ ಹುಟ್ಟುತ್ತದೆ. ಹಿಂದೆ ಮಂಡಳಿಯ ಮ್ಯಾನೇಜರ್ - ಪ್ರೊಪ್ರೈಟರ್ ಹಾಗೂ ಕಲಾವಿದರ ನಡುವಣ ಸುಮಧುರ ಬಾಂಧವ್ಯ ಇದೀಗ ಕಡಮೆಯಾಗಿದೆಯೊ ಏನೋ ಎನ್ನಿಸುತ್ತದೆ. ಪಾತ್ರದ ತಾರತಮ್ಯ ಜ್ಞಾನವೇ ಕಲಾವಿದರಲ್ಲಿ ಕಡಿಮೆಯಾಗುತ್ತಿದೆಯೆ ಎಂಬ ಸಂಶಯ ಕೂಡ ಅನೇಕ ವೇಳೆ ಬಂದಿದೆ.

ದ್ರೌಪದಿಯ ಭೂಮಿಕೆ ನಿರ್ವಹಿಸುವ ಕಲಾವಿದೆ ಇಂದು, ಪಾತ್ರಗಾಂಭೀರ್ಯಕ್ಕಿಂತ ಹೆಚ್ಚಾಗಿ ದೇಹಸೌಷ್ಠವದ ಪ್ರದರ್ಶನಕ್ಕೆ ಆತುರಳಾಗಿರುವಂತಿದೆ. ರಂಗಕಲೆಯಲ್ಲಿ ಪಾತ್ರನಿರ್ವಹಣೆ, ಆಂತರಿಕ ಭಾವ ವೈಭವದ ದ್ಯೋತಕವಾಗಬೇಕು ; ಬಾಹ್ಯರೂಪದ ಪ್ರದರ್ಶನವಾಗಬಾರದು. ಪಾತ್ರವನ್ನು ಅನುಭವಿಸಿಯಲ್ಲದೆ, ಅಭಿನಯಿಸಿ ತೋರಿದರೆ ಕಲೆ ಅದೆಂತಹ ಔನ್ನತ್ಯವನ್ನು ಕಂಡೀತು ? ನಮ್ಮ ಎಳೆಯರಲ್ಲಿ ಇಂದು, ರಂಗದ ಬಗೆಗೆ ಅಪಾರವಾದ ಉತ್ಸಾಹ ಕಂಡುಬರುತ್ತಿದೆ. ಇದರಿಂದಾಗಿ ಕನ್ನಡರಂಗ ಅಂದಿನ ಮಹಾವೈಭವವನ್ನು ಮತ್ತೆ ಮೆರೆಯಿಸುತ್ತದೆ ಎಂಬ ನಂಬಿಕೆಯೂ ನನಗಿದೆ.

ನನ್ನ ಬಣ್ಣದ ಬದುಕನ್ನು ತಮ್ಮಲ್ಲಿ ತೋಡಿಕೊಂಡಿದ್ದೇನೆ. ಇಂದೂ, ಎಂದೆಂದೂ, ನನಗೆ ತೃಪ್ತಿ ಸಂತೋಷಗಳನ್ನು ಕೊಡುವುದೆಂದರೆ, ನನ್ನ ರಂಗಜೀವನದ ಸಾರ್ಥಕ್ಯಕ್ಕೆ ಕಾರಣರಾದ ಅಂತಹ ಕಲಾವಿದ ತಂದೆ, ಅಷ್ಟೊಂದು ನೆರವು ಕೊಟ್ಟು ಮಾರ್ಗದರ್ಶನ ಮಾಡಿದ ಕಲಾಬಳಗ ಹಾಗೂ ಎಂತಹ ತಪ್ಪನ್ನೂ ಮನ್ನಿಸಿ, ಗುರುತಿಸಿದ ಸುಗುಣವನ್ನು ಮೆರೆಯಿಸುವ ಮನಸ್ಸಿನ ಕನ್ನಡ ಕುಲರಸಿಕರ ನಿತ್ಯ ಸ್ಮರಣೆ. ◆



ಚಿರಂಜೀವಿ ಕನ್ನಡ ಚಿತ್ರದಲ್ಲಿ ಮೃಕಂಡು ಪಾತ್ರಧಾರಿಯಾಗಿ ಪ್ರಸಿದ್ಧ ಸಾಹಿತಿ ದೇವುಡು ,
ಮರುದ್ವತಿ ಪಾತ್ರಧಾರಿಣಿಯಾಗಿ ಮಳವಳ್ಳಿ ಸುಂದರಮ್ಮನವರು






ರಂಗಭೂಮಿಯ ರಾಣಿ ಮಳವಳ್ಳಿ ಸುಂದರಮ್ಮನವರು
ವಿಧ - ವಿವಿಧ ದೃಶ್ಯಾವಳಿಗಳಲ್ಲಿ




ಮುಖ್ಯಮಂತ್ರಿ ಬಿ.ಡಿ. ಜತ್ತಿ ಅವರೊಂದಿಗೆ ಮಳವಳ್ಳಿ ಸುಂದರಮ್ಮ.
ನಾಟಕ ರತ್ನ ಗುಬ್ಬಿ ವೀರಣ್ಣ ಹಾಗೂ ಇತರ ಕಲಾವಿದರು ಚಿತ್ರದಲ್ಲಿದ್ದಾರೆ.



ನಟಸಾರ್ವಭೌಮ ಡಾ|| ರಾಜ್‌ಕುಮಾರ್, ಅಭಿನೇತ್ರಿ ಬಿ. ಜಯಮ್ಮನವರೊಂದಿಗೆ
ಮಳವಳ್ಳಿ ಸುಂದರಮ್ಮನವರು



ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರಿಂದ ಮೈಸೂರು ರಾಜ್ಯ ಸಂಗೀತ - ನೃತ್ಯ
ಅಕಾಡೆಮಿ ಪುರಸ್ಕಾರ ಪಡೆಯುತ್ತಿರುವ ಮಳವಳ್ಳಿ ಸುಂದರಮ್ಮ.



ಪುಟ್ಟರಾಜ ಗವಾಯಿಗಳು ಹಾಗೂ ಇತರ ಕಲಾವಿದರೊಂದಿಗೆ
ಮಳವಳ್ಳಿ ಸುಂದರಮ್ಮನವರು




ಭಾರತ ಯಾತ್ರಾ ಕೇಂದ್ರವು ಕರ್ನಾಟಕ ನಾಟಕ ಅಕಾಡೆಮಿ ನೆರವಿನಿಂದ ಬೆಂಗಳೂರಿನಲ್ಲಿ (12-09-2005) ಏರ್ಪಡಿಸಿದ್ದ ಮಳವಳ್ಳಿ ಸುಂದರಮ್ಮನವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಹಿರಿಯ ರಂಗ ಕಲಾವಿದ ಆರ್. ಪರಮಶಿವನ್ ಹಾಗೂ ಸುಂದರಮ್ಮನವರ ಸೊಸೆ ಸರೋಜಮ್ಮನವರನ್ನು ಸನ್ಮಾನಿಸಲಾಯಿತು




ಸಮಾರಂಭವನ್ನು ಸ್ತ್ರೀ ನಾಟಕ ಮಂಡಳಿಯ ಆರ್. ನಾಗರತ್ನಮ್ಮ ಉದ್ಘಾಟಿಸಿದರು. ಕೆ.ವಿ. ನಾಗರಾಜಮೂರ್ತಿ, ಗಿರಿಜಾ ಲೋಕೇಶ್, ಮುಖ್ಯಮಂತ್ರಿ ಚಂದ್ರು, ಶ್ರೀನಿವಾಸ ಜಿ. ಕಪ್ಪಣ್ಣ, ವಿ. ಎನ್. ಸುಬ್ಬರಾವ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಮಳವಳ್ಳಿ ಸುಂದರಮ್ಮನವರ
ಶ್ರೀ ಚಾಮುಂಡೇಶ್ವರಿ ನಾಟಕ ಸಭಾದ ಕಾರ್ಯನಿರ್ವಾಹ
ಶ್ರೀಕೃಷ್ಣ ಖ್ಯಾತಿಯ ಚಿಕ್ಕಬಸವರಾಜು



ಮಳವಳ್ಳಿ ಸುಂದರಮ್ಮನವರ ತಂದೆ
ನಾದಯೋಗಿ ಪಿಟೀಲು ಮಳವಳ್ಳಿ ಸುಬ್ಬಣ್ಣನವರು





ಮಳವಳ್ಳಿ ಸುಂದರಮ್ಮನವರೊಂದಿಗೆ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿದ್ದ

ನಾಗೇಶರಾಯರು

ಕೊಟ್ಟೂರಪ್ಪನವರು

ಅನ್ವರ್ಥಕ ನಾಮ
ಮಳವಳ್ಳಿ ಸುಂದರಮ್ಮ





ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮ

